

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 48 ನವೆಂಬರ್ 24-30, 1997 ಬೆಲೆ ರೂ. 2.00

ಹತಾಶ ಕಾಂಗ್ರೆಸ್ಸಿಗರ ಆಟವನ್ನು ಜನ ಗಮನಿಸುತ್ತಿದ್ದಾರೆ

ರಾಜೀವ್ ಗಾಂಧಿಯವರ ಹತ್ಯೆಯಲ್ಲಿ ಡಿ.ಎಂ.ಕೆ ಯ ಕೈವಾಡವಿದೆಯೆಂಬ ಅಂಶ ಜೈನ್ ಆಯೋಗದ ಮಧ್ಯಂತರ ವರದಿಯಲ್ಲೆಲ್ಲೂ ಕಂಡು ಬಂದಿಲ್ಲ. ಆದ್ದರಿಂದ ಕೇಂದ್ರ ಸಂಪುಟದಿಂದ ಡಿ.ಎಂ.ಕೆ. ಮಂತ್ರಿಗಳನ್ನು ತೆಗೆದುಹಾಕಲು ಕಾಂಗ್ರೆಸ್ಸಿನ ಒತ್ತಾಯ ಸಂಪೂರ್ಣವಾಗಿ ಅರ್ಥಹೀನ , ಅದು ರಾಜಕೀಯ ದುರುದ್ದೇಶದಿಂದ ಕೂಡಿದ್ದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಆಯೋಗದ ವರದಿಯನ್ನು ತನ್ನ ಸಂಕುಚಿತ ಉದ್ದೇಶಗಳಿಗೆ ಬಳಸಿಕೊಳ್ಳಲು ಹತಾಶ ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಇದನ್ನು ಸಿಪಿಐ(ಎಂ) ವಿರೋಧಿಸುತ್ತದೆ ಎಂದು ಪೊಲಿಟ್‌ಬ್ಯೂರೋ ಹೇಳಿಕೆ ಸ್ಪಷ್ಟಪಡಿಸಿದೆ. ಹೀಗೆ ಸಂಯುಕ್ತ ರಂಗ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳ ಮೂಲಕ ವಾಸ್ತವವಾಗಿ ಕಾಂಗ್ರೆಸ್ ಬಿಜೆಪಿಗೆ ನೆರವಾಗುತ್ತಿದೆಯಷ್ಟೆ. ಸಂಯುಕ್ತ ರಂಗ ಕಾಂಗ್ರೆಸ್ಸಿನ ಇಂತಹ ತಂತ್ರಗಳನ್ನು ದೃಢವಾಗಿ ತಿರಸ್ಕರಿಸುತ್ತದೆ, ದೇಶದ ಜನ ಕಾಂಗ್ರೆಸ್ಸಿನ ಈ ಆಟವನ್ನು ಅರಿತುಕೊಳ್ಳುತ್ತಾರೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಎಚ್ಚರಿಸಿದೆ. ಇದೇ ರೀತಿ ಇತರ ಎಲ್ಲಾ ಎಡಪಕ್ಷಗಳೂ ಕಾಂಗ್ರೆಸ್ಸಿನ ಬೆದರಿಕೆಯನ್ನು ತಿರಸ್ಕರಿಸಿವೆ.

ಜೈನ್ ಆಯೋಗದ ಮಧ್ಯಂತರ ವರದಿ ಹಾಗೂ ಆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳ ಕುರಿತಾದ ವರದಿಯನ್ನು ತಾನಿತ್ತ ಮಾತಿನಂತೆ ಚಳಿಗಾಲದ ಅಧಿವೇಶನದ ಮೊದಲ ದಿನವೇ ಸಂಯುಕ್ತರಂಗ ಸರಕಾರ ಸಂಸತ್ತಿನ ಮುಂದಿಟ್ಟಿತು. ಈ ಬಗ್ಗೆ ರಾಜಕೀಯ ಪಕ್ಷಗಳಿಗೆ ಅಧ್ಯಯನ ನಡೆಸಲು ಸಾಕಷ್ಟು ಸಮಯ ನೀಡಿ ಒಂದು ಸಮಗ್ರ ಚರ್ಚೆ ನಡೆಸುವಂತಾಗಬೇಕು ಎಂದು ಎಡಪಕ್ಷಗಳು ಈ ಮೊದಲೇ ಅಭಿಪ್ರಾಯ ಪಟ್ಟಿದ್ದವು.

ಕಾಂಗ್ರೆಸ್ ಬೆದರಿಕೆ ತಂತ್ರ

ಆದರೆ ಕಾಂಗ್ರೆಸ್ ಸದಸ್ಯರು ಈ ಬಗ್ಗೆ ಚರ್ಚಿಸಲು ಸಿದ್ಧರಿದ್ದಂತಿಲ್ಲ. ಮೊದಲ ಎರಡೂ ದಿನಗಳೂ ಗಲಭೆ ನಡೆಸಿ ಸಭೆಗಳನ್ನು ಮುಂದೂಡುವಂತೆ ಮಾಡಿದರು. ಈ ನಡುವೆ ಡಿ.ಎಂ.ಕೆ. ಮಂತ್ರಿಗಳನ್ನು ತೆಗೆದುಹಾಕದಿದ್ದರೆ ಸರಕಾರಕ್ಕೆ ಬೆಂಬಲವನ್ನು ಹಿಂತೆಗೆದುಕೊಳ್ಳುವುದಾಗಿ ಕಾಂಗ್ರೆಸ್ ಸಂಸದೀಯ ಪಕ್ಷ ಬೆದರಿಸಿತು. ಆದರೆ ಈ ಬೆದರಿಕೆಗೆ ಮಣಿಯಲು ಸಂಯುಕ್ತ ರಂಗ ನಿರಾಕರಿಸಿದೆ. ಸಂಯುಕ್ತ ರಂಗದ ಪ್ರಮುಖರ ಸಭೆ ಕಾಂಗ್ರೆಸ್ಸಿನ ಈ ಬೆದರಿಕೆಯನ್ನು ಖಡಾಖಂಡಿತವಾಗಿ ತಿರಸ್ಕರಿಸಿದೆ.

ಕಾಂಗ್ರೆಸ್ಸಿನ ಇಂತಹ ಬೆದರಿಕೆಯ ತಂತ್ರಗಳು ಅದರ ಹತಾಶೆಯನ್ನು ತೋರುತ್ತದಲ್ಲದೆ, ಬಿಜೆಪಿಗೆ ಅದು ನೆರವಾಗುತ್ತದೆ ಎಂದು ಸಿಪಿಐ(ಎಂ) ಮುಖಂಡರು ಎಚ್ಚರಿಸಿದ್ದಾರೆ. ಕಾಂಗ್ರೆಸ್ ತನ್ನ ಹಠಮಾರಿತನವನ್ನು ಬಿಡದಿದ್ದರೆ ಉಳಿದಿರುವ ಮಾರ್ಗ ಚುನಾವಣೆಯೊಂದೇ ಎಂದೂ ಅವರು ಎಚ್ಚರಿಸಿದ್ದಾರೆ. ಜೈನ್ ವರದಿಯಲ್ಲಿರುವ ಇನ್ನಷ್ಟು ಅಂಶಗಳು ಬಹಿರಂಗಗೊಳ್ಳುವ ಭಯದಿಂದಾಗಿ ಕಾಂಗ್ರೆಸ್ಸಿಗರು ಸಂಸತ್ತಿನಲ್ಲಿ ಈ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತಿಲ್ಲ. ತನ್ನ ಮಾಜಿ ಅಧ್ಯಕ್ಷರ ಹತ್ಯೆಯ ಪಿತೂರಿಯಲ್ಲಿ ಸೇರಿದ್ದರೆಂಬ ಶಂಕೆಗೊಳಗಾಗಿರುವವರನ್ನು ಪ್ರಧಾನ ಕಾರ್ಯದರ್ಶಿಯೊಬ್ಬರನ್ನಾಗಿ ನೇಮಿಸಿರುವ ಕಾಂಗ್ರೆಸ್ ಪಕ್ಷಕ್ಕೆ ಡಿ.ಎಂ.ಕೆ. ಮಂತ್ರಿಗಳನ್ನು ಈ ಕಾರಣಕ್ಕೆ ಕೈಬಿಡಬೇಕೆಂದು ಆಗ್ರಹಿಸುವ ನೈತಿಕ ಹಕ್ಕಾದರೂ ಏನಿದೆ? - ಇದು ಹಲವರು ಕೇಳುವ ಪ್ರಶ್ನೆ.

ಬಿಜೆಪಿಯ 'ಆಪದ್ಧರ್ಮ'!

ಇನ್ನೊಂದೆಡೆ ಅಧಿಕಾರದ ಪಟ್ಟ ಗಿಟ್ಟಿಸಲು 'ಆಪದ್ಧರ್ಮ'ದ ಹೆಸರಲ್ಲಿ ಯಾವ ಕೀಳುಮಟ್ಟಕ್ಕಿಳಿಯಲೂ ಸಿದ್ಧ ಎಂದು ಬಹಿರಂಗವಾಗಿಯೇ ನಾಚಿಕೆಯಿಲ್ಲದೆ ಒಪ್ಪಿಕೊಳ್ಳುತ್ತಿರುವ ಬಿಜೆಪಿ ಮುಖಂಡರು ೧೩ ದಿನಗಳ ವಿಫಲ ಪ್ರಯತ್ನವನ್ನು ಮರೆತು ಮತ್ತೊಮ್ಮೆ ಕೇಂದ್ರದಲ್ಲಿ ಸರಕಾರ ರಚಿಸುವ ಪ್ರಯತ್ನದಲ್ಲಿದ್ದಾರೆ. ಅತ್ತ ಕಾಂಗ್ರೆಸ್ಸಿಗರು ಒಂದು ರೀತಿಯ ಆಟ ಆಡುತ್ತಿದ್ದರೆ, ಇತ್ತ ಕಾವಿ ಪಡೆಗಳು ಇಬ್ಬಗೆಯ ಆಟ ಆಡುತ್ತಿದ್ದಾರೆ. ಬಿಜೆಪಿ ಮಂದಿ ಹಿಂದುತ್ವದ ಘೋಷಣೆಯನ್ನು ಸದ್ಯ ಬದಿಗಿಟ್ಟು ಎಷ್ಟು ಸಾಧ್ಯವೋ ಅಷ್ಟು ಪಾಲುದಾರರನ್ನು ಸೆಳೆದುಕೊಂಡು ಉತ್ತರ ಪ್ರದೇಶದ ಪ್ರಯೋಗವನ್ನು ಕೇಂದ್ರದಲ್ಲಿ ಪುನರಾವರ್ತಿಸಲು ಪ್ರಯತ್ನಿಸುತ್ತಿದ್ದಾರೆ. ಅದೇ ವೇಳೆಗೆ ಕಾವಿ ಪಡೆಯ ಇತರರು 'ಹಿಂದುತ್ವ'ದ ಘೋಷಣೆಯನ್ನು ಜೀವಂತವಾಗಿಡಲು ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದಾರೆ. ಬಾಬ್ರಿಮಸೀದಿ ಧ್ವಂಸದ ೫ನೇ ವಾರ್ಷಿಕದ ಮುನ್ನಾದಿನ ಅಯೋಧ್ಯೆಗೆ ತಲುಪುವಂತೆ ಯಾತ್ರೆಯೊಂದನ್ನು ನಡೆಸುವುದಾಗಿ ಅವರು ಈಗಾಗಲೇ ಸಾರಿದ್ದಾರೆ. ದೇಶದ ಪುನರುಜ್ಜೀವನಕ್ಕೆ, ಸಾಮಾಜಿಕ-ಆರ್ಥಿಕ ಜೀವನದ ಸುಧಾರಣೆಗೆ ಯಾವುದೇ ವಿಶ್ವಾಸಾರ್ಹ ಆರ್ಥಿಕ ಕಾರ್ಯಕ್ರಮವಿಲ್ಲದ ಬಿಜೆಪಿ - ಆರ್‌ಎಸ್‌ಎಸ್ -ವಿಹೆಚ್‌ಪಿ ಕೂಟ ಮತ್ತೊಮ್ಮೆ ಕೇಂದ್ರದಲ್ಲಿನ ಅಸ್ಥಿರತೆಯನ್ನು ಬಳಸಿ ಜನಗಳ ಅಸಂತೃಪ್ತಿಯನ್ನು ವಿಚ್ಛಿದ್ರಕಾರಿ ಪ್ರಶ್ನೆಗಳತ್ತ ತಿರುಗಿಸಿ ಆ ಮೂಲಕ ಅಧಿಕಾರ ಗಿಟ್ಟಿಸುವ ಹವಣಿಕೆಯಲ್ಲಿದೆ. ಅಧಿಕಾರದ ಈ ಹುಚ್ಚು ದೇಶವನ್ನು ಎಂತಹ ಪ್ರಪಾತದ ಅಂಚಿನಲ್ಲಿ ತಂದು ನಿಲ್ಲಿಸುತ್ತಿದೆ ಎಂಬ ಪರಿವೆಯೇ ಈ ಕಾವಿಪಡೆಗಳಿಗೆ ಇಲ್ಲ. ಆದ್ದರಿಂದ ಈ ಎರಡೂ ರೀತಿಯ ಆಟಗಳನ್ನು ವಿಫಲಗೊಳಿಸಲು ಎಡ, ಪ್ರಜಾಪ್ರಭುತ್ವವಾದಿ ಮತ್ತು ಧರ್ಮನಿರಪೇಕ್ಷ ಶಕ್ತಿಗಳು ಜಾಗೃತಗೊಂಡು ಮಧ್ಯಪ್ರವೇಶಿಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸುರ್ಜಿತ್ ಲೇಖನವೊಂದರಲ್ಲಿ ಅಭಿಪ್ರಾಯಪಟ್ಟಿದ್ದಾರೆ. ○

ಸಂಸತ್ತಿನಲ್ಲಿ ಜನಗಳ ಸಮಸ್ಯೆಗಳನ್ನೆತ್ತುವ ಎಡಪಕ್ಷಗಳು

ಕಾಂಗ್ರೆಸ್ ಮತ್ತು ಬಿಜೆಪಿ ಸಂಸತ್ತಿನ ಚಳಿಗಾಲದ ಅಧಿವೇಶನದ ಮುನ್ನಾದಿನ ಯಾರನ್ನು ಉರುಳಿಸಿ, ಯಾರನ್ನು ವಿವಿಧ ಆಮಿಷಗಳ ಮೂಲಕ ಆಕರ್ಷಿಸಿ ಅಧಿಕಾರದ ಗದ್ದುಗೆಗೇರಬಹುದು ಎಂದು ಲೆಕ್ಕಾಚಾರ ಹಾಕುತ್ತಿರುವಾಗ ಈ ಎಲ್ಲಾ ನೀಚ ಆಟಗಳಿಂದ ದೂರನಿಂತಿರುವ ಎಡ ಪಕ್ಷಗಳು ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲಿ ಯಾವ ಗಂಭೀರ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಬೇಕು ಎಂದು ಚರ್ಚೆಯಲ್ಲಿ ತೊಡಗಿದ್ದರು. ಈ ಚರ್ಚೆಯ ನಂತರ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಎಡ ಪಕ್ಷಗಳ ಪ್ರಮುಖ ಸಂಸತ್ ಸದಸ್ಯರು ತಾವು ಎತ್ತಬೇಕೆಂದಿರುವ ಪ್ರಶ್ನೆಗಳ ಬಗ್ಗೆ ತಿಳಿಸಿದ್ದಾರೆ.

ದೇಶದ ಸಾರ್ವತ್ರಿಕ ಆರ್ಥಿಕ ಸ್ಥಿತಿ-ಗತಿಯ ಬಗ್ಗೆ ಸಮಗ್ರ ಚರ್ಚೆ ನಡೆಯುವಂತೆ ಜ್ವಲಂತ ಆರ್ಥಿಕ ಪ್ರಶ್ನೆಗಳನ್ನು ಎತ್ತಲು ಎಡ ಪಕ್ಷಗಳ ಸಂಸತ್ ಸದಸ್ಯರು ನಿರ್ಧರಿಸಿದ್ದಾರೆ. ಆರ್ಥಿಕ ಬೆಳವಣಿಗೆಯ ದರ, ಕೈಗಾರಿಕಾ ಬೆಳವಣಿಗೆ, ಬಂಡವಾಳ ವಿನಿವೇಶನ, ಹೊಸ ತೆರಿಗೆ ಕ್ರಮಗಳಿಂದ ಬಂದ ರೆವಿನ್ಯೂ ಆದಾಯ, ನಿರುದ್ಯೋಗ ಇತ್ಯಾದಿಗಳ ನಿರ್ದಿಷ್ಟ ಚರ್ಚೆ ನಡೆಯಲೇಬೇಕೆಂದು ಅವರು ಒತ್ತಾಯಿಸಿದ್ದಾರೆ. ಸಂಸತ್ತಿನ ಈ ಅಧಿವೇಶನ ಜನಗಳ ಪ್ರಮುಖ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕು ಎಂದು ಹೇಳುವ ಈ ಎಡಪಕ್ಷಗಳ ಸಂಸತ್ ಸದಸ್ಯರು ರೇಶನ್ ವ್ಯವಸ್ಥೆಯಲ್ಲಿ ಕಡುಬಡವರಿಗೆ ಪರಿಹಾರ ನೀಡುವ ಹೊಸ ಯೋಜನೆ ಜಾರಿಗೆ ಬಂದಿಲ್ಲ, ಹಳೆಯ ರೇಶನ್ ವ್ಯವಸ್ಥೆಯನ್ನು ಕಳಚಿ ಹಾಕಲಾಗುತ್ತಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇಂತಹ ನಿಲುವನ್ನು ಕೈಬಿಡಬೇಕು, ಸೆಣಬು, ರಬ್ಬರ್ ಇತ್ಯಾದಿ ವಾಣಿಜ್ಯ ಬೆಳೆಗಳ ಬೆಲೆಗಳು ಕುಸಿದು ರೈತರು ಕಂಗಾಲಾಗಿದ್ದಾರೆ. ಸಾರ್ವಜನಿಕ ವಲಯದ ಶೇರುಗಳ ಮಾರಾಟ, ಕೈಗಾರಿಕೆಗಳ ಮುಚ್ಚುಕೆಯಿಂದ ಕಾರ್ಮಿಕರು, ನೌಕರರು ಭಾರೀ ಕಷ್ಟಕೋಟಲೆಗಳನ್ನೆದುರಿಸುತ್ತಿದಾರೆ. ಸಣ್ಣ ಉದ್ದಿಮೆಗಳು ಗಂಡಾಂತರದಲ್ಲಿವೆ. ಸಂಸತ್ತಿನ ಈ ಅಧಿವೇಶನದಲ್ಲಿ ಎಲ್ಲಾ ಪಕ್ಷಗಳು ಈ ಬಗ್ಗೆ ಚರ್ಚಿಸಬೇಕು ಎಂದು ಎಡಪಕ್ಷಗಳ ಸಂಸದೀಯ ಮುಖಂಡರು ಆಗ್ರಹ ಪಡಿಸಿದ್ದಾರೆ.

ವಿಶ್ವ ವ್ಯಾಪಾರ ಸಂಘಟನೆ WTO ನಲ್ಲಿ ವ್ಯಾಪಾರ ಸಂಬಂಧೀ ಪ್ರಶ್ನೆಗಳು ಎದ್ದು ಬರುತ್ತಿದ್ದು ಅವು ಭಾರತದ ಆರ್ಥಿಕದ ಮೇಲೆ ದುಷ್ಪರಿಣಾಮ ಬೀರುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದ ಎಡಪಕ್ಷಗಳ ಮುಖಂಡರು ಈ ಬಗ್ಗೆಯೂ ಸಂಸತ್ತು ಗಮನ ಹರಿಸಬೇಕು ಎಂದು ಬಯಸಿದ್ದಾರೆ.

ಸಾರ್ವಜನಿಕ ಆರೋಗ್ಯ ರಂಗದಲ್ಲಿ ಸಾಕಷ್ಟು ಹಣ ತೊಡಗಿಸದೇ ಇರುವ ನೀತಿಗಳಿಂದಾಗಿ ಮತ್ತೆ ಮಲೇರಿಯಾ, ಡೆಂಗು ಜ್ವರಗಳಂತಹ ಸಾಂಕ್ರಾಮಿಕಗಳು ಜನರ ಆರೋಗ್ಯಕ್ಕೆ ಗಂಭೀರ ಆತಂಕ ತಂದೊಡ್ಡಿವೆ. ಇದು ಸಂಸತ್ತು ಚರ್ಚಿಸಲೇಬೇಕಾದ ಇನ್ನೊಂದು ತುರ್ತು ಪ್ರಶ್ನೆ. ಇದಲ್ಲದೆ ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಮೀಸಲಾತಿ, ಕೋಟ್ಯಾಂತರ ಕೃಷಿ ಕಾರ್ಮಿಕರ ರಕ್ಷಣೆಗೆ ಸಮಗ್ರ ಕೇಂದ್ರೀಯ ಶಾಸನ ಇವನ್ನು ಈ ಅಧಿವೇಶನದಲ್ಲಾದರೂ ಅಂಗೀಕರಿಸಲೇಬೇಕು, ಅಲ್ಲದೆ ರಾಜಕೀಯ ಅಪರಾಧೀಕರಣ, ಹಣಬಲದ ಪ್ರಭಾವ, ಭ್ರಷ್ಟಾಚಾರ ಆಡಳಿತದಲ್ಲಿ ಪಾರದರ್ಶಕತೆಯ ಪ್ರಶ್ನೆ ಇವೆಲ್ಲಾ ದೇಶದ ರಾಜಕೀಯ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಪಣಕೊಡ್ಡಿವೆ. ಇದನ್ನು ಎದುರಿಸಲು ಲೋಕಪಾಲ ಶಾಸನ, ಚುನಾವಣಾ ಸುಧಾರಣೆಗಳತ್ತ ತುರ್ತಾಗಿ ಗಮನ ಹರಿಸಬೇಕು ಎಂದೂ ಎಡಪಕ್ಷಗಳ ಪ್ರಮುಖ ಸಂಸತ್ ಸದಸ್ಯರಾದ ಸಿಪಿಐ(ಎಂ)ನ ಸೋಮನಾಥ್ ಚಟರ್ಜಿ, ಇ.ಬಾಲಾನಂದನ್, ಎಸ್.ರಾಮಚಂದ್ರನ್ ಪಿಳ್ಳೈ, ಬಿಪ್ಲವ ದಾಸ್ ಗುಪ್ತಾ ಹಾಗೂ ನೀಲೋತ್ಪಲ ಬಸು, ಸಿಪಿಐನ ಗೀತಾ ಮುಖರ್ಜಿ ಹಾಗೂ ಗುರುದಾಸ್ ದಾಸ್‌ಗುಪ್ತಾ, ಆರ್.ಎಸ್.ಪಿ. ಯ ಸನತ್ ಮಂಡಲ್ ಹಾಗೂ ಪ್ರಮಾತೇಶ್ ಮುಖರ್ಜಿ ಮತ್ತು ಫಾರ್ವರ್ಡ್ ಬ್ಲಾಕಿನ ಅಮರ್ ರಾಯ್ ಪ್ರಧಾನ್ ಒತ್ತಾಯಿಸಿದ್ದಾರೆ. (ಐಎನ್‌ಎನ್)

ಗೋಬೆಲ್ಸ್‌ನನ್ನೂ ಮೀರಿಸಿದ ಬಿಜೆಪಿ ಮುಖಂಡರೇ, ಭಲೇ, ಭಲೇ!

ಎನ್.ಕೆ.ಉಪಾಧ್ಯಾಯ

ಜರ್ಮನಿಯ ಅಡಾಲ್ಫ್ ಹಿಟ್ಲರನ ಪ್ರಚಾರಮಂತ್ರಿ ಗೋಬೆಲ್ಸ್‌ನ ಪ್ರಚಾರ ತಂತ್ರವನ್ನು ಎಲ್ಲ ಸಾಮ್ರಾಜ್ಯಶಾಹಿ ರಾಷ್ಟ್ರಗಳೂ ಅನುಸರಿಸುತ್ತಿದ್ದು, ಯಾವುದೇ ಅಪಪ್ರಚಾರ ಪರಿಣಾಮಕಾರಿಯಾಗಿ ಮೂಡಿಬಂದರೆ 'ನೋಡದು ಗೊಬೆಲ್ಸ್ ಪ್ರಚಾರ' ಎಂದು ಜನರಾಡಿಕೊಳ್ಳುತ್ತಿರುತ್ತಾರೆ. ಗೋಬೆಲ್ಸ್ ತನ್ನ(ಅಪ) ಪ್ರಚಾರ ವೈಖರಿಯನ್ನು ಕಮ್ಯುನಿಸಂ ವಿರುದ್ಧ ನಾಝಿಪರ ಉಪ ಯೋಗಿಸುತ್ತಿದ್ದ. ಆದರೆ ಕೊನೆಗೆ ಗೋಬೆಲ್ಸ್ ಪ್ರಚಾರ 'ನಾಝಿವಾದ'ವನ್ನು ನಾಶಮಾಡಿತು ಕಮ್ಯುನಿಸಂನ್ನು ಮೆರೆಸಿತು. ಅದು 30 ರ ದಶಕದಲ್ಲಿ. ಈಗ 90 ದಶಕದಲ್ಲಿ ಬಿಜೆಪಿ ಅಧ್ಯಕ್ಷ ಲಾಲ್ ಕೃಷ್ಣ ಅಡ್ವಾನಿಯವರು ಹಿಟ್ಲರನ ಪ್ರಚಾರ ಮಂತ್ರಿ ಗೋಬೆಲ್ಸ್‌ನ್ನು ಮೀರಿಸುವ ಪ್ರಚಾರ ತಂತ್ರ ಕೈಗೊಂಡಿದ್ದಾರೆ.

'ಕೇಂದ್ರದಲ್ಲಿ ಅಧಿಕಾರ ಗ್ರಹಣಕ್ಕೆ ಕಾಲ ಪರಿಪಕ್ವವಾಗಿದೆ. ಬಿಜೆಪಿ ಅಧಿಕಾರ ಗ್ರಹಣಕ್ಕೆ ತಯಾರಿದೆ' ಎಂದು ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಹೇಳಿದ್ದಾರೆ. ಹದಿ ನೆಂಟು ತಿಂಗಳು ಅಲ್ಪಾವಧಿಯಲ್ಲೇ ಮತ್ತೊಮ್ಮೆ ಚುನಾವಣೆಯನ್ನೆದುರಿಸಲು ಅಂಜಿರುವ 35 ಕ್ಕಿಂತಲೂ ಹೆಚ್ಚು ಕಾಂಗ್ರೆ ಎಂ.ಪಿ.ಗಳು ತಮ್ಮನ್ನು ಸಂಪರ್ಕಿಸಿದ್ದಾರೆಂದೂ ಬಹಿರಂಗಪಡಿಸಿದ್ದಾರೆ. ಮೊನ್ನೆ ತಾನೆ ಬಿಎಸ್‌ಪಿಯ ಅಧ್ಯಕ್ಷೆ ಮಾಯಾವತಿ ತಮ್ಮ ಬೆಂಬಲವನ್ನು ವಾಪಸ್ ಪಡೆದು ಕಾಂಗ್ರೆ, ಬಿಎಸ್‌ಪಿಗಳ ಶಾಸಕರನ್ನು ಪಕ್ಷಾಂತರಗೊಳಿಸಿಕೊಂಡು ಬಿಜೆಪಿ ಯು.ಪಿ.ಯಲ್ಲಿ ಅಧಿಕಾರ ಗ್ರಹಣ ಮಾಡಿದ ನಂತರ ವಾಜಪೇಯಿ, ಅಡ್ವಾಣಿ ಹಾಗೆಯೇ ಇತರ ಬಿಜೆಪಿ ಮುಖಂಡರೆಲ್ಲ ಇಂಥ ಮುತ್ತುಗಳನ್ನೇ ಉದುರಿಸಿದ್ದರು. ಕುರುಕ್ಷೇತ್ರ ಯುದ್ಧ ನಡೆಯುತ್ತಿದ್ದಾಗ ಗುರುಗಳ-ಹಿರಿಯರ ಸಂಹಾರ ಆಗುತ್ತಿರುವುದನ್ನು ಕಂಡು ಭಯಭೀತನಾದ ಅರ್ಜುನನನ್ನು ಸಾಂತ್ವನಗೊಳಿಸಲು ಕೃಷ್ಣಪರಮಾತ್ಮ 'ಎಲೋ ಅರ್ಜುನಾ ನೋಡಿಲ್ಲಿ' ಎಂದು ಹೇಳಿ ತನ್ನ ಹೊಟ್ಟೆಯನ್ನು ಹರಿದು ವಿಶ್ವ ದಿಗ್ದರ್ಶನ ಗೊಳಿಸಿದಂತೆ ಜನತೆಗೆ ತಮ್ಮ ಅಧಿಕಾರ ಗ್ರಹಣದ ತಂತ್ರವನ್ನೆಲ್ಲ ವಿಶ್ವ ಪ್ರದರ್ಶನಗೊಳಿಸಿದರು. ಒಂದು ಸುಳ್ಳನ್ನು ಹತ್ತು ಸಲ ಹೇಳಿದರೆ ಜನ ಅದನ್ನು ನಂಬುತ್ತಾರೆಂದು ಗ್ಲೋಬೆಲ್ ಹೇಳಿದ್ದ. ಕೊನೆಗೆ ತಾನೂ ಹೋದ , ನಾಝಿವಾದವೂ ನಾಶವಾಯಿತು.

ಪಕ್ಷಾಂತರಗೊಂಡ ಎಲ್ಲಾ 22 ಕಾಂಗ್ರೆ ಶಾಸಕರು ಮಂತ್ರಿ ಪದವಿ ಗಿಟ್ಟಿಸಿರುವಾಗ ನಾವ್ಯಾಕೆ ಅಂಥ ಅವಕಾಶ ಕಳೆದುಕೊಳ್ಳಬೇಕೆಂದು ಕರ್ನಾಟಕದ 35 ಕ್ಕೂ ಹೆಚ್ಚು ಶಾಸಕರು ತಮ್ಮನ್ನು ಸಂಪರ್ಕಿಸಿದ್ದಾರೆಂದೂ ಅದಿನ್ನೂ ಹೆಚ್ಚಾಗಿ ತಾವು ಅಧಿಕಾರಕ್ಕೆ ಬರುವ ಸಾಧ್ಯತೆಯನ್ನು ತೋರಿಸುತ್ತಿದೆಯೆಂದು ಲಾಲ್ ಕೃಷ್ಣ ಅಡ್ವಾನಿಯವರು ಬೆಂಗಳೂರಿನಲ್ಲಿ ಭವಿಷ್ಯವಾಣಿ ನುಡಿದಿದ್ದಾರೆ.

ತಮ್ಮ ಪಕ್ಷದ ಜನಪರ ಧೋರಣೆ, ದೇಶಭಕ್ತಿ, ವೈಶಿಷ್ಟ್ಯಪೂರ್ಣ ಸಾಂಸ್ಕೃತಿಕ ರಾಷ್ಟ್ರೀಯವಾದ ಹಾಗೂ ಸತತ ಪ್ರಯತ್ನಗಳಿಂದಾಗಿ ಇಂದು ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲೂ ಯಶಸ್ವಿಯಾಗಿದೆಯಂತೆ. ದಕ್ಷಿಣಭಾರತದ ನಾಲ್ಕೈದು ರಾಜ್ಯಗಳಲ್ಲಿ ಪಕ್ಷ ಯಶಸ್ವಿಗೊಳ್ಳಲು ಕರ್ನಾಟಕವೇ ದಿಗ್ವಿಜಯದ ಹೆಬ್ಬಾಗಿಲು ಆಗಿದೆಯಂತೆ. ಕರ್ನಾಟಕದಲ್ಲಿ ದಿಗ್ವಿಜಯ ಸ್ತಂಭದ ಅಡಿಗಲ್ಲಾಗಿ ಪರಿಶಿಷ್ಟಜಾತಿ ಮತ್ತು ವರ್ಗ, ಕೊಳೆಗೇರಿ ನಿವಾಸಿಗಳ ಅಭ್ಯುದಯದ ಮೂಲಕ ಹೆಬ್ಬಾಗಿಲನ್ನು ಕಟ್ಟಲಾಗುವುದೆಂದು ಅದರ ಉದ್ಘಾಟನೆಯನ್ನು ರಾಜ್ಯಾಧ್ಯಕ್ಷ ಯಡಿಯೂರಪ್ಪನವರಿಂದ ನೆರವೇರಿಸಲಾಗುವುದೆಂದೂ ಹೇಳಿದರು. ತಮ್ಮದೊಂದೇ ಜಾತ್ಯಾತೀತ ಪಕ್ಷವೆಂದು ಹೇಳಿಕೊಳ್ಳುವ ಅಡ್ವಾನಿಯವರು ಹುಬ್ಬಳ್ಳಿಯ ಈದ್ಗಾ ಮೈದಾನಿನಲ್ಲಿ ತಮ್ಮ ಪಕ್ಷ ನಡೆಸಿದ ಧ್ವಜಾರೋಹಣ ಕಾರ್ಯಕ್ರಮವನ್ನು ಶ್ಲಾಘಿಸಿದರು. ಅನಂತರ ನಡೆದ ಗೋಳೀಬಾರಿಗೆ, ನರಹತ್ಯೆಗೆ ತಮ್ಮ ಆ ಕೃತ್ಯವೇ ಕಾರಣವೆಂಬುದನ್ನು ಅಪ್ರತ್ಯಕ್ಷವಾಗಿ ಒಪ್ಪಿಕೊಂಡಂತಾಗಲಿಲ್ಲವೇ? ಚುನಾವಣೆಯಲ್ಲಿ ಮತಗಳಿಸಲು ಕಾಂಗ್ರೆ ಮತ್ತು ಜನತಾ ಪಕ್ಷಗಳು ಜಾತೀವಾದವನ್ನೇ ಪ್ರಧಾನ ಅಸ್ತ್ರವನ್ನಾಗಿ ಮಾಡಿಕೊಂಡಿವೆ ಎಂದು ಆರೋಪಿಸುತ್ತ ಭಟ್ಕಳದ ಸಮಸ್ಯೆ ಹುಬ್ಬಳ್ಳಿಯ ಈದ್ಗಾ ಮೈದಾನ ಪ್ರಕರಣ ಉತ್ತರ ಪ್ರದೇಶದ ಬಾಬ್ರಿ ಮಸೀದಿ ಕೆಡವಿರುವುದೆಲ್ಲ ಮುಸಲ್ಮಾನರ ಮೇಲಿನ ಪ್ರೀತಿ ವಿಶ್ವಾಸದ ಪ್ರತೀಕವೇ ಎಂದು ಕೇಳಬೇಕಾಗಿದೆ. ಕರ್ನಾಟಕದ ಹಲವಾರು ಕಡೆಗಳಲ್ಲಾದ ಅಲ್ಪ ಮತಸ್ಥರ ಮೇಲೆ ನಡೆದ ದಂಗೆ, ಅತ್ಯಾಚಾರಗಳೆಲ್ಲಾ ಅವರ ಜನರಲ್ಲಿ ಸಾಮರಸ್ಯ ಮೂಡಿಸಬೇಕೆಂಬ ಹೇಳಿಕೆಗೆ ಪೂರಕವಾಗಿದೆಯೇ?

ಜನತಾ ಪಕ್ಷದಿಂದ ಪ್ರತ್ಯೇಕಗೊಂಡು ಬಿಜೆಪಿ ಸ್ಥಾಪನೆ ಮಾಡಿದಾಗ ಮಹಾತ್ಮ ಗಾಂಧಿ ಹಾಗೆಯೇ ಅವರ ಸಮಾಜವಾದವೇ ತಮ್ಮ ಗುರಿಯಾಗಿದೆಂದು ಸಾರಿದ ಅಡ್ವಾನಿಯವರು, ಅನಂತರ ಡಾ. ಅಂಬೇಡ್ಕರ ಅವರ 'ಶಿಷ್ಯ'ರಾಗಿ ಈಗ ಇಂದು ದೇಶದಲ್ಲಿ ಕ್ರಾಂತಿಯ ನಿಜವಾದ ಪ್ರವರ್ತಕರಾದ ಕನಕದಾಸ, ಬಸವೇಶ್ವರ, ನಾರಾಯಣ ಗುರು, ಅಂತವರ ಆದರ್ಶಗಳು ರಾಜಕೀಯ ಪಕ್ಷಗಳಿಗೆ ಮಾದರಿಯಾಗಲೆಂದು ಉಪದೇಶಿಸುತ್ತಿರುವ ಅಡ್ವಾನಿಯವರು ದಕ್ಷಿಣದ ದಾಸರ, ಪ್ರವರ್ತಕ ಪ್ರವಚನಕಾರರ ಹೆಸರುಗಳನ್ನುಚ್ಚರಿಸಿ ಮತಗಳಿಕೆಯ ಪ್ರಯತ್ನ ನಡೆಸಿದ್ದಾರೆ. ಇಲ್ಲಿಗೆ ಗಾಂಧಿಯನ್ನೂ, ಗಾಂಧಿವಾದದ ಸರ್ವೋದಯವನ್ನು ಕೈ ಬಿಟ್ಟಿದ್ದಾರೆ. ಏಕೆಂದರೆ ಅದು ಫಲ ನೀಡಲಿಲ್ಲ. ಭೂಮಿ ಬೆಲೆ ಗಗನದ ಎತ್ತರಕ್ಕೆ ನೆಗೆಯುತ್ತಿರುವ ಈ ದಿನಗಳಲ್ಲಿ ಕೊಳೆಗೇರಿಗಳಿಗೆ ಮಹತ್ವ ಬಂದಿದೆ. ಕೊಳಗೇರಿ ನಿವಾಸಿಗಳನ್ನು ಅವರ ಜಾಗಗಳಿಂದ ಉಚ್ಚಾಟಿಸಿ, ಆ ಪ್ರದೇಶವನ್ನು ಕೈಗಾರಿ ಕೋದ್ಯಮಿಗಳಿಗೇ, ಧನವಂತರಿಗೇ, ಮಾರಾಟ ಮಾಡಿ ಹಣಗಳಿಸುವ ಕಾಂಗ್ರೆ, ಬಿಜೆಪಿ ಶಾಸಕರು, ಕಾರ್ಪೊರೇಟರುಗಳು, ನಗರಸಭೆ ಸದಸ್ಯರೆಲ್ಲ ಕೊಳಗೇರಿ ಸಮ್ಮೇಳನಕ್ಕೆ ಜನ ಕೊಂಡು ತಂದವರಲ್ಲವೇ? ಇವರೆಲ್ಲಾ ಬಡ ಕೊಳಗೇರಿ ನಿವಾಸಿಗಳ ಉದ್ಧಾರಕರು. ಜಾತಿ ವೈಷಮ್ಯ ಮತ್ತು ಅಸ್ಪೃಶ್ಯತೆಗೆ ತಮ್ಮ ಪಕ್ಷ ಅವಕಾಶ ನೀಡುವುದಿಲ್ಲ ಎಂದು ಹೇಳಿದ್ದಾರೆ.

ಕ್ರಿಮಿನಲ್‌ಗಳು, ಕೊಲೆಗಡುಕರು, ದರೋಡೆಕೋರರೆಲ್ಲ ತಮ್ಮ ಪಕ್ಷದಿಂದ ಚುನಾವಣೆಗೆ ಸ್ಪರ್ಧಿಸಬಹುದು, ಮಂತ್ರಿಗಳಾಗಬಹುದು, ಪಕ್ಷಾಂತರ ಮಾಡಿಕೊಳ್ಳಬಹುದು. ಅವರೆಲ್ಲರೂ ಸ್ವಾಭಿಮಾನಿಗಳೆಂದು ಪರಿಗಣಿಸುವ ಬಿಜೆಪಿ ಅಧ್ಯಕ್ಷ ಎಲ್.ಕೆ. ಅಡ್ವಾನಿಯವರ ಮೊಗಲ್.ಎ.ಅಝುಂ ರಥಯಾತ್ರೆ ಮುಂದಿನ ವರ್ಷ ಪ್ರಾರಂಭದಲ್ಲಿ ಯಡಿಯೂರಪ್ಪನವರು ನಿರ್ಮಿಸಲಿರುವ ಮಹಾದ್ವಾರ ಪ್ರವೇಶಿಸಲಿದೆ (ದಿಕ್ಕು ತಿಳಿದಿಲ್ಲ) ಅದಕ್ಕೆ ಸ್ವಾಗತ ಬಯಸಲು ಮುಂಬನ್ನಿ. ಅದಕ್ಕಿಂತ ಪೂರ್ವದಲ್ಲಿ ತತ್ಪೋಪದೇಶಕ್ಕನುಗುಣವಾಗಿ ಪಕ್ಷಾಂತರಗೊಳ್ಳಲಿರುವ ಕಾಂಗ್ರೆ, ಜನತಾ ಮತ್ತಿನ್ನಿತರ ಪಕ್ಷಗಳ ಬೆಂಬಲದಿಂದ ದಿಲ್ಲಿ ದರ್ಬಾರ್ ಪ್ರವೇಶಕ್ಕೆ ಸಜ್ಜಾಗುತ್ತಿದ್ದಾರೆ ಅಡ್ವಾಣಿಯವರು ಅದಕ್ಕೂ ತಮ್ಮದೆಲ್ಲ ಆಹ್ವಾನ ನೀಡಿದ್ದಾರೆ. ಜನತಾದಳದ ಮತ್ತಿನ್ನಿತರ ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳಿಗೆಲ್ಲ ಇದು ಎಚ್ಚರಿಕೆಯ ಗಂಟೆಯಾಗಿದೆ. ನಾವು ಎಚ್ಚರಗೊಂಡು ಐಕ್ಯತೆ ಸಾಧಿಸಿ ಕನಿಷ್ಟ ಕಾರ್ಯಕ್ರಮದ ತಳಹದಿಯಲ್ಲಿ ಒಂದಾಗಿ ಈ ಪೆಡಂಭೂತದ ವಿರುದ್ಧ ಹೋರಾಡುತ್ತೇವೆ, ಜನರಿಂದ ಅದನ್ನು ದೂರೀಕರಿಸುತ್ತೇವೆ, ಐಕ್ಯತೆ-ಸಮಗ್ರತೆ ಕಾಪಾಡುತ್ತೇವೆಂಬ ನಿರ್ಧಾರದಿಂದ ಮುಂದುವರೆಯೋಣ.

ಮೈಸೂರು ಜಿಲ್ಲಾ 16ನೇ ಸಮ್ಮೇಳನ

ಸಿಪಿಐ (ಎಂ) ಪಕ್ಷದ 16ನೇ ಜಿಲ್ಲಾ ಸಮ್ಮೇಳನವು ನವೆಂಬರ್ 8 ಮತ್ತು 9 ರಂದು ನಡೆಯಿತು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಂ.ಎನ್.ಉಗ್ರಪ್ಪನವರು ಧ್ವಜಾರೋಹಣ ಮಾಡಿದರೆ, ಹಿರಿಯ ಸ್ವಾತಂತ್ಯ್ರ ಹೋರಾಟಗಾರರು, ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಎನ್. ಕೆ. ಉಪಾಧ್ಯಾಯರು ಸಮ್ಮೇಳನ ಉದ್ಘಾಟಿಸಿದರು.

ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಖಾಸಗೀಕರಣ ಮಾಡುವ ಸರ್ಕಾರಗಳ ವಿರುದ್ಧ ಕಾರ್ಮಿಕ ವರ್ಗ ಸಿಡಿದೆದ್ದು ಹೋರಾಟ ನಡೆಸಬೇಕೆಂದು ಈ ಸಂದರ್ಭದಲ್ಲಿ ಮಾತನಾಡಿದ ಕಾಂ. ಎನ್. ಕೆ. ಉಪಾಧ್ಯಾಯ ಕರೆ ನೀಡಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೇಲಿನಿಂದಲೇ ರ ೊ ಪಿ ಸಿ ಕಾರ್ಯಗತಗೊಳಿಸುತಿರುವುದರಿಂದ ಯೋಜನೆಗಳು ನಿಜವಾದ ಫಲನಾಭವಿಗಳಿಗೆ ತಲುಪುತ್ತಿಲ್ಲ, ಈ ಬಗ್ಗೆ ಸರ್ಕಾರಗಳು ತೀವ್ರಗಮನ ಹರಿಸಬೇಕೆಂದರು.

ಸಿಪಿಐ(ಎಂ) ಕಾರ್ಯಕರ್ತರು ಸಮಾಜದ ಎಲ್ಲಾ ಸ್ತರಗಳ ಒಳಹೊಕ್ಕು ಜನತೆಗೆ ಸಿಪಿಐ(ಎಂ)ನ ವಿಚಾರಧಾರೆಗಳನ್ನು ತಿಳಿಸಬೇಕು, ಜನರಲ್ಲಿ ಜಾಗೃತಿ ಉಂಟುಮಾಡಿ ಸಂಘಟಿಸಿ ಕೋಮುಶಕ್ತಿಗಳ ವಿರುದ್ಧ ಹೋರಾಟಕ್ಕೆ ಅಣಿಗೊಳಿಸಬೇಕೆಂದು ಕಾಂ|| ಉಪಾಧ್ಯಾಯರು ಕರೆನೀಡಿದರು. ಸ್ವಾಗತ ಸಮಿತಿ ಅಧ್ಯಕ್ಷರಾದ ಕಾಂ. ಕೆ. ತಿಮ್ಮೇಗೌಡ ಸ್ವಾಗತಿಸಿದರು.

ಪ್ರತಿನಿಧಿ ಅಧಿವೇಶನದಲ್ಲಿ ಜಿಲ್ಲಾ ಕಾರ್ಯದರ್ಶಿ ಉಗ್ರಪ್ಪನವರು ಕರಡು ವರದಿ ಮಂಡಿಸಿದರು. ಚರ್ಚೆಯಲ್ಲಿ 11 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಕರಡು ವರದಿಯನ್ನು ಕೆಲವು ತಿದ್ದುಪಡಿಗಳೊಂದಿಗೆ ಸರ್ವಾನುಮತದಿಂದ ಸಮ್ಮೇಳನವು ಅಂಗೀಕರಿಸಿತು.

ನೂತನ ಸಮಿತಿ: ಎನ್ ಉಗ್ರಪ್ಪನವರು ಜಿಲ್ಲಾ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು. ಸಮಿತಿಯ ಸದಸ್ಯರಾಗಿ ಎನ್.ಎಸ್. ಪ್ರಭಾಕರ್, ಹೆಚ್.ಕೆ. ತಿರುಮಲಾಚಾರ್, ಬಿ.ಡಿ. ಸತೀಶ್, ಕೆ.ಬಸವರಾಜ್, ಕೆ. ತಿಮ್ಮೇಗೌಡ, ಬಿ.ಎಂ. ಶಿವಣ್ಣ, ಎ.ಪಿ. ಪುಟ್ಟಣ್ಣ, ಜೆ. ಜಯರಾಮು ಆಯ್ಕೆಗೊಂಡರು.

ನಿರ್ಣಯಗಳು :

ಸಮ್ಮಳನವು ಮುಂದಿನ ಹೋರಾಟದ ಭಾಗವಾಗಿ ನಾಗರೀಕ ಸೌಲಭ್ಯ, ನೀರಾವರಿ ಕಾಮಗಾರಿಗಳು, ವಿದ್ಯುತ್ ಸರಬರಾಜು, ಉಚಿತ ವಿದ್ಯಾಭ್ಯಾಸ ಮುಂತಾದ ವಿಷಯಗಳ ಬಗ್ಗೆ ನಿರ್ಣಯ ಕೈಗೊಂಡಿದೆ. ಸಮ್ಮೇಳನದಲ್ಲಿ ಕಾಂ. ಎನ್.ಕೆ. ಉಪಾಧ್ಯಾಯ ಮತ್ತು ಸಿ. ನಂಜುಂಡಪ್ಪನವರು ರಾಜ್ಯ ಸಮಿತಿಯ ಪರವಾಗಿ ಉಪಸ್ಥಿತರಿದ್ದು ಮಾರ್ಗದರ್ಶನ ನೀಡಿದರು.

ನವೆಂಬರ್ 9ರ ಸಂಜೆ ಬಹಿರಂಗ ಸಭೆಯ ಪೂರ್ವಭಾವಿಯಾಗಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಪುರಭವನದಲ್ಲಿ ಬಹಿರಂಗ ಸಭೆ ನಡೆಯಿತು.

ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ. ಉಪಾಧ್ಯಾಯ ರೈತರು ಸರ್ಕಾರದ ನಿರ್ಲಕ್ಷ್ಯಕ್ಕೊಳಗಾಗಿದ್ದಾರೆ, ಬೆಲೆಗಳು ಗಗನಕ್ಕೇರಿವೆ, ಪರಿಸ್ಥಿತಿ ದಿನೇದಿನೇ ಹದಗೆಟ್ಟಿದೆ, ನಿರುದ್ಯೋಗ, ಬಡತನ, ವಸತಿ, ಹೀಗೆ ನೂರಾರು ಸಮಸ್ಯೆಗಳ ಆಗರವಾಗಿರುವ ನಮ್ಮ ದೇಶವನ್ನು ಉಳಿಸ ಬೇಕಾದರೆ ಜನ ಎಚ್ಚೆತ್ತುಕೊಳ್ಳಬೇಕು ಎಂದು ಕರೆ ನೀಡಿದರು.

ಜಿಲ್ಲೆಯ ಹುಣಸೂರು ತಾಲೂಕಿನಲ್ಲಿರುವ, ಕಳೆದ ಹತ್ತಾರು ವರ್ಷಗಳಿಂದಲೂ ಉಳಿಮೆ ಮಾಡಿಕೊಂಡು ಬಂದಿರುವ ರೈತರಿಗೆ ಭೂಮಿಯನ್ನು ಕೊಡಲು ನಿರಾಕರಿಸುತ್ತಿರುವ ಸರ್ಕಾರದ ವಿರುದ್ಧ ಮುಂದೆ ಸಿ.ಪಿ.ಐ.(ಎಂ) ಚಳುವಳಿ ಮಾಡಲಿದ್ದು ಅದಕ್ಕೆ ಸಮಸ್ತ ರೈತರ ನೆರವು ಅಗತ್ಯವಾಗಿದ್ದು ಸಹಕರಿಸ ಬೇಕೆಂದು ಕೋರಿದರು.

ಸಿ.ಐ.ಟಿ.ಯು. ಜಿಲ್ಲಾ ಅಧ್ಯಕ್ಷ ಮೋಹನ್ ಕುಮಾರ್ ಮಾತನಾಡಿ ಸರ್ಕಾರಿ ಕಂಪನಿಗಳನ್ನು ಖಾಸಗಿಯವರಿಗೆ ಮಾರುವ ನಿರ್ಣಯವನ್ನು ಸರ್ಕಾರ ಕೈ ಬಿಡದಿದ್ದಲ್ಲಿ ಉಗ್ರವಾದ ಹೋರಾಟ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಿ. ನಂಜುಂಡಪ್ಪನವರು ಮಾತನಾಡಿ ಸ್ವಾತಂತ್ರ್ಯಾನಂತರದಲ್ಲಿ ಬಹುಕಾಲ ಆಳ್ವಿಕೆ ನಡೆಸಿದ ಕಾಂಗ್ರೆಸ್ ಪಕ್ಷದ ದುರಾಡಳಿತದಿಂದಾಗಿ ಇಂದಿನ ಆರ್ಥಿಕ ಸ್ವಾವಲಂಬನೆಗೆ ಧಕ್ಕೆಯುಂಟಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಎಂ.ಎನ್.ಉಗ್ರಪ್ಪ ಮಾತನಾಡಿ ಹುಣಸೂರು ತಾಲೂಕಿನ ಹನಗೋಡು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿಯಿಂದ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ನಿಧಿ ಸಂಗ್ರಹಿಸಿ ಕೊಡಲು ಸಹಾಯ ಕೋರಿ, ಸಭೆಯಲ್ಲಿಯೇ ಇದನ್ನು ಕಾರ್ಯರೂಪಕ್ಕೆ ತರಲಾಯ್ತು. ಸಭೆಯಲ್ಲಿ ಕೆ. ತಿಮ್ಮೆಗೌಡ, ಜಾರ್ಜ್ ಉಪಸ್ಥಿತರಿದ್ದರು. ಜಗದೀಶ್ ಸ್ವಾಗತಿಸಿದರು

ಮಲೆನಾಡು ಪ್ರಾದೇಶಿಕ ಸಮ್ಮೇಳನ

ಸಿಪಿಐ(ಎಂ) ಮಲೆನಾಡು ಪ್ರಾದೇಶಿಕ ಸಮಿತಿ ಸಮ್ಮೇಳನವು ಚಿಕ್ಕಮಗಳೂರಿನ ಸವಿತಾ ಸಮಾಜದಲ್ಲಿ ೧೯೯೭ ರ ನವೆಂಬರ್ ೩ ಮತ್ತು ೪ ರಂದುನಡೆಯಿತು. ಪಕ್ಷದ ಹಿರಿಯ ಸಂಗಾತಿಗಳು ಸ್ವಾತಂತ್ರ್ಯ ಹೋರಾಟಗಾರರು ಆದ ಕಾಂ|| ಎಂ.ವಿ.ಸುಬ್ಬಯ್ಯನವರು ಧ್ವಜಾರೋಹಣ ಮಾಡಿದ ನಂತರ ಸಮ್ಮೇಳನವು ಸಂಗಾತಿಗಳಾದ ಕೆ.ಸುಕುಮಾರ್ ಮತ್ತು ಎಂ.ರಾಘುಶೆಟ್ಟಿಯವರ ಅಧ್ಯಕ್ಷ ಮಂಡಳಿಯಲ್ಲಿ ಪ್ರಾರಂಭವಾಯ್ತು.

ಸಮ್ಮೇಳನವನ್ನು ಉದ್ಘಾಟಿಸಿ ಪಕ್ಷದ ರಾಜ್ಯಕಾರ್ಯದರ್ಶಿಗಳಾದ ಕಾಂ| ಪಿ.ರಾಮಚಂದ್ರರಾವ್ ಮಾತನಾಡುತ್ತಾ ರಾಷ್ಟ್ರದ ಪ್ರಸ್ತುತ ರಾಜಕೀಯ ಬೆಳವಣಿಗೆಗಳ ಬಗ್ಗೆ ವಿವರಿಸಿ, ರಾಷ್ಟ್ರದ ರಾಜಕಾರಣದಲ್ಲಿ ಸಿಪಿಐ (ಎಂ) ಇಂದು ವಹಿಸುತ್ತಿರುವ ಮಹತ್ವದ ಪಾತ್ರವನ್ನು ತಿಳಿಸಿ, ಮಲೆನಾಡು ಪ್ರದೇಶದಲ್ಲೂ ನಮ್ಮ ಪಕ್ಷದ ಸಂಘಟನೆಯನ್ನು ಕಟ್ಟಿಬೆಳೆಸಲು ಬೇಕಾದ ಕಾರ್ಯಕ್ರಮ ರೂಪಿಸಲು ಸಮ್ಮೇಳನಕ್ಕೆ ಕರೆ ನೀಡಿದರು.

ಕಳೆದ ಮೂರು ವರ್ಷಗಳ ಕಾರ್ಯಚಟುವಟಿಕೆಗಳ ಬಗ್ಗೆ ಕಾರ್ಯದರ್ಶಿ ಕಾಂ| ವಿ.ಸುಕುಮಾರ್ ಹದಿನಾಲ್ಕು ಪುಟಗಳ ವರದಿಯನ್ನು ಸಮ್ಮೇಳನದ ಮುಂದೆ ಮಂಡಿಸಿ ಮಾತನಾಡಿದರು. ವರದಿಯ ಮೇಲೆ ಇಬ್ಬರು ಮಹಿಳೆಯರು ಸೇರಿದಂತೆ ಎಂಟು ಮಂದಿ ಪ್ರತಿನಿಧಿಗಳು ಚರ್ಚಿಸಿದ ನಂತರ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯ್ತು.

ಸಮ್ಮೇಳನವು ಮುಂದಿನ ಕಾಲಾವಧಿಗೆ ಮಲೆನಾಡು ಪ್ರಾದೇಶಿಕ ಸಮಿತಿಗೆ ಸದಸ್ಯರುಗಳನ್ನಾಗಿ ಸಂಗಾತಿಗಳಾದ ವಿ.ಸುಕುಮಾರ್, ಕೆ.ಸುಕುಮಾರ್, ರಾಜೇಂದ್ರ, ಎಂ.ರಾಘುಶೆಟ್ಟಿ, ಜಿ.ಸಿ.ಸತ್ಯನಾರಾಯಣ, ಎಸ್.ಪಿ. ಪ್ರಕಾಶ್, ಕೇಶವಮೂರ್ತಿ ಮತ್ತು ಎಂ.ಸುಂದರರವರನ್ನು ಆಯ್ಕೆ ಮಾಡಿತು. ಉಳಿದ ಎರಡು ಸ್ಥಾನಗಳನ್ನು ಮುಂದೆ ಆಯ್ಕೆ ಮಾಡಲು ಸಮಿತಿಗೆ ಅಧಿಕಾರ ನೀಡಿತು.

ಮುಂದೆ ನಡೆಯಲಿರುವ ರಾಜ್ಯ ಸಮ್ಮೇಳನಕ್ಕೆ ಒಬ್ಬರು ಮಹಿಳೆಯು ಸೇರಿದಂತೆ ಐವರು ಪ್ರತಿನಿಧಿಗಳನ್ನು ಸಮ್ಮೇಳನವು ಆಯ್ಕೆ ಮಾಡಿತು.

ಸಮ್ಮೇಳನದಲ್ಲಿ ಉಪಸ್ಥಿತರಿದ್ದ ಕಾಂ| ನಂಜುಂಡಪ್ಪ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು.

ಸಮ್ಮೇಳನದಲ್ಲಿ ಕುದುರೆಮುಖದಲ್ಲಿ ಸಂಸ್ಥೆ ಗಳಿಸುತ್ತಿರುವ ಲಾಭದಲ್ಲಿ ಶೇ ೧೦ ರಷ್ಟನ್ನು ಮೂಡಿಗೆರೆ ತಾಲ್ಲೂಕಿನ ಅಭಿವೃದ್ಧಿಗೆ ಮೀಸಲಿಡಬೇಕು, ಹಾಸನ-ಶ್ರವಣ-ಬೆಂಗಳೂರು ಮಾರ್ಗದಲ್ಲಿ ಯೋಜಿಸಿರುವ ಬ್ರಾಡ್‌ಗೇಜ್ ರೈಲ್ವೆ ಕೆಲಸವನ್ನು ತುರ್ತಾಗಿ ಪ್ರಾರಂಭಿಸಿ ಕೊನೆ ಗೊಳಿಸಬೇಕು, ಹೊಸದಾಗಿ ಬೆಳೆಯುತ್ತಿರುವ ಕೈಗಾರಿಗಾ ಪ್ರದೇಶಗಳಲ್ಲಿ ಭೂಮಿ ಕಳೆದುಕೊಂಡವರಿಗೆ ಉದ್ಯೋಗದಲ್ಲಿ ಆದ್ಯತೆ ಕೊಡಬೇಕು, ಗ್ರಾಮಾಂತರ ಪ್ರದೇಶಗಳಲ್ಲಿ ಪಡಿತರ ಪದ್ಧತಿಯನ್ನು ಸುಧಾರಿಸಬೇಕು, ಬರ ಪರಿಸ್ಥಿತಿಯನ್ನು ಈ ಎರಡು ಜಿಲ್ಲೆಗಳಲ್ಲಿ ಅಭ್ಯಸಿಸಿ ತಕ್ಕ ಪರಿಹಾರ ನೀಡಬೇಕು, ಗ್ರಾಮಾಂತರ ಪ್ರದೇಶಕ್ಕೆ ಸಾರಿಗೆಯ ವ್ಯವಸ್ಥೆಯನ್ನು ಸರಿಪಡಿಸಬೇಕು ಇತ್ಯಾದಿ ಸರಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಸಮ್ಮೇಳನದಲ್ಲಿ ೩ ಮಹಿಳೆಯರು ಸೇರಿದಂತೆ ೩೮ ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಕಳೆದ ನಲ್ವತ್ತು ವರ್ಷಗಳ ನಂತರ ಇದೇ ಪ್ರಥಮ ಬಾರಿಗೆ ಚಿಕ್ಕಮಗಳೂರಿನಲ್ಲಿ ಪಕ್ಷದ ಸಮ್ಮೇಳನವು ನಡೆದಿದ್ದು ಇಲ್ಲಿಯ ಸಂಗಾತಿಗಳಿಗೆ ಈ ಸಮ್ಮೇಳನವು ಸ್ಫೂರ್ತಿಯನ್ನು ಕೊಟ್ಟಿತು.

ಪ್ರಾರಂಭದಲ್ಲಿ ಸ್ವಾಗತ ಹಾಗೂ ಕೊನೆಯಲ್ಲಿ ವಂದನಾರ್ಪಣೆಯನ್ನು ಕಾಂ|| ವಿ.ಸುಕುಮಾರ್ ಮಾಡಿದರು.

ಸಿಪಿಐ(ಎಂ) ಸಮ್ಮೇಳನಗಳು

ಮಂಗಳೂರು ನಗರ ಸಮ್ಮೇಳನ

ನವೆಂಬರ್ 9ರಂದು ಸಿ.ಪಿ.ಐ(ಎಂ) ಮಂಗಳೂರು ನಗರ ಸಮ್ಮೇಳನವು ಜಪ್ಪಿನ ಮೊಗರುವಿನಲ್ಲಿ ನಡೆಯಿತು. ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಸಮಿತಿ ಮುಖಂಡರಾದ ಡೇವಿಡ್ ಕರ್ಕಡಾ ಮಾತನಾಡಿ ನಿರಂತರ ತ್ಯಾಗ ಬಲಿದಾನಗಳಿಂದಾಗಿ ಜನ ಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿ ಹೋರಾಡುತ್ತಾ ಬಂದಿರುವ ಎಡ ಚಳುವಳಿಯನ್ನು ಜನ ಗುರುತಿಸುತ್ತಿದ್ದಾರೆ ಎಂದರು.

ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು. ಜನಾರ್ಧನ ನಾಯ್ಕ, ಕೆ. ಪೂವಪ್ಪ ಸಾಲಿಯಾನ್, ಕಮಲಾಕ್ಷ ಬಂಗೇರ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ನಗರ ಪಾಲಿಕೆ ಮಾಜಿ ಸದಸ್ಯರಾದ ಜೆ. ಸದಾಶಿವ ಶೆಟ್ಟಿ ವಹಿಸಿದ್ದರು. ಧ್ವಜಾರೋಹಣವನ್ನು ತಿಮ್ಮಪ್ಪ ನೆರವೇರಿಸಿದರು.

ದೊಡ್ಡಬಳ್ಳಾಪುರ ಸಿ.ಪಿ.ಐ(ಎಂ) ತಾಲೂಕು ಸಮ್ಮೇಳನ

ಸಿ.ಪಿ.ಐ(ಎಂ)ನ ದೊಡ್ಡಬಳ್ಳಾಪುರ ತಾಲ್ಲೂಕು ಸಮ್ಮೇಳನ ಅಕ್ಟೋಬರ್ 26ರಂದು ರುಮಾಲೆ ಛತ್ರದಲ್ಲಿ ಯಶಸ್ವಿಯಾಗಿ ನಡೆಯಿತು. ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಆರ್. ಶ್ರೀನಿವಾಸ್ ಶ್ರೀಮಂತ ಪರ ಸರ್ಕಾರಗಳ ಆರ್ಥಿಕ ಧೋರಣೆಗಳಿಂದ ದೇಶದ ಅಭಿವೃದ್ಧಿ ಕುಂಠಿತಗೊಂಡು ಎಲ್ಲೆಲ್ಲು ಅಶಾಂತಿ, ಅರಾಜಕತೆ ತುಂಬಿದೆ ಎಂದರು. ಇತ್ತೀಚೆಗೆ ಪೆಟ್ರೋಲ್-ಡೀಸೆಲ್ ಬೆಲೆಗಳ ಏರಿಕೆಯಿಂದ ಜನಸಾಮಾನ್ಯರು ಇನ್ನಷ್ಟು ಸಂಕಷ್ಟಕ್ಕೀಡಾಗಿದ್ದಾರೆಂದು, ದೇಶದ ಈ ಪರಿಸ್ಥಿತಿಯನ್ನು ಬದಲಾಯಿಸಲು ಎಡ ಶಕ್ತಿಗಳು ಬಲಗೊಳ್ಳಬೇಕಾಗಿದೆ ಎಂದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಮೀನಾಕ್ಷಿ ಸುಂದರಂ ಮಾತನಾಡುತ್ತಾ ಭಾರತ ದೇಶದಲ್ಲಿ ಪ್ರಾರಂಭವಾಗಿರುವ ಉದಾರೀಕರಣದಿಂದ ಮೆಕ್ಸಿಕೋದಂತ ದೇಶಗಳು ಆರ್ಥಿಕ ದಿವಾಳಿಯತ್ತ ಸಾಗಿರುವುದರ ಅಪಾಯ ಕುರಿತು ಎಚ್ಚರಿಸಿದರು.

ಅಧ್ಯಕ್ಷತೆಯನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಸಿ.ಪಿ.ಐ(ಎಂ) ಪಕ್ಷದ ತಾಲ್ಲೂಕು ಸಮಿತಿ ಕಾರ್ಯದರ್ಶಿ ಶ್ರೀ. ಹೆಚ್. ಮುಗುವಾಳಪ್ಪನವರು ವಹಿಸಿದ್ದರು.

ನಿರ್ಣಯಗಳು

ದೊಡ್ಡಬಳ್ಳಾಪುರ ನಗರವೂ ಸೇರಿದಂತೆ ಸುತ್ತಮುತ್ತ ಇರುವ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಜನರಿಗೆ ಹಕ್ಕುಪತ್ರಗಳನ್ನು ಮತ್ತು ಮೂಲ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಒತ್ತಾಯಿಸಲಾಯಿತು.

ಯಲಹಂಕ ಸಮೀಪ ಬಹುರಾಷ್ಟ್ರೀಯ ಕಂಪನಿಗಳು ಸ್ಥಾಪಿಸಬೇಕೆಂದಿರುವ ಹೈಟೆಕ್ ಮಗ್ಗಗಳ ಕಾರ್ಖಾನೆಯನ್ನು ವಿರೋಧಿಸಿ ನಿರ್ಣಯವೊಂದನ್ನು ಅಂಗೀಕರಿಸಲಾಯಿತು.

ಪಡಿತರ ವ್ಯವಸ್ಥೆಯನ್ನು ಬಲಗೊಳಿಸಬೇಕು, ಸೀಮೆಎಣ್ಣೆ ವಿತರಣೆಯಲ್ಲಿನ ಅಕ್ರಮಗಳು ನಿಲ್ಲಬೇಕು, ದೊಡ್ಡಬಳ್ಳಾಪುರ ನಗರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸುಸಜ್ಜಿತ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮಾರ್ಪಾಡು ಮಾಡಬೇಕೆಂಬ ನಿರ್ಣಯಗಳೊಂದಿಗೆ ಸಮ್ಮೇಳನವು ಮುಕ್ತಾಯವಾಯಿತು.

ಬಂಟ್ವಾಳ ತಾಲೂಕು ಸಮ್ಮೇಳನ

ಜಿಲ್ಲೆಯ ಬಂಟ್ವಾಳದಲ್ಲಿ ಸಿ.ಪಿ.ಐ (ಎಂ)ನ 16ನೇ ತಾಲೂಕು ಸಮ್ಮೇಳನ ನವೆಂಬರ್ 2ರಂದು ನಡೆಯಿತು. ಸಮ್ಮೇಳನವು ತಾಲೂಕಿಗೆ ಸಂಬಂಧಿಸಿದಂತೆ ಹಲವು ನಿರ್ಣಯಗಳನ್ನು ಕೈಗೊಂಡಿತು.

ಬಂಟ್ವಾಳದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ(ಐ.ಟಿ.ಐ) ಆರಂಭಿಸಬೇಕು.

ಜಿಲ್ಲೆಯ ರೈತರ ಪಂಪ್‌ಸೆಟ್‌ಗಳಿಗೆ 500 ರಷ್ಟು ಬೆಲೆ ಏರಿಸಿರುವುದನ್ನು ಖಂಡಿಸಿ ಸಮರ್ಪಕವಾಗಿ ವಿದ್ಯುತ್ ಪೂರೈಸಬೇಕೆಂದು ಆಗ್ರಹಿಸಿದೆ.

ಬಂಟ್ವಾಳ ಭೂ ನ್ಯಾಯ ಮಂಡಳಿಗೆ ಒಬ್ಬ ಸಹಾಯಕ ಕಮಿಷನರು ಮತ್ತು ಸಿಬ್ಬಂದಿಯನ್ನು ತಕ್ಷಣ ನೇಮಿಸಿ ಭೂ ವಿವಾದಗಳನ್ನು ಶೀಘ್ರ ಇತ್ಯರ್ಥಗೊಳಿಸಬೇಕು ಎಂದು ಒತ್ತಾಯಿಸಲಾಗಿದೆ. ಬಂಟ್ವಾಳದಲ್ಲಿ ಸರ್ಕಾರಿ ಕಾಲೇಜು ಮತ್ತು ಪಾಲಿಟೆಕ್ನಿಕ್ ತೆರೆಯಲೂ ಸಮ್ಮೇಳನ ಒತ್ತಾಯಿಸಿದೆ.

ಸವದತ್ತಿ ತಾಲ್ಲೂಕು ಸಮ್ಮೇಳನ

ಸವದತ್ತಿ ತಾಲೂಕು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಸಮ್ಮೇಳನವು ದಿನಾಂಕ ಅಕ್ಟೋಬರ್ 26 ರಂದು ಸವದತ್ತಿ ಘಟಕದ ಸಮ್ಮೇಳನವು ತಾಲೂಕನ್ನು ಬರಗಾಲವೆಂದೂ ಸಾರಬೇಕೆಂದು ಸಿಪಿಐ(ಎಂ) ಘಟಕದ ಸಮ್ಮೇಳನವು ಒತ್ತಾಯಿಸಿತು. ಹಾಗೂ ಬರಗಾಲದ ಕಾರ್ಯಾಚರಣೆಯನ್ನು ಆರಂಭಿಸಬೇಕೆಂದೂ ಒತ್ತಾಯಿಸಲಾಯಿತು.

ಬಹುದಿನದ ಬೆಳಗಾಂವ, ಧಾರವಾಢ, ವಿಜಾಪುರ ಜಿಲ್ಲೆ ಮಲಪ್ರಭಾ ಯೋಜನೆಯ ಪ್ರದೇಶದ ಬೇಡಿಕೆಯಾದ ಮಹಾದಾಯಿ ನದಿನೀರನ್ನು ಮಲಪ್ರಭಾ ಜಲಾಶಯಕ್ಕೆ ಕೊಡುವಂತೆ, ವಸತಿ ರಹಿತ ಕೂಲಿಕಾರರಿಗೆ ಬಿಟ್ಟು ಕೊಡಬೇಕೆಂದು, ಮಲಪ್ರಭಾ ಯೋಜನೆ ಯಲ್ಲಿ ಮುಳುಗಡೆ ಪ್ರದೇಶದ ಕೆಲವೊಂದು ರೈತರು ತಮ್ಮ ಅಲ್ಪ ಸ್ವಲ್ಪ ಭೂಮಿ ಕಳೆದುಕೊಂಡ ರೈತರನ್ನು ಅಕ್ರಮ ಭೂಮಿ ಸಕ್ರಮ ಮಾಡಬೇಕೆಂದು, ಅದರಂತೆ ಸರಕಾರಿ ಪಡಭೂಮಿಯಲ್ಲಿ ಅಕ್ರಮವಾಗಿ ಸಾಗುವಳಿ ಮಾಡಿದ್ದರೆ ಅಂತಹವರ ಅಕ್ರಮ ಭೂಮಿ ಸಕ್ರಮ ಗೊಳಿಸಬೇಕೆಂದು ಈ ಸಮ್ಮೇಳನ ಒತ್ತಾಯಿಸಿತು.

ಈ ಸಮ್ಮೇಳನದ ಅಧ್ಯಕ್ಷತೆಯನ್ನು ಎಲ್.ಎಸ್.ನಾಯ್ಕ ಅವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಡಾ. ವ್ಹಿ. ಪಿ. ಕುಲಕರ್ಣಿ ಆಗಮಿಸಿದ್ದರು. ಸಮ್ಮೇಳನವನ್ನು ಹಿರಿಯ ಮುಖಂಡರು, ಮಾಜೀ ಪುರಸಭೆಯ ಅಧ್ಯಕ್ಷರಾದ ಎಸ್.ಎಸ್. ಕಪ್ಪಣ್ಣನವರು ಉದ್ಘಾಟಿಸಿ, ಪಕ್ಷದ 50 ವರ್ಷದ ಇತಿಹಾಸವನ್ನು ವಿವರಿಸಿದರು. ತ್ರೈವಾರ್ಷಿಕ ಈ ಸಮ್ಮೇಳನ ಕಾರ್ಯದರ್ಶಿ ಜಿ.ಬಿ. ತೋರಗಲ್ಲ ಅವರು ಮೂರು ವರ್ಷದ ಕಾರ್ಯಚಟುವಟಿಕೆ ವರದಿ ಓದಿದರು. ಶಾಖೆಯ ಸದಸ್ಯರು ವರದಿಯ ಬಗ್ಗೆ ಟೀಕೆ ಮಾಡಿ ತಿದ್ದುಪಡಿಯೊಂದಿಗೆ ವರದಿ ಅಂಗೀಕರಿಸಲಾಯಿತು. ಮುಖ್ಯ ಅತಿಥಿಗಳಾದ ವ್ಹಿ.ಪಿ. ಕುಲಕರ್ಣಿಯವರು ಪಕ್ಷದ ನಿಲುಮೆ ಮತ್ತು ಬೆಳವಣಿಗೆಯ ಬಗ್ಗೆ ವಿವರಿಸಿದರು. ಅಧ್ಯಕ್ಷರ ಸಮಾರೋಪ ಭಾಷಣದ ನಂತರ ಕಾರ್ಯದರ್ಶಿ ಜಿ.ಬಿ. ತೋರಗಲ್ಲ ಅವರು ವಂದಿಸಿದರು.

ಕೊಡಗು ಸಮ್ಮೇಳನ

ಪಕ್ಷದ ಕೊಡಗು ಪ್ರಾದೇಶಿಕ ಸಮ್ಮೇಳನವು ವಿರಾಜಪೇಟೆ ನಗರದ ಹೊಟೆಲ್ ಹಿಲ್ ಪ್ಯಾಲೆಸ್‌ನ ಸಭಾಂಗಣದಲ್ಲಿ ನವೆಂಬರ್೧೧-೧೨, ೯೭ ರಂದು ನಡೆಯಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಿ.ನಂಜುಂಡಪ್ಪನವರು ಸಮ್ಮೇಳನವನ್ನು ಉದ್ಘಾಟಿಸಿದರು. ಸಮ್ಮೇಳನವು ಜಿಲ್ಲೆಯ ಅಭಿವೃದ್ಧಿ ರೈತ ಕಾರ್ಮಿಕರ ಐಕ್ಯತೆಯನ್ನು ಬಲಪಡಿಸಿ ಜಿಲ್ಲೆಯಲ್ಲಿ ಪಕ್ಷವನ್ನು ಬಲಿಷ್ಠಗೊಳಿಸುವ ಕುರಿತು ದೀರ್ಘವಾದ ಚರ್ಚೆಯನ್ನು ನಡೆಸಿತು. ಸಮ್ಮೇಳನವು ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಪರಿಸರಕ್ಕೆ ಧಕ್ಕೆ ಬಾರದಂತಹಾ ಕೈಗಾರಿಕೆಗಳ ಸ್ಥಾಪನೆ, ವಿರಾಜಪೇಟೆ ನಗರಕ್ಕೆ ಕುಡಿಯುವ ನೀರಿನ ಪೂರೈಕೆಗಾಗಿ ಬೇತ್ರಿಯೋಜನೆ, ಜಿಲ್ಲೆಗೆ ಹಾಸನ ಮಡಿಕೇರಿ, ಮೈಸೂರು, ತಲಚೇರಿ ಪ್ರಸ್ತಾವಿತ ರೈಲ್ವೆ ಯೋಜನೆ, ಏಲಕ್ಕಿ ಬೆಳೆಗಾರರಿಗೆ ನ್ಯಾಯ ಬೆಲೆ ದೊರೆಯಲು ಸಹಾಯಕವಾದ ಏಲಕ್ಕಿ ಮಂಡಳಿಯ ಸ್ಥಾಪನೆ, ಅಪ್ಪಂಗಳ ಸಂಶೋಧನಾ ಕೇಂದ್ರವನ್ನು ಇನ್ನಷ್ಟು ಪರಿಣಾಮಕಾರಿಗೊಳಿಸಿ ಜಿಲ್ಲೆಯ ರೈತರಿಗೆ ಹೆಚ್ಚಿನ ನೆರವು ಸಿಗುವಂತೆ ಮಾಡುವುದು, ಜಿಲ್ಲೆಯಲ್ಲಿ ಬೆಳೆಯುವ ಪ್ರತ್ಯೇಕತಾವಾದವನ್ನು ವಿರೋಧಿಸುವುದು, ಜಿಲ್ಲೆಯ ಕಾರ್ಮಿಕ ನ್ಯಾಯಾಲಯಕ್ಕೆ ಕೂಡಲೇ ನ್ಯಾಯಾಧೀಶರನ್ನು ನೇಮಿಸುವಂತೆ ಒತ್ತಾಯಿಸಿ ಹಲವಾರು ಅಭಿವೃದ್ಧಿಪರ ನಿರ್ಣಯ ಗಳನ್ನು ಕೈಗೊಂಡಿತ್ತು.

ಸಮ್ಮೇಳನದಲ್ಲಿ ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಎಸ್.ವೈ.ಗುರುಶಾಂತ್‌ರವರು ಹಾಜರಿದ್ದರು. ಪ್ರಾರಂಭದಲ್ಲಿ ಧ್ವಜಾರೋಹಣವನ್ನು ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕಾಂ| ಐ.ಆರ್. ಪ್ರಮೋದ್ ರವರು ನೆರವೇರಿಸಿದರು.

ಹೊಸ ಸಮಿತಿ ಸದಸ್ಯರುಗಳಾಗಿ ಐ.ಆರ್. ಪ್ರಮೋದ್, ಪೀಟರ್ ಲೋಬೋ, ಎಂ.ಜಿ.ಜೋಸ್, ವೀರಸ್ವಾಮಿ, ಶ್ರೀಧರನ್ ಹಾಗೂ ಹೆಚ್.ಎಂ. ಕಾಳಯ್ಯನವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಮ್ಮೇಳನವು ಮುಂದಿನ ಸಾಲಿಗೆ ಕಾರ್ಯದರ್ಶಿಯಾಗಿ ಹೆಚ್.ಎಂ.ಕಾಳಯ್ಯನವರನ್ನು ಸರ್ವಾನುಮತದಿಂದ ಪುನರಾಯ್ಕೆ ಮಾಡಿತು. ಜಿಲ್ಲೆಯ ವಿವಿಧೆಡೆಗಳಿಂದ ಪ್ರತಿನಿಧಿಗಳು ಆಗಮಿಸಿದರು. ಸಮ್ಮೇಳನದ ಕಲಾಪಗಳನ್ನು ಪೀಟರ್ ಲೋಬೋ, ನಾರಾಯಣ ಮತ್ತು ಪದ್ಮಿನಿಯವರ ಅಧ್ಯಕ್ಷ ಮಂಡಳಿ ನಡೆಸಿಕೊಟ್ಟಿತ್ತು.

ಕೊನೆಯಲ್ಲಿ ಕಾಂ| ಎನ್.ಡಿ. ಕುಟ್ಟಪ್ಪನವರು ವಂದನಾರ್ಪಣೆ ಮಾಡಿದರು.

ಕೋಲಾರದಲ್ಲಿ ನಡೆಯುವ ಸಿಪಿಐ(ಎಂ) ರಾಜ್ಯ ಸಮ್ಮೇಳನಕ್ಕೆ ಕೊಡಗು ಜಿಲ್ಲೆಯಿಂದ ಪೀಟರ್ ಲೋಬೋ ಹಾಗೂ ಹೆಚ್ ಎಂ. ಕಾಳಯ್ಯನವರನ್ನು ಪ್ರತಿನಿಧಿಗಳಾಗಿ ಸಮ್ಮೇಳನವು ಆಯ್ಕೆ ಮಾಡಿತು.

ವೈದ್ಯಕೀಯ ವಿದ್ಯಾರ್ಥಿಗಳ ಪ್ರತಿಭಟನೆ

ರಾಯಚೂರು: ಎನ್.ಇ.ಟಿ. ಹಾಸ್ಟೆಲ್‌ನಿಂದ ದಂತ ಫಾರ್ಮಸಿ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿ ಕಛೇರಿ ಮುಂದೆ ಬಹಿರಂಗ ಸಭೆ ನಡೆಸಿ ತಮ್ಮ ಸಮಸ್ಯೆಗಳನ್ನು ಈಡೇರಿಸಬೇಕೆಂಬ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ಸಭೆಯನ್ನುದ್ದೇಶಿಸಿ ಬೆಂಗಳೂರು ವಿ.ವಿ. ಸೆನೆಟ್ ಸದಸ್ಯೆ ಕೆ.ಎಸ್. ಲಕ್ಷ್ಮಿ, ವಿ.ಎಸ್. ಯಲ್ಲಪ್ಪ, ಪುರುಶೋತ್ತಮ ಮಾತನಾಡಿದರು. ಇದೇ ಸಂದರ್ಭದಲ್ಲಿ ಜಿ. ನಾಗರಾಜ್, ಶರಣಬಸವ, ವೀರಭದ್ರ, ಕೆ.ಜಿ. ವೀರೇಶ್, ಈರಣ್ಣ ಮುಂತಾದವರು ಭಾಗವಹಿಸಿದ್ದರು.

ಡಾ|| ಎಂ.ವಿಶ್ವೇಶ್ವರಯ್ಯನವರ ಚಿಂತನೆಗಳು ಇಂದಿಗೂ ಪ್ರಸ್ತುತ

ಮಂಡ್ಯದಲ್ಲಿ ವಿಚಾರ ಸಂಕಿರಣ- ವರದಿ: ಕೃಷ್ಣೇಗೌಡ.ಟಿ.ಎಲ್.



1997 ಭಾರತ ಸ್ವಾತಂತ್ರ್ಯದ ಸುವರ್ಣ ವರ್ಷ, ಈ ಸಂದರ್ಭದಲ್ಲಿ ಭಾರತವನ್ನು ಪ್ರಸ್ತುತ ಸ್ಥಿತಿಗೆ ತಂದವರ ಅಪಾರ ತ್ಯಾಗ-ಬಲಿದಾನಗಳ ಪರಿಶ್ರಮಗಳನ್ನು ಮೆಲಕು ಹಾಕುತ್ತ, ಓರೆ-ಕೋರೆಗಳನ್ನು ಸರಿಮಾಡಿಕೊಂಡು, ಸರಿಯಾದ ದಾರಿಯನ್ನು ಖಚಿತಪಡಿಸಿಕೊಂಡು ಮುನ್ನಡೆಯಬೇಕಾದ ಸನ್ನಿವೇಶ, ಹಾಗೆಯೇ ಸ್ವಾತಂತ್ರ್ಯ ಸ್ವಾವಲಂಬೀ, ಸಾರ್ವಭೌಮತೆಯ ಅಡಿಪಾಯದ ಕಲ್ಲುಗಳು ಒಂದೊಂದಾಗಿ ಕಳಚಿ ಬೀಳುತ್ತಿರುವ ಸನ್ನಿವೇಶವೂ ಕೂಡ.

ಆದರೆ ಪ್ರಗತಿಪರ ಶಕ್ತಿಗಳು ದೇಶದ ಭವಿಷ್ಯ ಪ್ರಜ್ವಲಿಸಬೇಕೆಂದು ಬಯಸುವವರು, ಸ್ವಾತಂತ್ರ್ಯ-ಸ್ವಾವಲಂಬೀ ಭಾರತದ ತಳಪಾಯವನ್ನು ಶಿಥಿಲಗೊಳಿಸುತ್ತಿರುವುದನ್ನು ನಿಷ್ಕ್ರಿಯಗೊಳಿಸಬೇಕಾಗಿರುವವರು, ನಮ್ಮದೇ ರೀತಿಯ ಸುಂದರ ಕನಸುಗಳನ್ನು ಕಂಡು, ಆ ದಾರಿಯಲ್ಲಿ ಸಾಗಲೂ ಪ್ರಯತ್ನಿಸಿ ಸ್ವಲ್ಪ ಸಫಲತೆಯನ್ನು ಕಂಡಿದ್ದವರ ಪ್ರಯತ್ನಗಳನ್ನು ನೆನಪು ಮಾಡಿಕೊಳ್ಳಬೇಕಾಗಿರುವವರು. ಈ ಪ್ರಯತ್ನದ ಭಾಗವೇ ನವೆಂಬರ್ 15 ಮತ್ತು 16 ರಂದು ಎಸ್‌ಎಫ್‌ಐ-ಡಿವೈಎಫ್‌ಐ- ಬಿಜಿವಿಎಸ್- ಎಫ್‌ಎಸ್‌ಡಿ ನೇತೃತ್ವದಲ್ಲಿ ಮಂಡ್ಯದಲ್ಲಿ ನಡೆದ 'ಸ್ವಾತಂತ್ರ್ಯದ ಸುವರ್ಣ ಮಹೋತ್ಸವ: ಡಾ|| ವಿಶ್ವೇಶ್ವರಯ್ಯನವರ ಚಿಂತನೆಗಳು ಮತ್ತು ಸ್ವತಂತ್ರ ಭಾರತದ ಅಭಿವೃದ್ಧಿ' ಎಂಬ ಎರಡು ದಿನದ ರಾಜ್ಯಮಟ್ಟದ ವಿಚಾರಸಂಕಿರಣ.

ಉದ್ಘಾಟನೆ: ಮಂಡ್ಯ ಜಿಲ್ಲೆಯ ಸಂಗಾತಿಗಳ ಎರಡು ತಿಂಗಳ ಪರಿಶ್ರಮದ ಹಿನ್ನಲೆಯೊಂದಿಗೆ ನವೆಂಬರ್ 15 ರಂದು ಆರಂಭವಾದ ಈ ವಿಚಾರಸಂಕಿರಣ, ಜಾನಪದ ಕಲೆ, ಬುರ್ರಾಕಥೆಯೊಡನೆ ಉದ್ಘಾಟನೆಯಾಯ್ತು. ಉದ್ಘಾಟನಾ ಭಾಷಣ ಮಾಡಿದ ಅಶೋಕ ಮಿತ್ರರವರು, ವಿದೇಶಿ ಚಿಂತನಾ ಕ್ರಮದಿಂದ ದೇಶ ದಿವಾಳಿಯತ್ತ ಸಾಗುತ್ತಿದೆ, ಎಂ.ವಿ. ರವರ ಚಿಂತನೆಗಳು ಮಣ್ಣು ಪಾಲಾಗುತ್ತಿವೆ, ಅವುಗಳನ್ನು ಉಳಿಸಿ ಬೆಳೆಸಿ ದೇಶವನ್ನು ಮುನ್ನಡೆಸಬೇಕಾದ ಕರ್ತವ್ಯ ನಮ್ಮ ಮುಂದಿದೆ ಎಂದರು. ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರೆ, ಪುಟ್ಟಮಾದು ಸ್ವಾಗತಿಸಿದರು, ಕೆ.ನಾರಾಯಣ ವಂದಿಸಿದರು.

ವಿಚಾರಗೋಷ್ಠಿಗಳು

ನವೆಂಬರ್ 15 ರ ಮಧ್ಯಾಹ್ನದಿಂದ ಪ್ರಾರಂಭವಾದ ವಿವಿಧ ವಿಷಯಗಳ ಮೇಲಿನ ವಿಚಾರ ಗೋಷ್ಠಿಗಳು 16 ರ ಮಧಾಹ್ನ 3 ಗಂಟೆಗೆ ಮುಕ್ತಾಯಗೊಂಡವು.

ವಿಶ್ವೇಶ್ವರಯ್ಯನವರ ಚಿಂತನೆಗಳು ಎಂಬ ವಿಷಯದ ಮೇಲೆ ನಡೆದ ಗೋಷ್ಠಿಯಲ್ಲಿ ಪ್ರಖ್ಯಾತ ಚಿಂತಕ, ಮುತ್ಸದ್ದಿ, ಸಮಾಜ ವಿಜ್ಞಾನಿ ಕಾಂ|| ಇ.ಎಂ.ಎಸ್. ರವರ 'ವಿಶ್ವೇಶ್ವರಯ್ಯನವರ ಚಿಂತನೆಗಳು ಕೆಲಸ ಮಾಡಿದ ರೀತಿ' ಪ್ರಬಂಧವನ್ನು ಮಂಡಿಸಲಾಯಿತು. ಈ ಪ್ರಪಂಚದಲ್ಲಿ ಇ.ಎಂ.ಎಸ್. ರವರು ವಿಶ್ವೇಶ್ವರಯ್ಯನವರ ಚಿಂತನೆಗಳು ಹೇಗೆ ವಿಫಲಗೊಂಡವು ಎಂದರಲ್ಲದೆ ಪದೇ ಪದೇ ಕಮ್ಯುನಿಸ್ಟರು ಪ್ರತಿಪಾದಿಸುತ್ತಾ ಬಂದ ತತ್ವಗಳನ್ನು, ಅವುಗಳ ಪ್ರಸ್ತುತತೆಯನ್ನು ನೆನಪಿಸಿದರು.

'ಗ್ಯಾಟ್, ಡಂಕೆಲ್, ಹೊಸ ಆರ್ಥಿಕ ನೀತಿ ಮತ್ತು ಎಂ.ವಿ. ಚಿಂತನೆಗಳ ನಡುವಿನ ವೈರುಧ್ಯ' ಎಂಬ ವಿಷಯದ ಮೇಲೆ ಪ್ರಬಂದ ಮಂಡಿಸಿದ ವಿಜ್ಞಾನಿ ಡಾ|| ಚಟರ್ಜಿಯವರು ವಿಶ್ವೇಶ್ವರಯ್ಯನವರ ಚಿಂತನೆಗಳ ಮೆಟ್ಟ ಗ್ಯಾಟ್, ಹೊಸ ಆರ್ಥಿಕ ನೀತಿಗಳು ಹೇಗೆ ಹೊಡೆತ ನೀಡುತ್ತವೆ ಮತ್ತು ಸ್ವಾವಲಂಬನೆಯನ್ನು ಕೈ ಬಿಡಲಾಗುತ್ತಿದೆ ಎಂದ ಅವರು ಡಾ|| ಎಂ.ವಿ ಯವರು ಸ್ವಾಭಿಮಾನ ಮತ್ತು ಸ್ವಾವಲಂಬನೆಗಾಗಿ ಹಂಬಲಿ ಸುತ್ತಿದ್ದವರು. ಹಾಗಾಗಿಯೇ ಕೃಷ್ಣರಾಜ ಸಾಗರವನ್ನು ಕಟ್ಟಿದ ಸಂದರ್ಭದಲ್ಲಿ ಇಡೀ ಭಾರತದಲ್ಲಿ ಒಂದೇ ಒಂದು ಸಿಮೆಂಟ್ ಕೈಗಾರಿಕೆಯ ಕಾರ್ಖಾನೆ ಇರದಿದ್ದರೂ ಎದೆಗುಂದದೆ ಎಂ.ವಿ. ಹೊರದೇಶಗಳಿಂದ ಸಿಮೆಂಟ್‌ನ್ನು ಆಮದು ಮಾಡಿಕೊಳ್ಳುವ ಮುಕ್ತ ಅವಕಾಶವಿದ್ದರೂ ಹಾಗೆ ಮಾಡದೆ ಅವರು ಇಡೀ ಅಣೆಕಟ್ಟನ್ನು ಸುರ್ಕಿಗಾರೆಯಿಂದ (ಮರಳು-ಸುಣ್ಣವನ್ನು ಅರೆದು ಮಾಡುವುದು) ಕಟ್ಟಿಸಿದರು, ಆದರೂ ಇಂದಿಗೂ ಕೆ.ಆರ್.ಎಸ್. ಯಾವುದೇ ಆಧುನಿಕ ಕಟ್ಟಡ ವನ್ನೂ ಮೀರಿಸುವ ಸ್ಥಿತಿಯಲ್ಲಿದೆ ಎಂದ ಅವರು ಸ್ವಾವಲಂಬನೆಯ ಮತ್ತೊಂದು ಉದಾಹರಣೆ ನೀಡುತ್ತಾ ಉಕ್ಕನ್ನು ತಯಾರು ಮಾಡಲು ಕಲ್ಲಿದ್ದಲು ಅಗತ್ಯವಾಗಿ ಬೇಕು, ಆದರೆ ಭದ್ರಾವತಿಯಲ್ಲಿ ಉಕ್ಕನ್ನು ತಯಾರಿಸಲು ಆರಂಭಿಸಿದಾಗ ಕರ್ನಾಟಕದಲ್ಲಿ ಯಾವುದೇ ಕಲ್ಲಿದ್ದಲು ಗಣಿಯೂ ಇರಲಿಲ್ಲ. ಭೂಪಾಲ್ ಅಥವಾ ಬಿಹಾರದಿಂದ ಕಲ್ಲಿದ್ದಲನ್ನು ಸಾಗಿಸಿ ಉಕ್ಕು ತಯಾರಿಸುವುದು ಬಹಳ ದುಬಾರಿಯಾಗುತ್ತಿತ್ತು. ಮಲೆನಾಡಿನಲ್ಲಿ ಹೇರಳವಾಗಿ ಸಿಗುತ್ತಿದ್ದ ಮರದಿಂದ ಇದ್ದಿಲು ತಯಾರಿಸಿ, ಅದನ್ನು ಉಪಯೋಗಿಸುವುದು ಕೂಡ ದುಭಾರಿ. ಆದರೆ ಮರದಿಂದ ಮೊದಲು Methyle Alcohol ರಸಾಯನಿಕ ತಯಾರಿಸಿ ನಂತರ ಇದ್ದಿಲು ಮಾಡಿ ಉಪಯೋಗಿ ಸಲು ಅವರು ಯೋಚಿಸಿದರು. ಆದ್ದರಿಂದ ಅಂದಿನ ಕಾಲಕ್ಕೆ ಭದ್ರಾವತಿಯ ಉಕ್ಕೆಂದರೆ ಅತೀ ಅಗ್ಗ, ಬಹುವಾಗಿ ಬೇಡಿಕೆ. ಪರಿಣಾಮ ಅಮೇರಿಕಾದಿಂದ ಅಪಾರ ಬೇಡಿಕೆ. ಅಮೆರಿಕನ್ ಕೈಗಾರಿಕೆಗಳು ಸ್ಪರ್ಧಿಸಲಾರದೆ ಮುಚ್ಚುವ ಭೀತಿ. ಆದ್ದರಿಂದ 1927 ರಲ್ಲಿ ಡಾ|| ಎಂ.ವಿ. ಅಮೆರಿಕಾಗೆ ಭೇಟಿ ಕೊಟ್ಟಾಗ ಹೀಗೆ ಉಕ್ಕನ್ನು ರಫ್ತು ಮಾಡಿದರೆ ಸುಂಕ ವಿಧಿಸುವ ಬೆದರಿಕೆ. ಈ ಪ್ರಯತ್ನಗಳನ್ನೇ ನಾವು ಸ್ವಾವಲಂಬನೆ ಎನ್ನುವುದು. ಇದೆ ನಮಗೆ ಮಾರ್ಗದರ್ಶಕವಾಗಿರಬೇಕಾಗಿರುವುದು ಎನ್ನುತ್ತಾ, ಭಾರತ ಸಂಪದ್ಭರಿತ ರಾಷ್ಟ್ರ ಅದನ್ನು ಸಮರ್ಥವಾಗಿ ಉಪಯೋಗಿಸಲು ಅವರು, ಶಿಕ್ಷಣ, ಹಣಕಾಸು, ತಂತ್ರಜ್ಞಾನ, ಆಡಳಿತ, ಯೋಜನೆ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಪ್ರಯತ್ನ, ಪ್ರತಿಭೆ, ಮೆರೆಸಿದರು ಎಂದು ಅಭಿಪ್ರಾಯಪಟ್ಟರು.

'ಯೋಜನೆಗಳ ನಿರೂಪಣೆ ಮತ್ತು ಇಂದಿನ ಭಾರತಕ್ಕೆ ಅವುಗಳ ಪ್ರಾಮುಖ್ಯತೆ' ಎಂಬ ವಿಷಯದ ಮೇಲೆ ಮಾತನಾಡಿದ ಪ್ರೊ. ವಿ.ಕೆ.ನಟರಾಜ್ ರವರು, ಸಮಾಜವಾದಿ ಮತ್ತು ಬಂಡವಾಳಶಾಹಿ ಎರಡೂ ವ್ಯವಸ್ಥೆಯ ಯೋಜನೆಗಳಲ್ಲಿ ದೋಷವಿದೆ, ಆದ್ದರಿಂದ ಅವುಗಳ ಒಳ್ಳೆಯ ಅಂಶಗಳನ್ನು ಕ್ರೋಢೀಕರಿಸಿ ಯೋಜನೆಗಳನ್ನು ರೂಪಿಸಬೇಕಾಗಿದೆ ಎಂದರು.

ಈ ಗೋಷ್ಠಿಯ ಅಧ್ಯಕ್ಷತೆಯನ್ನು ಟಿ.ಪಿ. ರಮೇಶ್ (ಕೆಎಸ್‌ಎಸ್‌ಡಿಸಿ ಅಧ್ಯಕ್ಷರು) ವಹಿಸಿದ್ದರು.

'ವಿಶ್ವೇಶ್ವರಯ್ಯನವರು ಕೊಡುಗೆಗಳು' ಎಂಬ ವಿಷಯದಲ್ಲಿ ಬ್ರಿಟಿಶರೊಡನೆ ಆರ್ಥಿಕ ಅಭಿವೃದ್ಧಿಯ ಸ್ವಾತಂತ್ರ್ಯಕ್ಕಾಗಿ ಹೋರಾಟ' ಎಂಬ ಪ್ರಬಂಧ ಮಂಡಿಸಿದ ಪ್ರಾಧ್ಯಾಪಕ ಯತಿರಾಜ್‌ರವರು, 'ಪರೋಕ್ಷ ಸ್ವಾತಂತ್ರ್ಯ ಹೋರಾಟಗಾರ'ರಾದ ಡಾ|| ಎಂ.ವಿ. ಬ್ರಿಟಿಶರೊಡನೆ ಆರ್ಥಿಕ ಅಭಿವೃದ್ಧಿಗಾಗಿ ಹೋರಾಟ ಮಾಡಿ, ಗುಲಾಮಗಿರಿಯಿಂದ ಹೊರತಾದ ಭಾರತದ್ದೇ ಆದ ಸ್ವಾವಲಂಬೀ ಅಭಿವೃದ್ಧಿ ಮಾದರಿಯಲ್ಲಿ ದೇಶವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸಿದರು ಎಂದರು. ನಾಡಿನ ಸಮಗ್ರ ಅಭಿವೃದ್ಧಿಗಾಗಿ ಹಂಬಲಿಸುತ್ತಿದ್ದ ಇವರು ಎಲ್ಲಾ ರಂಗಗಳಲ್ಲಿಯೂ ತಮ್ಮ ಅದ್ಭುತ ಪ್ರತಿಭೆ ಮತ್ತು ದಣಿವರಿಯದ ಪ್ರಯತ್ನದ ಛಾಪು ಮೂಡಿಸಿದರು. ತಮ್ಮ ಅಸಾಮಾನ್ಯ ಪ್ರತಿಭೆ ಮತ್ತು ಸಾಮಾನ್ಯರ ಅಭಿಪ್ರಾಯಗಳನ್ನು ಮೇಳೈಸುವ ಸಲುವಾಗಿ ಆಗಿನ ಮೈಸೂರು ಸಂಸ್ಥಾನದಲ್ಲಿ ಜಿಲ್ಲಾಮಟ್ಟದ ಆರ್ಥಿಕ ಸಮ್ಮೇಳನವನ್ನು ಸಂಘಟಿಸಿ ಜನರ ಅಭಿಪ್ರಾಯ ಮತ್ತು ಅವಶ್ಯಕತೆಗಳನ್ನು ಸಂಗ್ರಹಿಸಿ ಕೆಲಸ ನಿರ್ವಹಿಸುತ್ತಿದ್ದರು ಎಂದು ಅವರು ಅಭಿಪ್ರಾಯ ಪಟ್ಟರು.

'ಮಂಡ್ಯ ಜಿಲ್ಲೆಗೆ ಎಂ.ವಿ.ಕೊಡುಗೆ ಮತ್ತು ಮುಂದಿನ ದಾರಿ' ಎಂಬ ಪ್ರಬಂಧ ಮಂಡಿಸಿದ ಕೆಂಪಯ್ಯನವರು ಸ್ವಾತಂತ್ರ್ಯಾನಂತರದಲ್ಲಿ ಮಂಡ್ಯ ಜಿಲ್ಲೆಗೆ ಯಾವುದೇ ಬೃಹತ್ ಕೈಗಾರಿಕೆ ಬಂದಿಲ್ಲ, ಸ್ವಾತಂತ್ರ್ಯ ಪೂರ್ವದಲ್ಲಿ ಎಂ.ವಿ. ಸ್ಥಾಪಿಸಿದ ಶಿಂಷಾ ಜಲವಿದ್ಯುತ್ ಯೋಜನೆ, ಮೈಷುಗರ್‌ಗಳೇ ಇಂದೂ ಪ್ರಮುಖ ಉದ್ದಿಮೆಗಳು, ಜಿಲ್ಲೆಯಲ್ಲಿ ತೀವ್ರ ಕೈಗಾರಿಕೀಕರಣ ಮತ್ತು ಆಧುನಿಕ ವ್ಯವಸಾಯ ಜಾರಿಗೆ ಬರದ ಹೊರತು ಜಿಲ್ಲೆಯ ಸಮಸ್ಯೆಗಳು ಬಗೆಹರಿಯಲಾರವು ಎಂದರು.

ಮಂಡ್ಯ ಜಿಲ್ಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಹಾವಳಿ ಹೆಚ್ಚಾಗುತ್ತಿದೆ. ಆರ್ಥಿಕ-ಸಾಮಾಜಿಕ ಕಾರಣಗಳಿಂದಾಗಿ ಶಿಕ್ಷಣದಿಂದ ದೂರ ಉಳಿಯುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದ ಜಿ.ರಾಮಕೃಷ್ಣ ಮಂಡ್ಯ ಜಿಲ್ಲೆಯ ಶಿಕ್ಷಣ ಎಂಬ ಪ್ರಬಂಧ ಮಂಡಿಸಿದರು. ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರಖ್ಯಾತ ಸಮಾಜ ವಿಜ್ಞಾನಿ ವರ್ಗೀಸ್ ವಹಿಸಿದ್ದರು.

ಕೊನೆಯ ಗೋಷ್ಠಿ 'ಆರ್ಥಿಕ ನೀತಿ ಮತ್ತು ಪರ್ಯಾಯ ಅಭಿವೃದ್ಧಿ ಪಥಗಳು' ಎಂಬ ವಿಷಯದಲ್ಲಿ 'ನೆಹರೂರವರ ಅಭಿವೃದ್ಧಿಯ ಮಾದರಿ ಹಾಗೂ ಇಂದಿನ ಭಾರತದ ಸಮಸ್ಯೆಗಳು' ಎಂಬ ಪ್ರಬಂಧ ಮಂಡಿಸಿದ ಗುರುಶಾಂತ್‌ರವರು ಸ್ವಾತಂತ್ರ್ಯಾನಂತರದಲ್ಲಿ ನೆಹರು, ಎಂ.ವಿ.ರವರ ಮುತುವರ್ಜಿಯಿಂದ ಯೋಜನೆಗಳನ್ನು ರೂಪಿಸಲಾಯಿತು, ಇದಕ್ಕೆ ಸಮಾಜವಾದಿ ರಶ್ಯಾದ ಮಾದರಿ ಪ್ರೇರಕವಾಗಿತ್ತು ಎಂದರು. ಆದರೆ ನಂತರದ ಆಳುವ ವರ್ಗ ಯೋಜನೆಗಳನ್ನು ಅದರ ಪ್ರಾಮುಖ್ಯತೆಯನ್ನು ಕೈ ಬಿಡುತ್ತಾ ಬಂದಿವೆ. ಇಂದು ಯೋಜನೆಗಳನ್ನು ಹುಡುಕುವಂತಾಗಿದೆ. ಆದರೆ ಯೋಜನೆ ರಹಿತ ಅಭಿವೃದ್ಧಿಯಿಂದ ಈ ದೇಶದ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ ಎಂದ ಅವರು, ಕಳೆದ 50 ವರ್ಷಗಳಲ್ಲಿ ಯೋಜನೆಗಳು ನಿರ್ವಹಿಸಿದ ಜವಾಬ್ದಾರಿ ಮತ್ತು ಪ್ರತಿ ಪಂಚವಾರ್ಷಿಕ ಯೋಜನೆಗೆ ಸರ್ಕಾರದ ಪಾಲುಗಳನ್ನು ಕೂಲಂಕುಷವಾಗಿ ಬಿಡಿಸಿಟ್ಟರು.

'ಭಾರತದ ಅಭಿವೃದ್ಧಿಯ ಜನಪರ ದಾರಿ' ಎಂಬ ಪ್ರಬಂಧ ಮಂಡಿಸಿದ ಜಿ.ಎನ್. ನಾಗರಾಜ್‌ರವರು 'ನೆನೆ ನೆನೆ ಆ ದಿನವ......' ಎಂಬ ಕವಿತೆಯೊಂದಿಗೆ ಆರಂಭಿಸಿ ಸ್ವಾತಂತ್ರ್ಯದ ಸಂದರ್ಭದಲ್ಲಿದ್ದನಮ್ಮ ಉದ್ದೇಶವನ್ನು ನೆನಪಿಸಿಕೊಳ್ಳಬೇಕಾಗಿದ ಎಂದರು. ಇಂದು ಬಡವರು ಮತ್ತು ಶ್ರೀಮಂತರ ನಡುವಿನ ಕಂದರ ಹೆಚ್ಚುತ್ತಿದೆ. ಸರಿಯಾದ ಇಚ್ಛಾ ಶಕ್ತಿಯಿದ್ದರೆ, ದೇಶದ ಸಮಸ್ಯೆಗಳನ್ನು ಬಗೆಹರಿಸುವುದು ಪ್ರಶ್ನೆಯೇ ಅಲ್ಲ. ಆದರೆ ಇದು ಶೇ 40 ರಷ್ಟು ಜನರು ಬಡತನ ರೇಖೆಯ ಕೆಳಗಿದ್ದಾರೆ, ದೇಶ ಮತ್ತೆ ವಸಾಹತು ಆಗುತ್ತಿದೆ. ಆದರೆ ನಾವು ಸರಿಯಾದ ಚಳುವಳಿಯ ಮೂಲಕ ದೇಶವನ್ನು ಉಳಿಸಿ, ಬೆಳೆಸಬೇಕಾಗಿದೆ, ಬಡವರ ಕೈಗೆ ಹಣ ಸಿಗದ ಹೊರತು, ಬಡವರು ಶ್ರೀಮಂತರ ಅಂತರ ಕಡಿಮೆಯಾಗುವವವರೆಗೆ ದೇಶ ಸುಭಿಕ್ಷವಾಗದು ಎಂದರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀಮತಿ ಮೀರಾ ಶಿವಲಿಂಗಯ್ಯವಹಿಸಿದರು.

ಸಮಾರೋಪ....

ಸಮಾರೋಪ ಭಾಷಣ ಮಾಡಿದ ಕಾಂ| ಜಿ.ವಿ.ಶ್ರೀರಾಮರೆಡ್ಡಿಯವರು ಬಂಡವಾಳಶಾಹಿ ವ್ಯವಸ್ಥೆಯನ್ನು ಹೀಗೆಳೆದು ಅಮೆರಿಕಾ ದೇಶದ ಒಂದು ಉದಾಹರಣೆಯೊಂದಿಗೆ ಈ ವ್ಯವಸ್ಥೆ ಎಷ್ಟು ನೀಚ, ಹೀನಾಯ ವ್ಯವಸ್ಥೆ ಎಂದು ತಿಳಿಸಿ, ಬಂಡವಾಳಶಾಹಿ ಗುಣವನ್ನು ಮಾರ್ಕ್ಸ್ ವರ್ಣಿಸಿರುವ ಹಾಗೆ ಅದು ಯಾವುದೇ ಕ್ಷಣವು ಸುಮ್ಮನಿರಲು ಸಾಧ್ಯವಿಲ್ಲ, ಅದು ಯಾವುದೇ ಕ್ಷಣದಲ್ಲಿ ತನ್ನ ಯಜಮಾನನ್ನೇ ನುಂಗಿ ಬಿಡುತ್ತದೆ ಎಂದರು. ಅಧ್ಯಕ್ಷತೆಯನ್ನು ಕೆ.ಇ.ಶ್ರೀರಾಮಪ್ಪ ವಹಿಸಿದ್ದರೆ ಮೋಹನ್ ಕುಮಾರ್ ಮುಖ್ಯ ಅತಿಥಿಗಳಾಗಿದ್ದರು.

ಈ ವಿಚಾರ ಸಂಕಿರಣದ ಸಂದರ್ಭದಲ್ಲಿ ಆಕರ್ಷಕವಾದ ಜನಪದ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ವಿಶೇಷವಾಗಿತ್ತಲ್ಲದೆ, ಪುಸ್ತಕ ಪ್ರದರ್ಶನ ಮತ್ತು ವಸ್ತು ಪ್ರದರ್ಶನ ಏರ್ಪಡಿಸಿ ಮಂಡ್ಯ ಜಿಲ್ಲೆಯ ಜನತೆಯ ಗಮನವನ್ನು ಡಾಂ|| ಎಂ.ವಿ.ಯವರ ಬಗ್ಗೆ ಸೆಳೆಯಲು ಸಾಧ್ಯವಾಯ್ತು. ○

ರಾಜೀವಗಾಂಧಿ ಆರೋಗ್ಯ ವಿಜ್ಞಾನ ವಿ.ವಿ. ವಿದ್ಯಾರ್ಥಿಗಳು ಮತ್ತೆ ಹೋರಾಟಕ್ಕೇಕೆ ಇಳಿದಿದ್ದಾರೆ?

ಕರ್ನಾಟಕದಲ್ಲಿ ವೈದ್ಯಕೀಯ- ಅರೆ ವೈದ್ಯಕೀಯ ಶಿಕ್ಷಣಕ್ಕೆ ಹೊಸ ರೂಪ ಕೊಡಲು ರಾಜೀವಗಾಂಧಿ ವಿ.ವಿ.ಯನ್ನು ಸ್ಥಾಪಿಸಲಾಯಿತು. ಅನೇಕ ಸುಧಾರಣೆಗಳನ್ನು ವೈದ್ಯಕೀಯ ಶಿಕ್ಷಣರಂಗದಲ್ಲಿ ತರುವುದಾಗಿ ಭರವಸೆ, ರಾಜ್ಯದ ಜನತೆಯಲ್ಲಿ ಭರವಸೆ ಮೂಡಿದ ಹೊಸದರಲ್ಲಿಯೇ ವಿ.ವಿ.ಯು ದಂತ ವೈದ್ಯಕೀಯ, ನೈಸರ್ಗಿಕ ವಿಜ್ಞಾನ ಮತ್ತು ಯೋಗ (ಬಿ.ಎನ್.ವೈ.ಎಸ್) ನರ್ಸಿಂಗ್, ಫಾರ್ಮಸಿ ವಿದ್ಯಾರ್ಥಿಗಳ ಆಘಾತಕಾರಿ ಫಲಿತಾಂಶಗಳನ್ನು ಘೋಷಿಸಿ, ಈ ಭರವಸೆಯನ್ನು ಹುಸಿ ಮಾಡಿದೆ.

ಶೈಕ್ಷಣಿಕ ವರ್ಷದ ಆರಂಭದಿಂದಲೂ ಅನಿರೀಕ್ಷಿತತೆಗಳನ್ನು ಕೊಡುಗೆಯಾಗಿ ವಿದ್ಯಾರ್ಥಿಗಳಿಗೆ ನೀಡಿದ ವಿಶ್ವವಿದ್ಯಾಲಯವು ಪಠ್ಯಕ್ರಮ-ಪ್ರಶ್ನೆಪತ್ರಿಕೆ ಮಾದರಿಗಳನ್ನು ಮೊದಲ್ಗೊಂಡು ಪರೀಕ್ಷಾ ವಿಧಾನ, ಫಲಿತಾಂಶ ಪ್ರಕಟಣೆಗಳಲ್ಲೂ ಕೂಡ ಅವ್ಯವಸ್ಥೆಗಳನ್ನು ಪ್ರದರ್ಶಿಸಿ ವಿದ್ಯಾರ್ಥಿಗಳ ಭವಿಷ್ಯವನ್ನೇ ಮಂಕುಗೊಳಿಸಿದೆ.

ಮೊದಲ ವರ್ಷದ ದಂತ ವೈದ್ಯಕೀಯ ವಿದ್ಯಾರ್ಥಿಗಳ ಫಲಿತಾಂಶವು ಪ್ರಕಟವಾಗಿದ್ದು ಶೇ. 60 ರಷ್ಟಿರುತ್ತಿದ್ದ ಫಲಿತಾಂಶವು (ಬೆಂಗಳೂರು ವಿ.ವಿ.ಯಲ್ಲಿ) ಈ ವರ್ಷ ಶೇ. 24.8 ಕ್ಕೆ ಇಳಿದಿದೆ.

ಅನಾಟಮಿ ಪತ್ರಿಕೆಯಲ್ಲಿ 12 ಅಂಕಗಳ ಪ್ರಶ್ನೆಗಳು ಪಠ್ಯಕ್ರಮಕ್ಕೆ ಹೊರತಾಗಿದ್ದವು. ವಿ.ವಿ.ಯ ಉಪಕುಲಪತಿ ಡಾ|| ಕಾಂತಾರವರೇ ರೂಪಿಸಿದ್ದ ಈ ಪ್ರಶ್ನೆ ಪತ್ರಿಕೆಯಲ್ಲಿನ ಅಚಾತುರ್ಯವನ್ನು ಡಾ ||ಕಾಂತಾ ಸೇರಿದಂತೆ ಅಧಿಕಾರಿಗಳು ಸಮರ್ಥಿಸಿಕೊಳ್ಳುತ್ತಾರೆ. ಮಧ್ಯೆ ಅವಕಾಶವಿಲ್ಲದಂತೆ ಪ್ರಾಯೋಗಿಕ- ಬೋಧನಾ (Theory) ಪರೀಕ್ಷೆಗಳನ್ನು ನಡೆಸಲಾಯಿತಲ್ಲದೇ, ಪರೀಕ್ಷೆ 2 ತಿಂಗಳಿರುವಂತೆ ಪ್ರಶ್ನೆಪತ್ರಿಕೆ ಮಾದರಿಯನ್ನು ಮಾರ್ಪಡಿಸಲಾಯಿತು. ಜೀವ ರಸಾಯನ ಶಾಸ್ತ್ರಕ್ಕೆ ಪಠ್ಯಕ್ರಮವೇ ಇಲ್ಲ. ಇನ್ನು ಚಿಕ್ಕ ಪುಟ್ಟ ಮಾರ್ಪಾಡುಗಳಿಗೆ ಲೆಕ್ಕವೇ ಇಲ್ಲ.

ಬಿ.ಎಸ್.ಸಿ.(ನರ್ಸಿಂಗ್) ವಿದ್ಯಾರ್ಥಿಗಳ ಪಾಡಂತೂ ಹೇಳತೀರದು. ಸುಮಾರು ಪರೀಕ್ಷೆಗೆ ಒಂದು ವಾರವಿದ್ದಂತೆ ಶೈಕ್ಷಣಿಕ ಮನೋವಿಜ್ಞಾನ (Education Psychology) ಎಂಬ ಹೊಸ ವಿಷಯವನ್ನೇ ಸೃಷ್ಟಿಸಲಾಯಿತು. ಪ್ರಶ್ನೆಪತ್ರಿಕೆಗಳಲ್ಲೂ ಸುಮಾರು 50 ಅಂಕಗಳಿಗೂ ಹೆಚ್ಚು ಪ್ರಶ್ನೆಗಳಿಗೂ ವಿಷಯಕ್ಕೂ ಸಂಬಂಧವೇ ಇಲ್ಲವೆನ್ನುವಷ್ಟು ಪಠ್ಯೇತರ ಪ್ರಶ್ನೆಗಳು ಕಾಣಿಸಿಕೊಂಡಿದ್ದವು. ನ್ಯೂಟ್ರಿಷನ್ ಪ್ರಶ್ನೆ ಪತ್ರಿಕೆಯಂತೂ ಆದರ್ಶ ಶಿಕ್ಷಕನ ಲಕ್ಷಣಗಳೇನು? ಎಂಬ ಪ್ರಶ್ನೆ ಕೇಳಿದೆ. ಆಹಾರದ ಗುಣಮಟ್ಟದ ಬಗೆಗೆ ಮೀಸಲಾದ ಪಶ್ನೆ ಪತ್ರಿಕೆಯಲ್ಲಿ ಆದರ್ಶ ಶಿಕ್ಷಕನೆಲ್ಲಿಂದ ಬಂದ ನೀವೇ ಯೋಚಿಸಿ? ಜತೆಗೆ ಈವರೆಗೂ ಇದ್ದ ಕ್ಯಾರಿ ಓವರ್ ವ್ಯವಸ್ಥೆಯನ್ನು ರದ್ದುಪಡಿಸಲಾಗಿದೆ.

ನೈಸರ್ಗಿಕ-ಯೋಗ ವಿಜ್ಞಾನ ವಿದ್ಯಾರ್ಥಿಗಳದ್ದೂ ಅಸಂಖ್ಯ ಸಮಸ್ಯೆಗಳು. ಒಟ್ಟಾರೆ ಅಂಕಗಳ ಆಧಾರದಲ್ಲಿ ವಿಷಯಕ್ಕೆ ಒಂದರಂತೆ ಕೃಪಾಂಕ ನೀಡಿಕೆಯನ್ನು ನಿಲ್ಲಿಸಲಾಗಿದೆ. ಕಾಲೇಜಿನಲ್ಲಿ ಶಿಕ್ಷಕರೇ ಇಲ್ಲದಿರುವುದಂತೂ ಸರಿಯೇ ಬಿಡಿ, ಶೈಕ್ಷಣಿಕ ವರ್ಷವನ್ನೂ 2 ವರ್ಷ ಮೊಟಕು ಗೊಳಿಸಿ ಅಧಿಕ ಪಠ್ಯಕ್ರಮ ಹೇರಲಾಗಿದೆ.

ಈ ಎಲ್ಲಾ ವಿದ್ಯಾರ್ಥಿಗಳನ್ನು ಸೇರಿದಂತೆ ಇಡೀ ರಾಜೀವ್‌ಗಾಂಧಿ ವಿಶ್ವವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳನ್ನು ಕಾಡುತ್ತಿರುವ ಮುಖ್ಯ ಸಮಸ್ಯೆಯೆಂದರೆ ವಿ.ವಿ.ಯ ಮರುಮೌಲ್ಯಮಾಪನ ವ್ಯವಸ್ಥೆಯನ್ನೇ ರದ್ದು ಮಾಡಿರುವುದು ಮತ್ತು ಪಠ್ಯೇತರ ಪ್ರಶ್ನೆಗಳಿಗೆ ಕೃಪಾಂಕಗಳನ್ನು ನಿರಾಕರಿಸಿರುವುದು.

ಇದಕ್ಕೆಲ್ಲ ಕಳಶಪ್ರಾಯವಾಗಿ, ಸರ್ಕಾರವು ತೇರ್ಗಡೆಯಾಗದೇ ಮುಂದಿನ ತರಗತಿಗಳಿಗೆ ಹೋಗುವ ಅವಕಾಶವಿಲ್ಲದ ವಿದಾರ್ಥಿಗಳಿಂದ ಆರು ತಿಂಗಳವರೆಗೆ 1/4 ರಷ್ಟು ಬೋಧನಾ ಶುಲ್ಕ ವಸೂಲು ಮಾಡುತ್ತಿದೆ. ಸಾವಿರಗಟ್ಟಲೆ ರೂಪಾಯಿಗಳ ಈ ಹಗಲು ದರೋಡೆಗೆ ಶೇ. 60 ರಷ್ಟು ವಿದ್ಯಾಥಿ4ಗಳು ಬಲಿಯಾಗಬೇಕಿರುವುದು ಅತ್ಯಂತ ದುರದೃಷ್ಟಕರ.

ರಾಜ್ಯಾದ್ಯಂತ ಈ ಅನ್ಯಾಯವನ್ನು ಕಂಡು ಸಿಡಿದೆದ್ದ ವಿದ್ಯಾರ್ಥಿಗಳಿಗೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ದನಿ ನೀಡಿದೆ. ಮೊಟ್ಟ ಮೊದಲು ರಾಜೀವ ಗಾಂಧಿ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಕ್ರಿಯಾ ಸಮಿತಿಯನ್ನು ಸಂಘಟಿಸಲಾಯಿತು. ಎಂ.ಎಸ್. ರಾಮಯ್ಯ ಮಹಾ ವಿದ್ಯಾಲಯದ ವಿದ್ಯಾರ್ಥಿನಿ ರಿಚಾ ಅಪರಾಜಿತ ಇದರ ಸಂಚಾಲಕಿ. ವಿ.ವಿ.ಯ ಎಲ್ಲ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಒಂದು ಒಗ್ಗಟ್ಟಿನ ಹೋರಾಟ ರೂಪಿಸುವ ರಾಜೀವ ಗಾಂಧಿ ವಿ.ವಿ. ವಿದ್ಯಾರ್ಥಿ ಕ್ರಿಯಾ ಸಮಿತಿ ಕಾರ್ಯೋನ್ಮುಖವಾಯಿತು.

ನವೆಂಬರ್ 12 ರಂದು ರಾಜೀವಗಾಂಧಿ ವಿ.ವಿ.ಯೆದುರು ಧರಣಿಯಲ್ಲಿ ಬೆಂಗಳೂರಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಉಪಕುಲಪತಿಗಳಿಗೆ ಸಮಸ್ಯೆಗಳನ್ನು ತಿಳಿಸಿದ ನಂತರ ಮನವಿ ಪತ್ರ ನೀಡಲಾಯಿತು. ವೈಯುಕ್ತಿಕವಾಗಿ ಕ್ರಿಯಾ ಸಮಿತಿ-ಎಸ್.ಎಫ್.ಐ. ನ ಮುಖಂಡರೊಡನೆ ಮಾತನಾಡಿದ ಉಪಕುಲಪತಿಗಳು ಎಲ್ಲಾ ಬೇಡಿಕೆಗಳನ್ನು ತಳ್ಳಿ ಹಾಕಿದರು.

ನವೆಂಬರ್ 18 ರಂದು ರಾಜ್ಯದ ಹಲವಾರು ಕಡೆಯ ವಿದ್ಯಾರ್ಥಿಗಳನ್ನೊಳಗೊಂಡ ಏಕೀಕೃತ ಪ್ರತಿಭಟನೆ ವ್ಯಕ್ತವಾಯಿತು. ವೈದ್ಯಕೀಯ ಶಿಕ್ಷಣ ಸಚಿವ ಡಾ|| ಶಂಕರ ನಾಯಕರ ನಿವಾಸದ ಬಳಿ ಧರಣಿಯ ಈ ಕಾರ್ಯಕ್ರಮಕ್ಕೆ ವಿ.ವಿ.ಯ ವಿವಿಧ ವಿಭಾಗಗಳ ಐದು ನೂರರಷ್ಟು ವಿದ್ಯಾರ್ಥಿಗಳು ಸೇರಿದ್ದರು. ಅದೇ ದಿನ ಮಾತುಕತೆಗೆ ಕರೆದ ಸಚಿವರು ವಿದ್ಯಾರ್ಥಿಗಳ ಕ್ರಿಯಾ ಸಮಿತಿಯ ಪ್ರತಿನಿಧಿ ಎಸ್.ಎಫ್.ಐ. ನ ಪ್ರತಿನಿಧಿಗಳೊಂದಿಗೆ ಸಮಸ್ಯೆಗಳ ಕುರಿತು ಚರ್ಚಿಸಿದ್ದಾರೆ, ನಿಖರ ಭರವಸೆ ಸಿಕ್ಕಿಲ್ಲ.

ಹೋರಾಟದುದ್ದಕ್ಕೂ ಗಮನಿಸಬಹುದಾದ ಒಂದು ಅಂಶವೆಂದರೆ ಎ.ಬಿ.ವಿ.ಪಿ. ಯ ಬೆರಳೆಣಿಕೆಯಷ್ಟು ಕಾರ್ಯಕರ್ತರು ಹೋರಾಟವನ್ನು ಮುರಿಯಲು ನಾನಾ ತಂತ್ರ ಹೂಡಿದ್ದು. ನವೆಂಬರ್ 18ರಂದು ವಿದ್ಯಾರ್ಥಿಗಳ ಐಕ್ಯ ಹೋರಾಟವನ್ನು ದಿಕ್ಕು ತಪ್ಪಿಸುವ ವ್ಯರ್ಥ ಪ್ರಯತ್ನವಾಗಿ ಕಾಲೇಜ್ ಬಂದ್‌ಗೆ ಎ.ಬಿ.ವಿ.ಪಿ. ಕರೆ ನೀಡಿತ್ತು. ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರು ಕ್ಯಾರೇ ಅನ್ನದೆ ಈ ಬಂದ್ ಕರೆ ಸಂಪೂರ್ಣ ವಿಫಲವಾಗಿ, ಎ.ಬಿ.ವಿ.ಪಿ. ಯಂಥ ಐಕ್ಯ ವಿರೋಧಿ ಶಕ್ತಿಗಳ ನೈಜ ರೂಪವನ್ನು ವಿದ್ಯಾರ್ಥಿಗಳು ತಿಳಿಯಲು ಮಾತ್ರ ಸಹಾಯಕವಾಯಿತು.

ಹೋರಾಟವನ್ನು ನಿರ್ದೇಶಿಸಿ ಬೆಂಬಲಿಸುತ್ತಿರುವ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜೀವಗಾಂಧಿ ವಿ.ವಿ.ಯ ವಿದ್ಯಾರ್ಥಿಗಳ ಆಶೋತ್ತರಗಳಿಗೆ ಸ್ಪಂದಿಸಿದೆಯಲ್ಲದೇ ಹೋರಾಟವನ್ನು ಉನ್ನತ ಹಂತಕ್ಕೆ ಹಂತಕ್ಕೆ ಕೊಂಡೊಯ್ಯುವ ರಾಜ್ಯವ್ಯಾಪಿ ಪ್ರಯತ್ನಗಳನ್ನು ನಡೆಸಿದೆ.

ವರದಿ: ಶ್ರೀಧರ ಪ್ರಭು

ಮಂಡ್ಯ ತಾಲೂಕು ಅಂಗನವಾಡಿ ಸಮ್ಮೇಳನ

ನವೆಂಬರ್ 9 ರಂದು ಮಂಡ್ಯ ನಗರದಲ್ಲಿ ಮಂಡ್ಯ ತಾಲೂಕಿನ ಅಂಗನವಾಡಿ ನೌಕರರ ಸಮ್ಮೇಳನ ನಡೆಯಿತು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ಕೆ.ಎಸ್. ವಿಮಲಾ, ಅಂಗನವಾಡಿ ನೌಕರರಿಗೆ ಗೌರವಧನಕ್ಕೆ ಬದಲಾಗಿ ಎಲ್ಲಾ ನೌಕರರಂತೆ ಇವರಿಗೂ ವೇತನ ನೀಡಬೇಕೆಂದು ಸರ್ಕಾರವನ್ನು ಆಗ್ರಹಪಡಿಸಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅಂಗನವಾಡಿ ನೌಕರರ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ಅಂಗನವಾಡಿ ನೌಕರರಿಗೆ 12 ದಿವಸ ಬೇಸಿಗೆ ರಜವನ್ನು ಕೊಡಬೇಕೆನ್ನುವ ಸರ್ಕಾರವು ಅದನ್ನು ಬೇಗನೆ ಜಾರಿಗೊಳಿಸಬೇಕೆಂದು ಹಾಗೂ ರಾಜ್ಯ ಸರ್ಕಾರದ ಕಾನೂನಿನ ಪ್ರಕಾರ ಕನಿಷ್ಠ 1250 ರೂಗಳನ್ನು ಕೂಲಿಯಾಗಿ ನೀಡಬೇಕೆಂದು ಅವರು ಆಗ್ರಹ ಪಡಿಸಿದರು.

ಸಭೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯೆ ಹಾಗೂ ಎಸ್‌ಎಫ್ ಐ ನ ರಾಜ್ಯ ಉಪಾಧ್ಯಕ್ಷೆ ಕೆ.ಎನ್.ಲಕ್ಷ್ಮಿ, ಸಿಐಟಿಯು ಜಿಲ್ಲಾಧ್ಯಕ್ಷ ಶಂಕರಯ್ಯ, ಸಿಪಿಐ(ಎಂ) ನ ಜಿ. ರಾಮಕೃಷ್ಣ, ಡಿವೈಎಫ್‌ಐ ಮುಖಂಡ ಭರತ ರಾಜ್ ಭಾಗ ವಹಿಸಿದ್ದರು.

ನೂತನ ಸಮಿತಿಗೆ ಅಧ್ಯಕ್ಷೆಯಾಗಿ ಕೆ. ಆರ್.ಪಂಕಜ, ಉಪಾಧ್ಯಕ್ಷೆಯಾಗಿ ವಸಂತಮ್ಮ, ನಾಗರತ್ನ, ಚೌಡಮ್ಮ, ಸೌಭಾಗ್ಯ, ಕಾರ್ಯದರ್ಶಿಯಾಗಿ ಪುಷ್ಪಾವತಿ, ಸಹಕಾರ್ಯದರ್ಶಿಯಾಗಿ ಗಾಯಿತ್ರಿ, ಚೂಡಾಮಣಿ, ಮಂಗಳ, ಖಜಾಂಚಿಯಾಗಿ ಪ್ರಭಾಮಣಿ, ಹಾಗೆಯೆ ಸಮಿತಿಸದಸ್ಯರಾಗಿ 13 ಜನರನ್ನು ಆಯ್ಕೆಮಾಡಲಾಯಿತು.



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಈ ನಡುವೆ ಸಮಾಜವಾದಿ ಮತ್ತುಕಮ್ಯುನಿಸ್ಟ್ ಆಂದೋಲನ ಮೂಡಿಬರಲಾರಂಭಿಸಿತ್ತು. ಜುಗಾಂತರ್ ಪಾರ್ಟಿಯ ಒಬ್ಬ ಪ್ರಮುಖ ಮುಖಂಡರಾಗಿದ್ದ, ಶಸ್ತ್ರಾಸ್ತ್ರಗಳ ಹುಡುಕಾಟದಲ್ಲಿ ಜರ್ಮನಿಗೆ ಹೋಗಿದ್ದ ನರೇಂದ್ರನಾಥ್ ಭಟ್ಟಾಚಾರ್ಯ ಜಪಾನ್ ಮೂಲಕ ಅಮೆರಿಕಾಕ್ಕೆ ಹೋಗಿ ಹೆಸರು ಬದಲಿಸಿಕೊಂಡು ಎಂ.ಎನ್.ರಾಯ್ ಆಗಿ ಅಲ್ಲಿಂದ ಮೆಕ್ಸಿಕೋ ತಲುಪಿದರು. ಅಲ್ಲಿ ಕಮ್ಯುನಿಸ್ಟ್ ಪ್ರಭಾವಕ್ಕೊಳಗಾಗಿ ಮಾಸ್ಕೋ ತಲುಪಿದರು. ಈ ಎಂ.ಎನ್.ರಾಯ್ ಮತ್ತಿತರ 7 ಮಂದಿ ಸೇರಿ ದೂರದ ಟಾಶ್ಕೆಂಟ್‌ನಲ್ಲಿ 1920 ರ ಅಕ್ಟೋಬರ್ 17 ರಂದು ಭಾರತೀಯ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿದರು.




ಅದೇ ವೇಳೆಗೆ ಕಲ್ಕತ್ತೆಯಲ್ಲಿ **ಮುಝಫರ್ ಅಹ್ಮದ್** ಮುಂಬೈಯಲ್ಲಿ **ಶ್ರೀಪಾದ್ ಅಮೃತ್ ಡಾಂಗೆ**, ದಕ್ಷಿಣದಲ್ಲಿ **ಸಿಂಗಾರವೇಲು ಚೆಟ್ಟಿಯಾರ್** ಕಮ್ಯುನಿಸ್ಟ್ ವಿಚಾರಗಳೊಂದಿಗೆ ಕೆಲಸ ಮಾಡಲಾರಂಭಿಸಿದ್ದರು. ಖಿಲಾಫತ್ ಆಂದೋಲನದಿಂದ ಪ್ರಭಾವಿತರಾಗಿ ಬ್ರಿಟಿಶ್ ದಮನವನ್ನು ಎದುರಿಸಲು ಸಿದ್ಧವಾಗಲೆಂದು ಒಂದು ಲಕ್ಷ ಮುಸಲ್ಮಾನರು ದೇಶ ಬಿಟ್ಟು ಅಫಘಾನಿಸ್ತಾನಕ್ಕೆ ಹೋದರು. ಇದನ್ನು ಮುಹಾಜುರಿನ್ ಆಂದೋಲನ ಎನ್ನುತ್ತಾರೆ. ಇವರಲ್ಲಿ ಕೆಲವರು ಕಮ್ಯುನಿಸಂನತ್ತ ಆಕರ್ಷಿತರಾಗಿ ಈ ಬ್ರಿಟಿಶ್-ವಿರೋಧಿ ಆಂದೋಲನಕ್ಕೆ ಬೆಂಬಲ ಗಳಿಸಲು ಮಾಸ್ಕೋದ ವರೆಗೂ ಹೋದರು. ಟಾಶ್ಕೆಂಟ್ ಯೂನಿವರ್ಸಿಟಿ ಹಾಗೂ ಮಾಸ್ಕೋ ದಲ್ಲಿನ ಪೂರ್ವದ ಶ್ರಮಜೀವಿಗಳ ವಿಶ್ವವಿದ್ಯಾಲಯ' ದಲ್ಲಿ ಅಧ್ಯಯನ ಮಾಡಿ ಭಾರತಕ್ಕೆ ಹಿಂದಿರುಗಲು ನಿರ್ಧರಿಸಿದರು. ಕೆಲವರು ಪರ್ಶಿಯಾ ಮೂಲಕ ಭಾರತಕ್ಕೆ ಬರಲು ಪ್ರಯತ್ನಿಸಿದರೆ ಇನ್ನೂ ಕೆಲವರು ಹಿಂದುಕುಷ್ ಪರ್ವತ ಶ್ರೇಣಿಯನ್ನು ದಾಟಿ ಬರಲು ಪ್ರಯತ್ನಿಸಿದರು. ಇವರನ್ನೆಲ್ಲಾ ಭಾರತದ ಗಡಿ ತಲುಪುತ್ತಿದ್ದಂತೆ ಬ್ರಿಟಿಶ್ ಪೋಲೀಸರು ಬಂಧಿಸಿ ಅವರ ಮೇಲೆ **ಪೇಶಾವರ್ ಬೋಲ್ಶೆವಿಕ್** ಮೊಕದ್ದಮೆ ಹಾಕಿದರು. ಅವರಿಗೆಲ್ಲಾ ಒಂದು ವರ್ಷದಿಂದ ಹತ್ತು ವರ್ಷದ ಶಿಕ್ಷೆಯಾಯಿತು. ಈ ಮುಹಾಜುರಿನ್ ಕ್ರಾಂತಿಕಾರಿಗಳಲ್ಲಿ ಪ್ರಮುಖ ಹೆಸರುಗಳೆಂದರೆ **ಅಬ್ದುಲ್ ಮಜೀದ್, ಶೌಕತ್ ಉಸ್ಮಾನಿ, ಮಿಯಾ ಅಕ್ಬರ್ ಶಹಾ, ರಫೀಕ್ ಅಹ್ಮದ್ ಮತ್ತು** [illegible]





ಮುಝಫರ್ ಅಹ್ಮದ್



ಸಿಂಗಾರ ವೇಲು ಚೆಟ್ಟಿಯಾರ್




ಶೌಕತ್ ಉಸ್ಮಾನಿ

ರಶ್ಯಾದಲ್ಲೊಂದು ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್ ಎಂಬ ಸಂಘಟನೆಯಿದೆ. 1921 ರಲ್ಲಿ ಬ್ರಿಟಿಶ್ ಭಾರತದಲ್ಲಿ ಅವರದೊಂದು ಶಾಖೆ ತೆರೆದು ಬ್ರಿಟಿಶ್ ಭಾರತದ ಮೇಲೆ ಸಾಮ್ರಾಟನ ಸಾರ್ವಭೌಮತೆಯನ್ನು ಕಿತ್ತೆಸೆಯಲು ಶ್ರೀಪಾದ್ ಅಮೃತ್ ಡಾಂಗೆ, ಶೌಕತ್ ಉಸ್ಮಾನಿ ಮತ್ತು ಮುಝಫರ್ ಅಹ್ಮದ್ ಒಂದು ಪಿತೂರಿ ನಡೆಸಿದರು' ಎಂದು ಬ್ರಿಟಿಶ್ ಗುಪ್ತಚರ ಸಂಸ್ಥೆ ವರದಿ ಮಾಡಿತ್ತು. ಈ ಮೂವರಲ್ಲಿ ಉಸ್ಮಾನಿ ತಾಶ್ಕೆಂಟ್‌ನಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷ ಸೇರಿದರೆ, ಡಾಂಗೆ ಮತ್ತು ಮುಝಫರ್ ಅಹ್ಮದ್ ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ್ದವರು. ಅಂದರೆ ಬ್ರಿಟಿಶ್ ದಾಖಲೆಗಳ ಪ್ರಕಾರ ಕೂಡಾ ಭಾರತದ ಕಮ್ಯುನಿಸ್ಟರು ಆರಂಭದಿಂದಲೂ ದೇಶದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದವರು.

ಇದೇ ವೇಳೆಗೆ ಅಂದರೆ ಡಿಸೆಂಬರ್ 1920 ರಲ್ಲಿ ಭಾರತದ ಕಾರ್ಮಿಕ ವರ್ಗದ ಐಕ್ಯ ಅಖಿಲ ಭಾರತ ಸಂಘಟನೆ ಎ.ಐ.ಟಿ.ಯು.ಸಿ. (ಅಖಿಲ ಭಾರತ ಟ್ರೇಡ್‌ಯೂನಿಯನ್ ಕಾಂಗ್ರೆಸ್) ಮುಂಬೈಯಲ್ಲಿ ಸ್ಥಾಪಿನೆಗೊಂಡಿತು. ಭಾರತದ ಎಲ್ಲೆಡೆಯಿಂದ 5 ಲಕ್ಷ ಕಾರ್ಮಿಕರನ್ನು ಪ್ರತಿನಿಧಿಸಿದ್ದ 806 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ರಾಷ್ಟ್ರೀಯ ಆಂದೋಲನದ ತೀವ್ರಗಾಮಿ ಮುಖಂಡರಲ್ಲೊಬ್ಬರಾದ ಲಾಲಾ ಲಜಪತರಾಯ್ ಅದರ ಅಧ್ಯಕ್ಷರಾಗಿ ಆಯ್ಕೆಯಾದರು. 'ಮಿಲಿಟರಿಶಾಹಿ, ಸಾಮ್ರಾಜ್ಯಶಾಹಿ ಬಂಡವಾಳಶಾಹಿಯ ಅವಳಿ-ಜವಳಿ ಮಕ್ಕಳು. ಈ ಮೂರರ ನೆರಳು, ಅದರ ಫಲ, ಅದರ ಹೊಗಳಿಕೆ ಎಲ್ಲವೂ ವಿಷಕಾರಿ. ಈ ವಿಷಕ್ಕೆ ಒಂದು ಪ್ರತ್ಯೌಷಧಿಯನ್ನು ಇತ್ತೀಚೆಗಷ್ಟೇ ಕಂಡುಹಿಡಿಯಲಾಗಿದೆ. ಅದೆಂದರೆ ಸಂಘಟಿತ ಕಾರ್ಮಿಕ ವರ್ಗ" ಎಂಬ ಅವರ ಸ್ವಾಗತ ಭಾಷಣ ಸ್ವಾತಂತ್ರ್ಯ ಆಂದೋಲನಕ್ಕೂ, ಭಾರತದ ಕಾರ್ಮಿಕ ಆಂದೋಲನಕ್ಕೂ ಆರಂಭದಿಂದಲೇ ಇದ್ದ ನಿಕಟ ಸಂಬಂಧವನ್ನು ಎತ್ತಿ ತೋರಿತು.

1921ರಲ್ಲಿ ಅಹಮದಾಬಾದಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಇಬ್ಬರು ಕಮ್ಯುನಿಸ್ಟರಾದ **ಮೌಲಾನಾ ಹಸ್ರತ್ ಮೊಹಾನಿ** ಹಾಗೂ **ಸ್ವಾಮಿ ಕುಮಾರಾನಂದ** ಸಂಪೂರ್ಣ ಸ್ವಾತಂತ್ರ್ಯದ ಠರಾವನ್ನು ಮೊದಲ ಬಾರಿಗೆ ಮಂಡಿಸಿದರು. (ಆಗ ಅದನ್ನು ತಿರಸ್ಕರಿಸಿದರು. ಕಾಂಗ್ರೆಸ್ ಕೊನೆಗೆ 1930ರಲ್ಲಿ ಠರಾವನ್ನು ಅಂಗೀಕರಿಸಬೇಕಾಯಿತು.)






ಇದೇ ವೇಳೆಗೆ "ಬ್ರಿಟೀಶ್ ರಾಜಕುಮಾರ" ನ ಭಾರತ ಭೇಟಿಯನ್ನು ವಿರೋಧಿಸಿ ಮುಂಬೈ, ಕಲ್ಕತ್ತಾಗಳಲ್ಲಿ ಭಾರಿ ಮತಪ್ರದರ್ಶನಗಳು ನಡೆದವು. ಮತಪ್ರದರ್ಶಕರು ಪೋಲೀಸರೊಂದಿಗೆ ಘರ್ಷಣೆಗಿಳಿದು ಮುಂಬೈ ಬೀದಿಗಳಲ್ಲಿ ರಕ್ತ ಹರಿಯಿತು. ಕಲ್ಕತ್ತೆಯಲ್ಲಿ ದೇಶಬಂಧು ಚಿತ್ತರಂಜನ್ ದಾಸ್ ಅವರ ಮಡದಿ ಬಸಂತಿದೇವಿ ಹಾಗೂ ತಂಗಿ **ಊರ್ಮಿಳಾದೇವಿ**ಯವರನ್ನು ಬಂಧಿಸಲಾಯಿತು.



'ಮಾಪಿಳ್ಳೆ ಬಂಡಾಯ' ಅಥವಾ ಮಾಪ್ಲಾ ಬಂಡಾಯ ಈ ಅವಧಿಯ ಒಂದು ಪ್ರಮುಖ ಬ್ರಿಟಿಶ್-ವಿರೋಧಿ ಹೋರಾಟ. ಮಾಪಿಳ್ಳೆಗಳು ಬಹುಪಾಲು ಕೇರಳದ ಮಲಬಾರ್ ಪ್ರದೇಶದಲ್ಲಿನ ಬಡ ರೈತರು ಅಥವಾ ಜೀತದಾಳುಗಳು. ಇವರು ಇಸ್ಲಾಮ್ ಧರ್ಮಾವಲಂಭಿಗಳಾದರ, ಅಲ್ಲಿನ ಜಮೀನ್ದಾರರು ಹಿಂದುಗಳು. ಆದ್ದರಿಂದ ಸಾಮಾನ್ಯವಾಗಿ ಬ್ರಿಟೀಶ್ ಆಳರಸರ ಹಾಗೂ ಜಮೀನ್ದಾರರ ವಿರುದ್ಧ ಈ ಬಡ ರೈತ-ಜೀತದಾಳುಗಳ ಹೋರಾಟಗಳನ್ನು ಕೋಮು ಘರ್ಷಣೆಗಳಾಗಿ ಮಾರ್ಪಾಡಿಸಲಾಗು ತ್ತಿತ್ತು. ಆದರೆ ಖಿಲಾಫತ್ ಆಂದೋಲನ ಹಾಗೂ ಅಸಹ ಕಾರ ಆಂದೋಲನ ಒಟ್ಟು ಗೂಡಿದ್ದರಿಂದ 1921ರಲ್ಲಿ ಮಾಪಿಳ್ಳೆಗಳ ಹೋರಾಟ ಸಾಮ್ರಾಜ್ಯ ಶಾಹಿ-ವಿರೋಧಿ ಹಾಗೂ ಊಳಿಗಮಾನ್ಯ ವಿರೋಧಿ ಸ್ವರೂಪ ಪಡೆಯಿತು. ಆಗಸ್ಟ್ 20ರಂದು ಬ್ರಿಟೀಶ್



ಪುಟ 5 ನೋಡಿ

ಜಾತಿ-ಕೋಮಿನ ಪ್ರಶ್ನೆಯನ್ನು ಬ್ರಿಟಿಶರು ಒಡೆದಾಳಲು ಬಳಸುವ ಪ್ರಯತ್ನ ನಡೆಸಿದಾಗ ರಾಷ್ಟ್ರೀಯ ಆಂದೋಲನ ಅದನ್ನು ಹೇಗೆ ಎದುರಿಸಿತು, ಅದು ಹೇಗೆ ಮುಂದುವರಿದು ಭಾರತದ ಸಂವಿಧಾನದಲ್ಲಿ ಮೀಸಲಾತಿಯ ರೂಪ ಪಡೆಯಿತು ಎನ್ನುವುದನ್ನು ಸಂಕ್ಷಿಪ್ತವಾಗಿ ಮುಂದಿಡುವ ಲೇಖನವಿದು.

ರಾಷ್ಟ್ರೀಯ ಆಂದೋಲನ ಮತ್ತು ಜಾತಿ ಪ್ರಶ್ನೆ

- ಇ.ಎಂ.ಎಸ್

1932 ರಲ್ಲಿ ಯರವಡಾ ಜೈಲಿನಲ್ಲಿ ಮಹಾತ್ಮಗಾಂಧಿ ಕೈಗೊಂಡ ಉಪವಾಸ ನಮ್ಮ ಸ್ವಾತಂತ್ರ್ಯ ಆಂದೋಲನದ ಇತಿಹಾಸದಲ್ಲೊಂದು ತಿರುಗುಬಿಂದು. ಏಕೆಂದರೆ ಆ ಉಪವಾಸ ಕೈಗೊಂಡದ್ದು ದಲಿತ ಸಮುದಾಯವನ್ನು ಇತರ ಭಾರತೀಯ ಜನಗಳೊಂದಿಗೇ ಇಟ್ಟುಕೊಳ್ಳಲು. ಆ ಉದ್ದೇಶ ಸಾಧನೆಯಾಯಿತು.

ಸ್ವಾತಂತ್ರ್ಯ ಆಂದೋಲನ ಒಂದು ಸರ್ವಜಾತಿಗಳ, ಸರ್ವ ಸಮುದಾಯಗಳ ಜಾತ್ಯಾತೀತ ಆಂದೋಲನವಾಗಿ ಮೂಡಿಬಂತು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಆಂದೋಲನ ರಾಜಕೀಯವಾಗಿ ಮುನ್ನಡೆ ಸಾಧಿಸಲಾರಂಭಿಸಿದಂತೆ ಬ್ರಿಟಿಶ್ ಆಳರಸರು ಅದನ್ನು ಮುರಿಯ ಬಯಸಿದರು. ಇದರಿಂದಾಗಿಯೇ ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಖ್ಖರು ಮತ್ತು ಇತರ ಧಾರ್ಮಿಕ ಸಮುದಾಯಗಳಿಗೂ ಅದೇ ರೀತಿ ಆಗ 'ದಬಾಯಿಸಲ್ಪಟ್ಟ ವರ್ಗಗಳು' (Depressed Classes) ಎನ್ನಲಾಗುತ್ತಿದ್ದ ದಲಿತ ಸಮುದಾಯಕ್ಕೆ ಕುಮ್ಮಕ್ಕು ನೀಡಲಾರಂಭಿಸಿದರು. ಬ್ರಿಟಿಶರು ಹೇಳಿದ್ದರಿಂದಲೇ ಅಖಿಲ ಭಾರತ ಮುಸ್ಲಿಂ ಲೀಗ್ ಮುಸ್ಲಿಂ ಸಮುದಾಯಕ್ಕೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳು ಬೇಕೆಂಬ ಬೇಡಿಕೆಯೆತ್ತಿತು.

ಬ್ರಿಟಿಶರ ತಂತ್ರ

ಬ್ರಿಟಿಶ್ ಆಳರಸರು ಮುಸ್ಲಿಮರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳ ಬೇಡಿಕೆಯನ್ನು ಸ್ವೀಕರಿಸಿದರಲ್ಲದೆ ಅದನ್ನು ಇತರ ಧಾರ್ಮಿಕ ಅಲ್ಪಸಂಖ್ಯಾತರಿಗೂ, ಹಿಂದೂ ಕೋಮಿನಲ್ಲಿನ ದಲಿತ ಸಮುದಾಯಕ್ಕೂ ವಿಸ್ತರಿಸಿದರು. ಬೆಳೆಯುತ್ತಿದ್ದ ರಾಷ್ಟ್ರೀಯ ಆಂದೋಲನದ ವಿರುದ್ಧ ದಲಿತರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಐಕ್ಯತೆ ಬ್ರಿಟಿಶರ ಗುರಿ ಹಾಗೂ ಉದ್ದೇಶವಾಗಿತ್ತು. ಭಾರತೀಯ ಜನತೆಯ ಸ್ವಾತಂತ್ರ್ಯದ ಬೇಡಿಕೆಯನ್ನು ಪೂರೈಸಲು ಇದ್ದ ಏಕೈಕ ಅಡ್ಡಿಯೆಂದರೆ ಭಾರತದ ವಿವಿಧ ಜಾತಿಗಳು, ಕೋಮುಗಳಲ್ಲಿನ ಬಗೆಹರಿಸಲಾಗದ ಭಿನ್ನಾಭಿಪ್ರಾಯಗಳು ಎಂಬಂತೆ ಬಿಂಬಿಸುವುದು ಅವರ ಬಯಕೆಯಾಗಿತ್ತು. ಲಂಡನ್ನಿನಲ್ಲಿ 1930 ಹಾಗೂ 1931 ರಲ್ಲಿ ನಡೆದ ದುಂಡು ಮೇಜಿನ ಸಮ್ಮೇಳನ ಗಳಲ್ಲಿ ಅವರು ಕಾಂಗ್ರೆಸ್‌ನ ವಿರುದ್ಧ ಈ ತರ್ಕವನ್ನು ಬಳಸುವುದರಲ್ಲಿ ಯಶಸ್ವಿಯಾದರು.

1931 ರ ದುಂಡು ಮೇಜಿನ ಸಮ್ಮೇಳನದಲ್ಲಿ ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿಯಾಗಿದ್ದ ಮಹಾತ್ಮಗಾಂಧಿ ಅದರಲ್ಲಿ ಭಾಗವಹಿಸಿದ್ದ ಭಾರತೀಯರ ನಡುವೆ ಸಂಪೂರ್ಣ ಏಕಾಂಗಿಯಾದರು. 600 ಭಾರತೀಯ ರಾಜ-ಮಹಾರಾಜರುಗಳ ಒಂದು ಬಲವಾದ ಗುಂಪಿನ ಜತೆ ಮುಸ್ಲಿಮರು, ಸಿಖ್ಖರು, ಕ್ರಿಶ್ಚಿಯನ್ನರು, ಆಂಗ್ಲೋ-ಇಂಡಿಯನ್ನರು ಮತ್ತಿತರ ಧಾರ್ಮಿಕ ಅಲ್ಪಸಂಖ್ಯಾತರು ಹಾಗೂ ದಲಿತರೂ ಸೇರಿಕೊಂಡರು.

ಎಲ್ಲರಿಗೂ ಪ್ರತ್ಯೇಕ ಚುನಾವಣಾ ಕ್ಷೇತ್ರ

ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ಬಯಸುತ್ತಿದ್ದ ಈ ಎಲ್ಲಾ ಸಮುದಾಯಗಳನ್ನು ಜಾತಿಗಳನ್ನು ತನ್ನ ಜೊತೆಗೊಯ್ಯಲು ಕಾಂಗ್ರೆಸ್ಸಿನ ಪ್ರತಿನಿಧಿ ಮಹಾತ್ಮ ಗಾಂಧಿಯವರಿಗೆ ಸಾಧ್ಯವಾಗದ್ದರಿಂದ ಸಮ್ಮೇಳನ ಮುಂದುವರೆಯದಾಯಿತು. ಆಗ ಬ್ರಿಟಿಶ್ ಪ್ರಧಾನ ಮಂತ್ರಿ ತಾನೇ ಒಂದು ಅವಾರ್ಡ್ ಕೊಡುವುದಾಗಿಯೂ ಅದನ್ನು ಸಂಬಂಧ ಪಟ್ಟ ಎಲ್ಲಾ ಭಾರತೀಯ ಜನವಿಭಾಗಗಳು ಒಪ್ಪಿಕೊಳ್ಳಬೇಕೆಂದೂ ಪ್ರಸ್ತಾಪವಿಟ್ಟರು.

ದಲಿತರು, ಮುಸ್ಲಿಮರು, ಕ್ರಿಶ್ಚಿಯನ್ನರು, ಆಂಗ್ಲೋಇಂಡಿಯನ್ನರು ಇತ್ಯಾದಿಯವರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ನೀಡುವುದೇ ಪ್ರಧಾನ ಮಂತ್ರಿಗಳ ಪ್ರಸ್ತಾಪವಾಗಿತ್ತು. ಆದ್ದರಿಂದ ಮಹಾತ್ಮ ಗಾಂಧಿ ಬರಿಗೈಯಲ್ಲಿ ಹಿಂದಿರುಗಬೇಕಾಯಿತು. ಈ ಅವಾರ್ಡಿನ ವಿರುದ್ಧವೇ ಮಹಾತ್ಮಗಾಂಧಿ ಯರವಾಡ ಜೈಲಿನಲ್ಲಿ ಉಪವಾಸ ಮುಷ್ಕರ ಆರಂಭಿಸಿದ್ದು.

ಉಪವಾಸ ಮುಷ್ಕರದ ಬಾಂಬ್

ಈ ಉಪವಾಸ ಮುಷ್ಕರ ಕಾಂಗ್ರೆಸ್ಸಿಗರಿಗೆ ಮಾತ್ರವಲ್ಲ, ಈ ಮೂಲಕ ಗಾಂಧೀಜಿ ಎತ್ತಿದ ಈ ಪ್ರಶ್ನೆಯ ಪರಿಹಾರ ಬಯಸುವವರಿಗೆಲ್ಲಾ ಒಂದು ಬಾಂಬ್ ನಂತಾಗಿತ್ತು. ಬಿರುಸಿನ ಸಮಾಲೋಚನೆಗಳು ನಡೆದವು. ಕೊನೆಗೆ 'ಪೂನಾ ಒಪ್ಪಂದ' ವೆಂದು ಕರೆಯುವ ಒಂದು ಒಪ್ಪಂದವೇರ್ಪಟ್ಟಿತು. ದಲಿತ ಸಮುದಾಯದ ಪ್ರಮುಖ ಪ್ರತಿನಿಧಿ ಡಾ|| ಅಂಬೇಡ್ಕರ್‌ರನ್ನು ಒಂದು ಪ್ರತ್ಯೇಕ ಚುನಾವಣಾ ಕ್ಷೇತ್ರದ ಬೇಡಿಕೆಯನ್ನು ಬಿಟ್ಟುಕೊಡುವಂತೆ ಕೊನೆಗೂ ಒಪ್ಪಿಸಲಾಯಿತು. ದಲಿತರಿಗೆ ಮೀಸಲಾತಿಯಿರುವ ಜಂಟಿ ಚುನಾವಣಾ ಕ್ಷೇತ್ರಗಳ ಆಧಾರದಲ್ಲಿ ಪ್ರಧಾನ ಮಂತ್ರಿಗಳು ಅವಾರ್ಡ್ ನೀಡಿದ್ದಕ್ಕಿಂತರೂ ಹೆಚ್ಚಿನ ಸ್ಥಾನಗಳನ್ನು ಈ ಒಪ್ಪಂದದ ಪ್ರಕಾರ ಕೊಡಲಾಯಿತು. ಪೂನಾ ಒಪ್ಪಂದ ಏರ್ಪಡುವ ಮೊದಲು ನಡೆದ ಚರ್ಚೆಗಳಲ್ಲಿ ಭಾಗವಹಿಸಿದ್ದ ಎಲ್ಲರ ಸರ್ವಾನುಮತದ ನಿರ್ಣಯ ಇದಾದ್ದರಿಂದ ಬ್ರಿಟಿಶ್ ಸರಕಾರವೂ ಅದನ್ನು ಒಪ್ಪಬೇಕಾಗಿ ಬಂತು.

1950 ರ ಸಂವಿಧಾನದ ಆಧಾರ

ಸ್ವಾತಂತ್ರ್ಯಾನಂತರದ ಭಾರತ ಗಣತಂತ್ರದ ಸಂವಿಧಾನವನ್ನು ಈ ಆಧಾರದಲ್ಲೇ ಬರೆಯಲಾಯಿತು. ಆದರೆ ಈ ನಡುವೆ ದೇಶದಲ್ಲಿ ಜಂಟಿ ಚುನಾವಣಾ ಕ್ಷೇತ್ರಗಳಲ್ಲಿ ದಲಿತರಿಗೆ ಮೀಸಲಾತಿಯ ವ್ಯವಸ್ಥೆಯ ಪರವಾಗಿಯೇ ಸಾರ್ವತ್ರಿಕ ಅಭಿಪ್ರಾಯ ಮೂಡಿಬಂತು. ಅಂದರೆ ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಖ್ಖರು ಮತ್ತಿತರ ಧಾರ್ಮಿಕ ಅಲ್ಪಸಂಖ್ಯಾತರಿಗೂ ಪತ್ಯೇಕ ಚುನಾವಣಾ ಕ್ಷೇತ್ರಗಳ ವ್ಯವಸ್ಥೆಯನ್ನು ಬಿಟ್ಟುಬಿಡಲಾಯಿತು. ಹೀಗೆ ಎಲ್ಲರಿಗೂ ಒಂದೇ ಸಮಾನ ಚುನಾವಣಾ ಕ್ಷೇತ್ರ, ಅದರಲ್ಲಿ ದಲಿತರಿಗೆ ಅಂದರೆ ಈಗ 'ಪರಿಶಿಷ್ಟ ಜಾತಿಗಳು' ಮತ್ತು ಪರಿಶಿಷ್ಟ ಬುಡಕಟ್ಟುಗಳು' ಎಂದು ಕರೆಯಲ್ಪಡುವ ವಿಭಾಗಗಳಿಗೆ ಮಾತ್ರ ಮೀಸಲಾತಿ ಎಂಬ ಆಧಾರದ ಮೇಲೆ 1950 ರ ಭಾರತದ ಸಂವಿಧಾನವನ್ನು ಬರೆಯಲಾಯಿತು.

ಆದರೆ ಭಾರತ ಗಣತಂತ್ರದ ಸಂವಿಧಾನವನ್ನು ರೂಪಿಸುವಾಗ ದಲಿತ ಸಮುದಾಯಕ್ಕೆ ಶಾಸನ ಸಭೆಗಳಲ್ಲಿ ಮತ್ತು ಸಂಸತ್ತಿನ ಪ್ರಾತಿನಿಧ್ಯದಲ್ಲಿ ಮಾತ್ರವಲ್ಲ, ಸರಕಾರಿ ಸೇವೆಯಲ್ಲಿಯೂ ಮೀಸಲಾತಿ ಸಿಗುವಂತೆ ಅವಕಾಶ ಮಾಡಲಾಯಿತು. ಅಲ್ಲದೇ, ರಾಜ್ಯಶಾಸನ ಸಭೆಗಳು ಸರಕಾರಿ ಉದ್ಯೋಗವಕಾಶಗಳಲ್ಲಿ - ಚುನಾಯಿತ ಸಂಸ್ಥೆಗಳಲ್ಲಿ ಅಲ್ಲಿ-'ಇತರ ಹಿಂದುಳಿದ ಸಮುದಾಯಗಳು' ಎಂದು ಕರೆಯಲ್ಪಡುವವರೆಗೂ ಪ್ರಾತಿನಿಧ್ಯ ಒದಗಿಸಲು ಅವಕಾಶ ಕಲ್ಪಿಸಬಹುದು ಎಂದೂ ಸಂವಿಧಾನದಲ್ಲಿ ಹೇಳಲಾಯಿತು. ಈ 'ಇತರ ಹಿಂದುಳಿದ ಸಮುದಾಯಗಳು' ಯಾವುದು ಎಂಬುದನ್ನು ಸಂಬಂಧಪಟ್ಟ ರಾಜ್ಯಗಳ ಶಾಸನ ಸಭೆಗಳು ನಿರ್ಧರಿಸಬೇಕು.

ಮಾರ್ಕ್ಸ್‌ವಾದಿಗಳ ನಿಲುವು

ನಾವು ಮಾರ್ಕ್ಸ್‌ವಾದಿಗಳು ಸಂವಿಧಾನದ ಈ ಅಂಶಗಳನ್ನು ಅಂದರೆ ದಲಿತರಿಗೆ ರಾಜ್ಯ ಶಾಸನ ಸಭೆಗಳಲ್ಲಿ ಮತ್ತು ಸಂಸತ್ತಿನಲ್ಲಿ ಹಾಗೂ ಸರಕಾರಿ ನೌಕರಿಯಲ್ಲೂ ಮೀಸಲಾತಿಯಿರಬೇಕು ಎನ್ನುವುದನ್ನು ಒಪ್ಪುತ್ತೇವೆ. ರಾಜ್ಯ ಸರಕಾರ 'ಇತರ ಹಿಂದುಳಿದ ಸಮುದಾಯ'ಗಳು ಎಂದು ಪರಿಗಣಿತವಾದವರಿಗೂ ಸರಕಾರೀ ನೌಕರಿಯಲ್ಲಿ ಮೀಸಲಾತಿಯ ಅವಕಾಶವಿರಬೇಕು, ಆದರೆ ಶಾಸನ ಸಭೆಗಳಲ್ಲಿ ಅಲ್ಲ ಎಂಬ ಅಂಶವನ್ನು ನಾವು ಒಪ್ಪುತ್ತೇವೆ.

ಇವೆರಡು ನಿರ್ದಿಷ್ಟ ಅಂಶಗಳನ್ನು ಬಿಟ್ಟು ಉಳಿದಂತೆ ರಾಜ್ಯ, ಕೇಂದ್ರ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ಹಾಗೂ ಸರಕಾರೀ ನೌಕರಿಗಳಲ್ಲಿ ನೇಮಕ ಬಹಿರಂಗ ಸ್ಪರ್ಧೆಗೆ ಸಂಪೂರ್ಣವಾಗಿ ಮುಕ್ತವಾಗಿರಬೇಕು, ಬೇರಾವ ದಲಿತರಲ್ಲದ ಸಮುದಾಯಗಳಿಗೆ ಮೀಸಲಾತಿ ಇರಬಾರದು.

ಇದಕ್ಕೆ ನಾವು ಕೊಡುವ ಒಂದೇ ಒಂದು ವಿನಾಯ್ತಿ ಎಂದರೆ ಮಹಿಳೆಯರಿಗೆ ಸಂಬಂಧಪಟ್ಟಂತೆ. ಕೇಂದ್ರದ ಸಂಸತ್ತು ಹಾಗೂ ರಾಜ್ಯ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಮೀಸಲಾತಿಯಿರಬೇಕು ಎಂದು ನಾವು ಹೇಳುತ್ತೇವೆ. ಆ ಹಂತದಲ್ಲೂ ಕೇವಲ ಮಹಿಳೆಯರಿಗೆ ಮಾತ್ರವೇ ಮೀಸಲಾತಿಯಿರಬೇಕು, ಬೇರ್ ಯಾರಿಗೂ ಅಲ್ಲ. ಮಹಿಳೆಯರಿಗೆ ಕೊಟ್ಟಂತೆ 'ಇತರ ಹಿಂದುಳಿದ ಸಮುದಾಯ'ಗಳಿಗೂ ರಾಜ್ಯ ಶಾಸನ ಸಭೆಗಳಲ್ಲಿ ಹಾಗೂ ಸಂಸತ್ತಿನಲ್ಲಿ ಮೀಸಲಾತಿಯಿರಬೇಕೆಂಬ ಕೆಲವು ಪಕ್ಷಗಳ ಬೇಡಿಕೆ ಸಂವಿಧಾನದ ಆಶಯಕ್ಕೆ ವಿರುದ್ಧವಾದದ್ದು. 'ಇತರ ಹಿಂದುಳಿದ ಸಮುದಾಯ'ವನ್ನು ಮಹಿಳೆಯರೊಂದಿಗೆ ಸಮೀಕರಿಸಬಾರದು.

ದಲಿತರ ಸಮಸ್ಯೆಗಳು ಭಿನ್ನ

ನಾವು ಇದನ್ನು ಏಕೆ ಆಗ್ರಹ ಪೂರ್ವಕವಾಗಿ ಹೇಳುತ್ತೇವೆ? ಏಕೆಂದರೆ, ಭಾರತೀಯ ಜನಗಳಲ್ಲಿ ಅತ್ಯಂತ ದಮನಕ್ಕೊಳಗಾದ ವಿಭಾಗವಾದ ದಲಿತ ಸಮುದಾಯದ ಸದಸ್ಯರನ್ನು ಬಿಟ್ಟು ಬೇರೆಲ್ಲರೂ ಚುನಾಯಿತ ಸಂಸ್ಥೆಗಳಲ್ಲಾಗಲೀ, ಸರಕಾರೀ ನೌಕರಿಯಲ್ಲಾಗಲೀ ಬಹಿರಂಗ ಸ್ಪರ್ಧೆಯಿರಬೇಕು ಎಂದು ನಾವು ಬಯಸುತ್ತೇವೆ. ಇತರ ಕೋಮುಗಳು ಚಾರಿತ್ರಿಕ ಕಾರಣಗಳಿಂದಾಗಿ ಸಾಮಾಜಿಕವಾಗಿಯಾಗಲೀ, ಶೈಕ್ಷಣಿಕವಾಗಿಯೇ ಆಗಲಿ ಹಿಂದುಳಿದಿದ್ದರೆ ಅದನ್ನು ಯಾವುದೇ ರಾಜ್ಯದ ಸರಕಾರ ಮತ್ತು ಶಾಸನ ಸಭೆಗೆ ಅಗತ್ಯವೆಂದೆನಿಸಿದರೆ ಸರಕಾರಿ ನೌಕರಿಯಲ್ಲಿ ಮೀಸಲಾತಿಗೆ ಅರ್ಹಗೊಳಿಸಬಹುದು.

ನಾವು ಈ ನಿಲುವು ಏಕೆ ತಳೆಯುತ್ತೇವೆಂದರೆ 'ಇತರ ಹಿಂದುಳಿದ ಸಮುದಾಯ' ಗಳೂ ದಮನಕ್ಕೊಳಗಾಗಿದ್ದು ಅವರಿಗೆ ವಿಶೇಷ ಸೌಲಭ್ಯಗಳನ್ನು ಕೊಡಬಹುದಾಗಿದ್ದರೂ ಅವರನ್ನು ದಲಿತರೊಂದಿಗೆ ಸಮೀಕರಿಸಲು ಸಾಧ್ಯವಿಲ್ಲ.

ದಲಿತ ಕೋಮು-ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳು - 'ಇತರ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಕೋಮು'ಗಳಿಗಿಂತ ಭಿನ್ನವಾದ ಒಂದು ವಿಧಕ್ಕೆ ಸೇರಿದ್ದು. ಏಕೆಂದರೆ ಅವರು ಭಾರತೀಯ ಸಾಮಾಜಿಕ ವ್ಯವಸ್ಥೆಯ ಅತ್ಯಂತ ಬರ್ಬರ ಕ್ರಮ ಅಂದರೆ ಅಸ್ಪೃಶ್ಯತೆಯಿಂದ ಪೀಡಿತರಾದವರು.. ಭಾರತೀಯ ಸಮಾಜದ ಈ ಶತಮಾನದ ಕಳಂಕದ ಹೊರೆ 'ಇತರ ಹಿಂದುಳಿದ ಸಮುದಾಯ' ಗಳ ಜನರಿಗಿಲ್ಲ. ಆದ್ದರಿಂದ ಕೇವಲ ದಲಿತರಿಗೆ ಮಾತ್ರ ವಿಶೇಷ ಅವಕಾಶಗಳನ್ನು ಕಲ್ಪಿಸುವುದು ಅಗತ್ಯ.

ಎನ್ರಾನ್‌ನೊಳಗೆ ಸೇರಿಕೊಂಡ ಅಮೆರಿಕದ ರಾಯಭಾರಿ

ಎನ್ರಾನ್ ಭಾರತದಲ್ಲಿ ಇನ್ನೂ ಹಲವು ಯೋಜನೆಗಳನ್ನು ಸ್ಥಾಪಿಸುವ ತನ್ನ ಯೋಜನೆಗಳನ್ನು ಹೊರಹಾಕಿದೆ. ಈ ಯೋಜನೆಗಳಲ್ಲಿ ಅಲ್ಪಕಾಲದವು ಮತ್ತು ದೀರ್ಘ ಕಾಲದವೂ ಸೇರಿವೆ. ಅಲ್ಪಕಾಲದ ಒಂದು ಪುನರ್ ಅನೀಲೀಕರಣ ಯೋಜನೆ, ಮಧ್ಯಮಕಾಲದ ಬಾಂಗ್ಲಾ ದೇಶದಿಂದ ಭಾರತಕ್ಕೆ ನೈಸರ್ಗಿಕ ಅನಿಲ ಸಾಗಿಸುವ ಕೊಳವೆ ಯೋಜನೆ ಹಾಗೂ ದೀರ್ಘಕಾಲದ ಅನಿಲ ಯೋಜನೆಗಳೆಲ್ಲ ಅದರ ಯೋಜನೆಗಳಲ್ಲಿ ಸೇರಿವೆ.

ದಾಬೋಲ್‌ನ ಒಂದು ಯೋಜನೆಯನ್ನು ಹಾಕಿಕೊಂಡೇ ಭಾರತದೊಳಗೆ ಎಂತಹ ಅನಾಹುತಗಳನ್ನು ಎನ್ರಾನ್ ಮಾಡಿತು, ಎಂತಹ ಮೋಸ ದಗಲ್ಬಾಜಿತನಗಳನ್ನು ತೋರಿತು ಎಂಬುದು ಈಗ ಸೂಕ್ಷ್ಮಜ್ಞತೆಯಿರುವವರಿಗೆಲ್ಲಾ ತಿಳಿದಿರುವ ವಿಷಯ. ಅಂತಹ ಬಹುರಾಷ್ಟ್ರೀಯ ಕಂಪನಿ ಭಾರತದೊಂದಿಗೆ ತನ್ನ ದೀರ್ಘ ಕಾಲಿಕ ಯೋಜನೆಗಳು ಇಂತಿಂತಹವು ಎಂದು ಹೇಳಿದರೆ ಖಂಡಿತವಾಗಿಯೂ ಆತಂಕ ಉಂಟಾಗಲೇ ಬೇಕಲ್ಲವೇ? ಇರಲಿ.

ಈಗ ಈ ಎನ್ರಾನ್‌ನ ಕೆಲವು ಒಳ ನಾಟಕಗಳ ದೃಶ್ಯಗಳನ್ನು ನೋಡೋಣ. ಈ ದೃಶ್ಯಗಳ ಮುಖ್ಯ ನಾಯಕ 1994 ರಿಂದಲೂ ಭಾರತದಲ್ಲಿ ಅಮೆರಿಕದ ರಾಯಭಾರಿ ಯಾಗಿರುವ ಫ್ರಾಂಕ್ ವಿಸ್ನರ್. ಈ ಮಹಾಶಯ ಈಗ ಎನ್ರಾನ್ ಕಂಪನಿಯನ್ನೇ ಸೇರಿದ್ದಾನೆ. ಅಮೆರಿಕದಲ್ಲಿ ಇದು ಸಾಮಾನ್ಯ. ಸರ್ಕಾರಿ ಅಧಿಕಾರಿಗಳಾಗಿದ್ದವರು ಖಾಸಗಿ ಕಂಪನಿಗಳಿಗೆ ಅಪಾರ ಸಹಾಯಮಾಡಿದ ನಂತರ ಆ ಕಂಪನಿಯ ಉದ್ಯೋಗಿಗಳಾಗಿ ಸೇರಿ ಕೊಳ್ಳುತ್ತಾರೆ. ಇದೇ ಪರಂಪರೆಯನ್ನೇ ಈ ಫ್ರಾಂಕ್ ವಿಸ್ನರ್ ಮಹಾಶಯ ಅನುಸರಿಸಿದ್ದು. ಈತ ಎನ್ರಾನ್‌ಗಾಗಿ ಭಾರತ ಸರ್ಕಾರದೊಡನೆ ಬಹಳವಾಗಿಯೇ ಹೋರಾಡಿದ. ಎನ್ರಾನ್‌ನ ಮೋಸಗಳಿಗೆಲ್ಲ ಬೆಂಬಲ ತೋರಿದ. ನಂತರ ಈಗ ಆ ಕಂಪನಿಯ ಉದ್ಯೋಗಿಯಾದ. ಅಮೆರಿಕದ ಸರ್ಕಾರಿ ಅಧಿಕಾರಿಗಳ/ ವಿದೇಶಿ ರಾಯಭಾರಿಗಳದ್ದು ಎಂತಹ ನೀತಿ ಸಂಹಿತೆ?

ಇನ್ನೂ ಸ್ವಲ್ಪ ಹೆಚ್ಚಿನ ಹಿನ್ನೆಲೆ ನೋಡಿದರೆ ಈ ವಿಸ್ನರ್ ಮಹಾಶಯನ ತಂದೆ ಸಿಐಎಯ ಅಧಿಕಾರಿಯಾಗಿದ್ದಾತ. ಗ್ವಾಟೆಮಾಲಾದಲ್ಲಿ ಅರ್ಬೆಂಝ್‌ರ ಸರ್ಕಾರ ಉರುಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದಾತ. ಈ ಕಿರಿಯ ವಿಸ್ನರನೂ ರಕ್ಷಣಾ ಖಾತೆಯ ಅಧೀನ ಕಾರ್ಯದರ್ಶಿ ಯಾಗಿ ಕೆಲಸ ಮಾಡಿದಾತ. ಈತನ ಈಗಿನ ಮೇಲಧಿಕಾರಿ ಕೆನ್ನೆತ್ ಲೇ ಸಹ ಅಮೇರಿಕದ ರಕ್ಷಣಾ ವ್ಯವಸ್ಥೆ ಪೆಂಟಗಾನ್‌ನ ಅಧಿಕಾರಿಯಾಗಿದ್ದಾತ. ವಿಯೆಟ್ನಾಂ ಯುದ್ಧದ ಸಮಯದಲ್ಲಿ ಪೆಂಟಗಾನ್‌ಗೆ ಕೆಲಸ ಮಾಡಿದಾತ.

ವಿಸ್ನರ್ ಫಿಲಿಪ್ಪೀನ್ಸ್‌ನಲ್ಲಿ ಹಿಂದೆ ಅಮೆರಿಕಾದ ರಾಯಭಾರಿಯಾಗಿದ್ದಾತ. ಅಲ್ಲಿರುವಾಗಲೂ ಎನ್ರಾನ್‌ಗೆ ಅಲ್ಲಿನ ಯೋಜನೆಗಳು ದೊರೆಯುವಂತೆ ನೋಡಿಕೊಂಡಾತ.

ಅಮೆರಿಕದ ಮಾಜಿ ಅಧ್ಯಕ್ಷ ಜಾರ್ಜ್ ಬುಷ್‌ನ ಮಕ್ಕಳೂ ಈ ಎನ್ರಾನ್‌ಗೆ ಸಹಾಯ ಮಾಡಿದವರು. ಅಮೆರಿಕದ ಸೆನೆಟರ್ ಫಿಲ್ ಗ್ರಾಮ್‌ನ ಹೆಂಡತಿಯೂ ಎನ್ರಾನ್‌ನ ಆಡಳಿತ ಮಂಡಳಿಯನ್ನು ಸೇರಿದ್ದಾಳೆ. ಹೀಗೆ ಅಮೆರಿಕದ ಕಂಪನಿಗಳ ಹಿನ್ನೆಲೆ ನೋಡಿದರೆ ಅಲ್ಲಿಯ ನೀತಿ ಸಂಹಿತೆಯ ದರ್ಶನವಾಗುತ್ತದೆ. ಜಗತ್ತಿನ ಅತ್ಯಂತ ಪ್ರಬಲ ಪ್ರಜಾಪ್ರಭುತ್ವವೆನಿಸಿಕೊಂಡಿರುವ ಅಮೆರಿಕಾದಲ್ಲಿ ಈ 'ಹಣ ನೀಡಿ ಪಾತ್ರ ಮಾಡು' ಎಂಬ ಮಂತ್ರ ಎಷ್ಟು ಬಲವಾಗಿದೆ ಎಂಬುದನ್ನು ಮೇಲಿನ ಉದಾಹರಣೆಗಳು ತೋರಿಸುತ್ತವೆ. ಜಗತ್ತಿಗೆಲ್ಲ ನೀತಿ ಹೇಳುವ ಈ ದೇಶದ ನೀತಿಗೆಟ್ಟ ನಡತೆಗಳ ಮೂಟೆಗಳು ಅವರ ನಿಜಗುಣಕ್ಕೆ ಕನ್ನಡಿ ಹಿಡಿಯುತ್ತವೆ.

ಉದಾರೀಕರಣ ತಂದ ಹಿಂಜರಿತ

ಈಗ ದೊಡ್ಡ ದೊಡ್ಡ ಉದ್ಯಮಿಗಳ ಸಂಘಟನೆಗಳೂ ಬಹಿರಂಗವಾಗಿ ಒಪ್ಪಿಕೊಳ್ಳುತ್ತಿದ್ದಾರೆ ಭಾರತದ ಆರ್ಥಿಕದಲ್ಲಿ ಹಿಂಜರಿತ ಉಂಟಾಗಿದೆ ಎಂದು. ಯಾಕೆಂದರೆ ಪೆಟ್ರೋಲ್ ಉತ್ಪನ್ನಗಳ ಬೆಲೆ ಏರಿಸಿದರೂ ಸಾಗಾಣಿಕೆ ದರಗಳು ಏರಿದರೂ ಹಣದುಬ್ಬರದ ಪ್ರಮಾಣ ತೀವ್ರವಾಗಿ ಏರಲಿಲ್ಲ. ಬದಲಿಗೆ ಈಗ ಹಣದುಬ್ಬರ ಇಳಿದಿದೆ. ಹಣದುಬ್ಬರವಿಲ್ಲದೇ ಬೆಳೆಯದ ಆರ್ಥಿಕ ಈ ಬಂಡವಾಳಿಗರದು.

ಹಾಗೆ ಈ ವರ್ಷವೂ ಮಳೆ ಬೆಳೆ ಎರಡೂ ಚೆನ್ನಾಗೇ ಆಗಿದೆ. ಕಳೆದ ಒಂಬತ್ತು ವರ್ಷಗಳಲ್ಲಿ ಸತತವಾದ ಒಳ್ಳೆ ಮಳೆ ಬೆಳೆ ಆಗಿದೆ. ಹೀಗೆ ಒಳ್ಳೆ ಮಳೆ-ಬೆಳೆ ಆದಾಗ ಔದ್ಯಮಿಕ ಬೆಳವಣಿಗೆ ತೀವ್ರವಾಗಿ ಆಗಬೇಕು. ಆದರೆ ಆಗುತ್ತಿಲ್ಲ. ಕೇಂದ್ರ ಹಣಕಾಸು ಮಂತ್ರಿ ಮಹೋದಯ ಪಿ.ಚಿದಂಬರಂ ಅವರೇ ಈ ಆರ್ಥಿಕಕ್ಕೆ ಏನು ಮಾಡಬೇಕೆಂಬುದೇ ತೋಚುತ್ತಿಲ್ಲ ಎಂದು ಹೇಳುವಂತಾಯಿತು. ಬಂಡವಾಳಶಾಹಿ ವ್ಯವಸ್ಥೆಯ ದಿವಾಳಿಕೋರತನವೇ ಇದು. ಈ ಅರ್ಥವ್ಯವಸ್ಥೆ ಜನರ ನೋವುಗಳನ್ನು ಕಡಿಮೆ ಮಾಡಿ ಬೆಳವಣಿಗೆ ಸಾಧಿಸುವ ವ್ಯವಸ್ಥೆಯಲ್ಲ. ಬದಲಿಗೆ ಜನಸಾಮಾನ್ಯರಿಗೆ ಕಷ್ಟಕೋಟಲೆಗಳ ಹೊರೆ ಹೊರಿಸಿ ಕೆಲವೇ ಕೆಲವರಿಗೆ ಬಂಡವಾಳಿಗರಿಗೇ ಅನುಕೂಲ ಸುಖ ಸಮೃದ್ಧಿ ತರುವ ಅರ್ಥ ವ್ಯವಸ್ಥೆ ಇದು.

ಹಿಂದೆ 1991-92 ರಲ್ಲಿ ಆರ್ಥಿಕವನ್ನು ತೀವ್ರವಾಗಿ ಉದಾರೀಕರಿಸತೊಡಗಿದಾಗ ಉದ್ಯಮ ಪತಿಗಳು ಉದ್ದಿಮೆಗಳನ್ನು ಸ್ಥಾಪಿಸತೊಡಗಿದರು. ಹೆಚ್ಚು ಹೆಚ್ಚು ಉತ್ಪಾದನಾ ಸೌಲಭ್ಯಗಳನ್ನು ಸೃಷ್ಟಿಸಲಾಯಿತು. ಆದರೆ ಈ ಸೌಲಭ್ಯಗಳ ಬಳಕೆಯಾಗಬೇಕಾದರೆ ಮಾರುಕಟ್ಟೆ ಅಷ್ಟೇ ದೊಡ್ಡ ಪ್ರಮಾಣದಲ್ಲಿ ಬೆಳೆಯಬೇಕು. ಅಂದರೆ ಬೇಡಿಕೆ ಹೆಚ್ಚಬೇಕು. ಬೇಡಿಕೆ ಹೆಚ್ಚಲು ಮತ್ತು ಮಾರುಕಟ್ಟೆ ಬೆಳೆಯಲು ಜನರ ಕೊಳ್ಳುವ ಸಾಮರ್ಥ್ಯ ಹೆಚ್ಚಾಗಬೇಕು. ಉದಾರೀಕರಣ ಈ ಬೇಡಿಕೆ ಹೆಚ್ಚಿಸುವ ಪ್ರಯತ್ನ ಮಾಡುವುದಿಲ್ಲ. ಬದಲಿಗೆ ಪೂರೈಕೆ ಹೆಚ್ಚಿಸಿದರೆ ಬೇಡಿಕೆ ತಂತಾನೆ ಹೆಚ್ಚಾಗುತ್ತದೆ ಎಂಬ ತತ್ವಕ್ಕೆ ಅಂಟಿಕೊಳ್ಳುತ್ತದೆ. ಇದರಿಂದಾಗಿಯೇ ಇಂದು ನಮ್ಮ ಆರ್ಥಿಕದಲ್ಲಿ ಇಂತಹ ಹಿಂಜರಿತ ಉಂಟಾಗಿರುವುದು. ಉತ್ಪಾದನಾ ಸೌಲಭ್ಯಗಳ ಸೃಷ್ಟಿ ಅತಿಯಾಗಿದೆ. ಈ ಸೌಲಭ್ಯ ಸೃಷ್ಟಿಗೆ ಅಪಾರ ಹಣ ವೆಚ್ಚವಾಗಿದೆ. ಈ ಹೂಡಿಕೆಗೆ ಪ್ರತಿಫಲ ಬರಬೇಕು. ಆದರೆ ಆಯೋಜಿತ ಹೂಡಿಕೆ ಈಗ ಒಂದು ರೀತಿಯಲ್ಲಿ ನಿರುಪಯುಕ್ತ.

ಇವು ಉದಾರೀಕರಣದ ಒಳಸುಳಿಗಳು.

ಏಶಿಯಾದ ನಾಣ್ಯ ಬಿಕ್ಕಟ್ಟು ತಂದ ಅವಾಂತರ

ಏಶಿಯಾದ ನಾಣ್ಯ ಬಿಕ್ಕಟ್ಟು ಜಗತ್ತಿನಾದ್ಯಂತವೇ ನಡುಕ ತಂದಿದೆ. ಉದಾರೀಕರಣದ ಮಹಾನ್ ಪ್ರತಿಪಾದಕರಾದ ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳೇ ಕಂಗಾಲಾಗಿ ಪೂರ್ಣ ಪರಿವರ್ತನೀಯತೆ ತರಬೇಕಾದವರು ಜಾಗರೂಕತೆಯಿಂದ ಮುನ್ನಡೆಯಬೇಕೆಂದು ಹೇಳುತ್ತಿದೆ.

ಈ ಬಿಕ್ಕಟ್ಟಿನಿಂದಾಗಿ ಜಗತ್ತಿನಾದ್ಯಂತ ಬೆಲೆಗಳ ಏರುಪೇರೂ ಕಂಡುಬರುತ್ತಿದೆ. ಭಾರತದೊಳಗೆ ಈಗ ಪಾಲಿಯೆಸ್ಟರ್ ಉದ್ಯಮ ಇದರಿಂದ ಅಲ್ಲೋಲ ಕಲ್ಲೋಲವಾಗಿವೆ. ಪಾಲಿಯೆಸ್ಟರ್ ಬೆಲೆಗಳು ತೀವ್ರವಾಗಿ ಕುಸಿದಿರುವುದೇ ಇದಕ್ಕೆ ಕಾರಣ.

ಇದಲ್ಲದೆ ಪ್ಲಾಸ್ಟಿಕ್ ರಫ್ತು ಸಹ ಹೊಡೆತ ತಂದಿದೆ. ಭಾರತದ ರಫ್ತುದಾರರಿಗೆ ಈಗ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಬೆಲೆಗಳು ಸಿಗುವ ಸಾಧ್ಯತೆಯಿಲ್ಲ. ನಾಣ್ಯ ಬಿಕ್ಕಟ್ಟನ್ನು ಕಂಡ ಥಾಯ್‌ಲ್ಯಾಂಡ್ ಮತ್ತು ಇಂಡೋನೇಶಿಯಾದ ರಫ್ತುದಾರರು ತೀರ ಅಗ್ಗದ ಬೆಲೆಗೆ ಈ ಸರಕುಗಳನ್ನು ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರತೊಡಗಿದ್ದಾರೆ.

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಈಗ ಮತ್ತೆ ರೂಪಾಯಿಗೆ ಮಲರೋಗ


ರೂಪಾಯಿ ಈಗ ಮತ್ತೆ ಡಾಲರಿಗೆ ದುರು ಕುಸಿಯುತ್ತಿದೆ. ಇಷ್ಟು ದಿನರೂಪಾಯಿ ಬಹಳ ಪ್ರಬಲವಾಗಿದೆ ಅಂತ ರಾಷ್ಟ್ರೀಯ ಮಾರುಕಟ್ಟೆಗಳ ಅಲ್ಲೋಲ ಕಲ್ಲೋಲಗಳಿಂದಾಗಿ ಸ್ವಲ್ಪವೂ ಅಲುಗಾಡದ ರೂಪಾಯಿ ನಿಂತಿರುವುದು ನಿಜಕ್ಕೂ ಭಾರತದ ಉದಾರೀಕರಣ ನೀಡಿರುವ ಶಕ್ತಿ ಎನ್ನಲಾಗುತ್ತಿತ್ತು.

ಇದೇ ಕಾಲಕ್ಕೆ ರಫ್ತುದಾರರು ರೂಪಾಯಿಯ ಬೆಲೆ ಸ್ಥಿರವಾಗಿರುವುದರಿಂದ ರಫ್ತಿಗೆ ತೊಂದರೆಯಾಗುತ್ತಿದೆ ಎಂದು ಬೊಬ್ಬೆ ಹೊಡೆಯುತ್ತಿದ್ದರು. ಈಗ ಏಶಿಯಾ ನಾಣ್ಯ ಬಿಕ್ಕಟ್ಟು ಮತ್ತು ಶೇರು ಮಾರುಕಟ್ಟೆಯಲ್ಲಿನ ಬಿರುಗಾಳಿಗಳ ನಂತರ ರೂಪಾಯಿ ಕುಸಿಯತೊಡಗಿದೆ.

ಚಿನ್ನದ ಆಮದನ್ನು ಉದಾರೀಕರಿಸಿರುವುದು ಇದಕ್ಕೆ ಒಂದು ಮುಖ್ಯ ಕಾರಣ ಎನ್ನಲಾಗುತ್ತಿದೆ. ಯಾಕೆಂದರೆ ಚಿನ್ನದ ಆಮದನ್ನು ಉದಾರೀಕರಿಸಿರುವುದರಿಂದ ಡಾಲರಿಗೆ ಹೆಚ್ಚಿನ ಬೇಡಿಕೆಯುಂಟಾಗಿದೆ. ಡಾಲರಿಗೆ ಬೇಡಿಕೆ ಹೆಚ್ಚಾದೊಡನೆ ಅದರ ಬೆಲೆ ಹೆಚ್ಚಾಗುತ್ತದೆ. ರೂಪಾಯಿಯ ಬೆಲೆ ಕುಸಿಯುತ್ತದೆ.

ರಫ್ತುದಾರರ ಬಹುದಿನದ ಬೇಡಿಕೆಯನ್ನು ಸರ್ಕಾರ ಈ ರೀತಿ ಹಿಂಭಾಗಿಲಿನಿಂದ ಪೂರೈಸುತ್ತಿದೆ ಎಂದೂ ಹೇಳಲಾಗುತ್ತಿದೆ. ಇದರಿಂದ ಬೆಲೆಗಳು ಹೆಚ್ಚುವುದರಿಂದ ದೇಶದ ಜನ ಸಾಮಾನ್ಯರ ಬಾಳು ಹೆಚ್ಚೆಚ್ಚು ಕಠಿಣವಾಗುತ್ತ ಹೋಗುತ್ತದೆ.

ಸ್ವಾವಲಂಬನೆಯ ಬಗ್ಗೆ ಈಗ ನಾವೇಕೆ ಹೆಮ್ಮೆಯಿಂದ ಮಾತನಾಡುತ್ತಿಲ್ಲ?



ದೇಶದ ಸ್ವಾತಂತ್ರ್ಯದ 50 ವರ್ಷಗಳನ್ನು ಪೂರೈಸಿರುವುದನ್ನು ಆಚರಿಸುತ್ತಿರುವಾಗ ನಾವೇಕೆ ಸ್ವಾವಲಂಬನೆಯ ಬಗ್ಗೆ ಅಳುಕಿನಿಂದ ಮಾತನಾಡುತ್ತೇವೆ ಎಂದು ಆಶ್ಚರ್ಯ ಪಡುತ್ತಾರೆ ಪ್ರಖ್ಯಾತ ವಿಜ್ಞಾನಿ ಹಾಗೂ ಅಣುಶಕ್ತಿ ತಜ್ಞ ಡಾ|| ಎಂ.ಆರ್.ಶ್ರೀನಿವಾಸನ್

ಭಾರತದ ಅಣುಶಕ್ತಿ ಕಾರ್ಯಕ್ರಮದ ಹೆಗ್ಗುರುತೆಂದರೆ ಸ್ವಾವಲಂಬನೆಗೆ ಅದರ ಬದ್ಧತೆ. ಒಂದು ಸ್ವತಂತ್ರ ದೇಶವಾಗಿ ಐವತ್ತು ವರ್ಷಗಳನ್ನು ಪೂರೈಸಿರುವುದನ್ನು ಆಚರಿಸುತ್ತಿರುವಾಗ ನಾವು ಸ್ವಾವಲಂಬನೆಯ ಬಗ್ಗೆ ಅದೊಂದು ಹೆಮ್ಮೆಯ ವಿಷಯವೆಂಬಂತೆ ಮಾತನಾಡುತ್ತಿಲ್ಲ ಎಂಬುದು ಆಶ್ಚರ್ಯದ ಸಂಗತಿ. ನಾವು ಅಳುಕಿನಿಂದಲೇ ಮಾತನಾಡುತ್ತೇವೆ. ಕಳೆದ ಐದಾರು ವರ್ಷಗಳಿಂದ ಪ್ರಚಾರದಲ್ಲಿರುವ ಒಂದು ಅಭಿಪ್ರಾಯವೆಂದರೆ ಭಾರತ ಸ್ವಂತ ತಂತ್ರಜ್ಞಾನ ಪಡೆದುಕೊಳ್ಳಲು ಸಮಯ ಅಥವಾ ಸಂಪನ್ಮೂಲಗಳನ್ನು ವ್ಯರ್ಥ ಮಾಡಬೇಕಿಲ್ಲ, ನೇರವಾಗಿ ಖರೀದಿಸಿದ ಅಥವಾ ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಭಾರತಕ್ಕೆ ಬರುವ ಅಥವಾ ಜಂಟಿ ಉದ್ದಿಮೆ ಗಳ ಮೂಲಕ ಭಾರತ ಒಂದು ಕೈಗಾರಿಕಾ ದೇಶವಾಗಿ ಬೆಳೆಯುವುದು ಎಂದು.


ಒಂದು ವಿಷಯವನ್ನು ಸಾಮಾನ್ಯವಾಗಿ ಅರಿತುಕೊಂಡಂತಿಲ್ಲ. ತಮ್ಮ ಪ್ರತಿಸ್ಪರ್ಧಿಯಾಗಬಹುದಾದವರಿಗೆ ಅತ್ಯಾಧುನಿಕ ತಂತ್ರಜ್ಞಾನವನ್ನು ಯಾರೂ ಕೊಡ ಮಾಡುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಮುಂದುವರೆದ ದೇಶಗಳ ಬಹುಪಕ್ಷೀಯ ಗುಂಪುಗಳು ಕಠಿಣ ಶರತ್ತುಗಳನ್ನು ವಿಧಿಸುವ ಮೂಲಕ ತಂತ್ರಜ್ಞಾನ ಪಡೆಯುವವರ ಮೇಲೆ ಹತೋಟಿ ಇಟ್ಟುಕೊಂಡಿವೆ. ಶರತ್ತುಗಳು ಎಂತಹವೆಂದರೆ ದೇಶದ ಸಾರ್ವಭೌಮತೆಯನ್ನು ಮೊಟಕು ಮಾಡುವಂತಹದು. ಅವರು ಬಹಳವೆಂದರೆ ನಮ್ಮ ಕಮ್ಮಿ ವೇತನಗಳ ಪ್ರಯೋಜನ ಪಡೆಯಲು ಭಾಗಶಃ ಅಥವಾ ಪೂರ್ಣ ವಿದೇಶಿ ಬಂಡವಾಳದ ಒಡೆತನದಲ್ಲಿರುವ ಉತ್ಪಾದನಾ ಉದ್ದಿಮೆಗಳನ್ನು ಸ್ಥಾಪಿಸ ಬಹುದು. ಇವುಗಳಲ್ಲಿ ಕೆಲವು ಭಾರತೀಯರಿಗೆ ನಿರ್ವಹಣಾ ಕೆಲಸಗಳಲ್ಲಿ ಭಾಗವಹಿಸುವ ಅವಕಾಶವೂ ಸಿಗಬಹುದು. ಆದರೆ ಈ ಉತ್ಪಾದನೆಯ ಹಂತಕ್ಕಿಂತ ಮುಂದೆ ಹೋಗಿ ಭಾರತೀಯ ಸಂಶೋಧನೆ ಮತ್ತು ಅಭಿವೃದ್ಧಿ(R&D) ಆಧಾರದ ಮೇಲೆ ನಮ್ಮದೇ ವಿನ್ಯಾಸಗಳನ್ನು ಹೊಂದ ಬೇಕಾದರೆ, ಭಾರತೀಯ ಬ್ರಾಂಡು ಗಳನ್ನು ಬಳಸುವಂತಾಗಬೇಕಾದರೆ ಅದೆಷ್ಟೇ ಅಡ್ಡಿ-ಆತಂಕಗಳಿದ್ದರೂ ಸ್ವಾವಲಂಬನೆಯ ದಾರಿ ಹಿಡಿಯುವುದನ್ನು ಬಿಟ್ಟು ಪರ್ಯಾಯ ಮಾರ್ಗವಿಲ್ಲ.



ಅಗ್ನಿಸ ಕ್ಷಿಪಣಿ - ಅಮೆರಿಕದ ಕಣ್ಣು ಕೆಂಪಾಗಿಸಿದ ಸ್ವಾವಲಂಬೀ ಸಾಧನೆ

ಹೋಮಿ ಭಾಭಾ ರವರ ದೂರದೃಷ್ಟಿ ಯಿಂದಾಗಿ ವಿಜ್ಞಾನದ ಅತ್ಯಂತ ಕಠಿಣ ರಂಗ ವಾದ ಅಣುಶಕ್ತಿ ರಂಗದಲ್ಲಿ ಸ್ವಾವ ಲಂಬನೆಗೆ ಬದ್ಧವಾದ ಒಂದು ವಿಶಾಲ ವಿಜ್ಞಾನ- ತಂತ್ರಜ್ಞಾನ ಸಂಸ್ಥೆ ಯನ್ನು ಕಟ್ಟಿ ಬೆಳೆಸಲಾಯಿತು. ಸ್ವಾವ ಲಂಬನೆಯ ಭಾವನೆ ಅಣುಶಕ್ತಿ ಕಾರ್ಯ ಕ್ರಮದಿಂದ ಬಾಹ್ಯಾ ಕಾಶ ಕಾರ್ಯ ಕ್ರಮಕ್ಕೂ ವಿಸ್ತರಿಸಿತು. ವಿದೇಶಿ ಉಪಕರಣಗಳನ್ನು ಆಮದು ಮಾಡುವ ಖರ್ಚಿನ ಒಂದು ಸಣ್ಣ ಭಾಗದ ಖರ್ಚಿನಲ್ಲೇ ನಾವೇ ಅಂತಹ ಉಪಕರಣ ಗಳನ್ನು ತಯಾರಿಸುವಂತಾಯಿತು.

ದೊಡ್ಡ ಜನಸಂಖ್ಯೆ ಹಾಗೂ ಸಾವಿರಾರು ವರ್ಷಗಳ ಒಂದು ಸಂಸ್ಕೃತಿಯಿರುವ ಭಾರತ ದೇಶಕ್ಕೆ ತಂತ್ರಜ್ಞಾನದಲ್ಲಿನ ಸ್ವಾವಲಂಬನೆ ಅತ್ಯಗತ್ಯ. ಭಾರತ ಹಲವು ರಂಗಗಳಲ್ಲಿ ವಿದ್ಯೆ ಮತ್ತು ತಾಂತ್ರಿಕ ವಿಧಾನಗಳನ್ನು ರೂಪಿಸಿದ ತೊಟ್ಟಿಲು. ಇದು ಹಮ್ಮಿನ ಪ್ರಶ್ನೆಯೇನಲ್ಲ. ನಾವು ತಂತ್ರಜ್ಞಾನ ಪಡೆಯುವವರರು ಮಾತ್ರ ಆಗಿರಬಾರದು. ವಿಶ್ವ ವಿಜ್ಞಾನ-ತಂತ್ರಜ್ಞಾನದ ಸಂಗ್ರಹಕ್ಕೆ ಕೊಡುಗೆ ನೀಡುವವರೂ ಆಗಬೇಕು ಎಂದು ನೆನಪಿಸಿಕೊಳ್ಳಲಷ್ಟೇ ಈ ಮಾತು. ಅಲ್ಲದೆ ಸಣ್ಣ ಜನಸಂಖ್ಯೆಯಿರುವ ಅಥವಾ ವಿರಳ ಜನಸಂಖ್ಯೆಯಿರುವ ದೇಶಗಳಿಗೆ ಸೂಕ್ತವೆನಿಸುವ ತಂತ್ರಜ್ಞಾನಗಳು ನಮ್ಮ ಸನ್ನಿವೇಶಕ್ಕೂ ಸೂಕ್ತವಾಗಲಾರವು. ನಮ್ಮ ಸಂದರ್ಭದಲ್ಲಿ ತಾಳಿಕೆಯ ತಂತ್ರಜ್ಞಾನ ಗಳನ್ನು ನಾವೇ ನಮ್ಮ ಬುದ್ಧಿಮತ್ತೆಯಿಂದಲೇ ರೂಪಿಸಿಕೊಳ್ಳುವುದೇ ಒಳ್ಳೆಯದು.



ಭಾಭಾ ಅಣು ಸಂಶೋಧನಾ ಕೇಂದ್ರ - ತಂತ್ರಜ್ಞಾನದ ಸ್ವಾವಲಂಬನೆಗೆ ಭದ್ರ ಬುನಾದಿ

ಕೊನೆಯದಾಗಿ, ನಮ್ಮ ದೇಶದ ಭದ್ರತೆಗೆ ಯಾವುದೇ ತಂತ್ರಜ್ಞಾನ ಹತೋಟಿ ವ್ಯವಸ್ಥೆಯ ಹೊರಗೆ ಇರುವ ಎಲ್ಲಾ ತಂತ್ರಜ್ಞಾನಗಳನ್ನು ಹೊಂದಿರುವುದು ಅಗತ್ಯ. ಅದೃಷ್ಟ ವಶಾತ್ ಅಣುಶಕ್ತಿ ಮತ್ತು ಬಾಹ್ಯಾಕಾಶ ರಂಗಗಳಲ್ಲಿನ ಪ್ರಯತ್ನ ನಮ್ಮ ಸ್ವಾವಲಂಬನೆಗೆ ಒಂದು ಉತ್ತಮ ಬುನಾದಿ ಹಾಕಿದೆ. ಈ ಭದ್ರ ಬುನಾದಿಯ ಮೇಲೆ ಅಷ್ಟೇ ಗಮನಾರ್ಹ ವಾದ ಕಟ್ಟಡವನ್ನು ಕಟ್ಟಬೇಕಾಗಿದೆ.

(ಕೃಪೆ : ಫ್ರಂಟ್‌ಲೈನ್)

ಪುಟ 4 ರಿಂದ

......ವಿಮೋಚನಾ ಸಮರ

ಪೋಲೀಸರು ಎರ್ನಾಡ್ ಖಿಲಾಫತ್ ಸಮಿತಿಯ ಕಾರ್ಯದರ್ಶಿಯನ್ನು ಬಂಧಿಸಿದರು. ಮಾಪಿಳ್ಳೆ ಜನರು ಖಡ್ಗ, ಈಟಿಗಳಿಂದ ಪ್ರತಿರೋಧಿಸಿದರು. ಪೋಲೀಸ್ ಸೂಪರಿಂಟೆಂಡೆಂಟ್‌ನ ನೇತೃತ್ವದಲ್ಲಿ ದೊಡ್ಡ ಪೋಲೀಸ್ ಪಡೆಯೊಂದು ತಿರುರಂಗಡಿ ಮಸೀದಿ ಹೊಕ್ಕಿತು. ತಕ್ಷಣ ಪ್ರತಿಭಟನೆ ಒಂದು ಸಾಮೂಹಿಕ ಬಂಡಾಯದ ರೂಪ ತಳೆಯಿತು. ಒಂದಾದ ಮೇಲೊಂದರಂತೆ ಪೋಲೀಸ್ ಠಾಣೆಗಳನ್ನು ಮಾಪಿಳ್ಳೆ ಜನರು ವಶಪಡಿಸಿಕೊಂಡರು. ಸರ್ಕಾರಿ ಇಲಾಖೆಗಳನ್ನು ಲೂಟಿ ಮಾಡಿದರು. ರಿಜಿಸ್ಟ್ರ ಆಫೀಸಿನಲ್ಲಿನ, ನ್ಯಾಯಾಲಯಗಳಲ್ಲಿನ ದಸ್ತಾವೇಜುಗಳನ್ನು ನಾಶಪಡಿಸಿದರು. ಒಂದು ವಾರದೊಳಗೆ ಈ ಪ್ರದೇಶದಲ್ಲಿ ಬ್ರಿಟಿಶ್ ಆಳ್ವಿಕೆ ಸಂಪೂರ್ಣ ಕುಸಿಯಿತು. ಸುಮಾರು 3 ತಿಂಗಳ ಕಾಲ ಮಲಬಾರಿನ ಗ್ರಾಮೀಣ ಪ್ರದೇಶ ಮಾಪಿಳ್ಳಾ ಬಂಡಾಯಗಾರರ ಕೈಯಲ್ಲಿತ್ತು ಎನ್ನಲಾಗಿದೆ. ಸುಮಾರು ಒಂದು 10 ಲಕ್ಷ ಜನ ಈ ಬಂಡಾಯದಲ್ಲಿ ಪಾಲುಗೊಂಡರು.

ಬ್ರಿಟಿಶರು ಲಷ್ಕರಿ ಶಾಸನ ಹಾಕಿ ಬಂಡಾಯವನ್ನು ದಮನ ಮಾಡಲಾರಂಭಿಸಿದರು. ಸರಕಾರೀ ಭಯೋತ್ಪಾದನೆ ಆರಂಭವಾಯಿತು. ಇದರಲ್ಲಿ ಕುಖ್ಯಾತವಾದದ್ದು ನವೆಂಬರ್ 19, 1921 ರ 'ವ್ಯಾಗನ್ ದುರಂತ'. ಆ ದಿನ ಒಂದು ರೈಲಿನ ಸಣ್ಣ ಡಬ್ಬಿಯೊಳಗೆ 122 ಮಾಪಿಳ್ಳೆಗಳನ್ನು ಕೂಡಿಹಾಕಿ 90 ಮೈಲಿ ದೂರದ ಕೊಯಮತ್ತೂರು ಜೈಲಿಗೆ ಸಾಗಿಸಲಾಯಿತು. ಕೊಯಮತ್ತೂರಿನಲ್ಲಿ ಆ ರೈಲು ಡಬ್ಬಿಯನ್ನು ತೆರೆದಾಗ 64 ಬಂಧಿಗಳು ಉಸಿರುಕಟ್ಟಿ ಸತ್ತಿದ್ದರು. ಈ ದಮನದಲ್ಲಿ ಕನಿಷ್ಟ 10 ಸಾವಿರ ಮಾಪಿಳ್ಳೆ ಜನರನ್ನು ಸಾಯಿಸಲಾಯಿತು, 3000 ಮಂದಿಗೆ ಕರಿನೀರಿನ ಶಿಕ್ಷೆ ವಿಧಿಸಿ ಅಂಡಮಾನಿಗೆ ಸಾಗಿಸಲಾಯಿತು. 1857 ರ ಬಂಡಾಯ, ಹಾಗೂ ನಂತರ ನಡೆದ ಸಂತಾಲ ಬಂಡಾಯದ ನಂತರ ಇಷ್ಟೊಂದು ಜನರನ್ನು ಬ್ರಿಟಿಶರು ಒಂದೇ ಚಳುವಳಿಯಲ್ಲಿ ಬಲಿತೆಗೆದುಕೊಂಡ ಉದಾಹರಣೆ ಬೇರಿಲ್ಲ. ಇಷ್ಟೆಲ್ಲಾ ದಮನ ಚಕ್ರ ನಡೆಯುತ್ತಿದ್ದರೂ ಮಲಬಾರಿನ ಕಾಂಗ್ರೆಸ್ ಮುಖಂಡರು ಬ್ರಿಟಿಶ್ ಸೇನೆ ಮತ್ತು ಪೋಲೀಸರ ಅತ್ಯಾಚಾರಗಳ ವಿರುದ್ಧ ಕಿರುಬೆರಳನ್ನು ಎತ್ತಲಿಲ್ಲ. ಇನ್ನೊಂದೆಡೆ ಮುಸ್ಲಿಂ ಧಾರ್ಮಿಕ ಮುಖಂಡರು ಮಾಪಿಳ್ಳಾ ಕೃಷಿಕೂಲಿಕಾರರ ಹೋರಾಟವನ್ನೂ ಸಂಕುಚಿತ ಮಾರ್ಗದಲ್ಲೊಯ್ದರು. ಆದರೂ ಹಲವು ಹಿಂದೂಗಳು ಈ ಬಂಡಾಯದಲ್ಲಿ ಭಾಗವಹಿಸಿದರು. ಅವರಲ್ಲಿ ಜೀವಾವಧಿ ಶಿಕ್ಷೆ ಪಡೆದವರಲ್ಲಿ ಇವರೂ ಸೇರಿದ್ದರು. (ಮುಂದುವರಿಯುವುದು)

ದೇಶದೊಳಗೆ



\- ವಿಶ್ವ

ಬಿಜೆಪಿ ಸರ್ಕಾರಕ್ಕೆ ವಿಚಾರಣಾ ಆಯೋಗದ ಖಂಡನೆ

ಮಧ್ಯಪ್ರದೇಶದಲ್ಲಿ ಹಿಂದೆ ಅಧಿಕಾರದಲ್ಲಿದ್ದ ಸುಂದರಲಾಲ್ ಪಟ್ವಾ ನೇತೃತ್ವದ ಬಿಜೆಪಿ ಸರಕಾರಕ್ಕೆ ವಿಚಾರಣೆ ಆಯೋಗವೊಂದು ಛೀಮಾರಿ ಹಾಕಿದೆ.

1990 ರಲ್ಲಿ ತೆಂಡು ಎಲೆ(ಬೀಡಿ ಕಟ್ಟುವ ಎಲೆ) ನೀತಿಯನ್ನು ಹಠಾತ್ತನೆ ಬದಲಾವಣೆ ಮಾಡಿದ್ದರಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು 264 ಕೋಟಿ ರೂಪಾಯಿ ನಷ್ಟವಾಗಲು ಪಟ್ವಾ ಸರಕಾರವೇ ಹೊಣೆ ಎಂದು ನ್ಯಾಯ ಮೂರ್ತಿ ಕೆ.ಕೆ.ದುಬೆ ವಿಚಾರಣೆ ಆಯೋಗ ಹೇಳಿದೆ.

ಆಯೋಗದ ಶಿಫಾರಸುಗಳನ್ನು ಅಂಗೀಕರಿಸಿರುವ ಮಧ್ಯಪ್ರದೇಶ ಸರಕಾರ ಈ ಪ್ರಕರಣವನ್ನು ತನಿಖೆಗಾಗಿ ಸಿಬಿಐಗೆ ಒಪ್ಪಿಸಲು ನಿರ್ಧರಿಸಿದೆ. ಆಯೋಗದ ವರದಿಯನ್ನು ನವೆಂಬರ್ 13 ರಂದು ವಿಧಾನ ಸಭೆಯಲ್ಲಿ ಮಂಡಿಸಲಾಯಿತು.

1989 ರಲ್ಲಿ ಜಾರಿಗೆ ತರಲಾದ ತೆಂಡುಎಲೆ ನೀತಿಯ ಅನ್ವಯ ತೆಂಡು ಎಲೆಯನ್ನು ಸಂಗ್ರಹಿಸುವ ಹಾಗೂ ಮಾರಾಟ ಮಾಡುವ ಪೂರ್ಣ ಹೊಣೆಯನ್ನು ಸಹಕಾರಿ ಸಂಘಗಳಿಗೆ ವಹಿಸಲಾಗಿತ್ತು. ಈ ವ್ಯವಹಾರದಲ್ಲಿ ಮಧ್ಯವರ್ತಿಗಳಿಗೆ ಅವಕಾಶಗಳನ್ನು ನಿರಾಕರಿಸಲಾಗಿತ್ತು. ಆದರೆ ಬಿಜೆಪಿ ಸರಕಾರ ಮರುವರ್ಷವೇ ಅಂದರೆ 1990 ರಲ್ಲಿ ಈ ನೀತಿಯಲ್ಲಿ ಬದಲಾವಣೆ ತಂದು ಮಧ್ಯವರ್ತಿಗಳಿಗೆ ಅನುಕೂಲ ಮಾಡಿಕೊಟ್ಟಿತ್ತು.

ತೆಂಡುಎಲೆ ನೀತಿ ಬದಲಾದ್ದರಿಂದ ಬೆಲೆಯೇರಿಕೆ ಆಯಿತು. ಹೀಗಾಗಿ ಸರಕಾರಕ್ಕೆ ತೆಂಡು ಎಲೆಯ ಟೆಂಡರ್ ದರವನ್ನು ಏರಿಸುವ ಅನಿವಾರ್ಯತೆ ಉಂಟಾಯಿತು.

1989 ರಲ್ಲಿ ಅನುಷ್ಠಾನಕ್ಕೆ ತರಲಾದ ನೀತಿ ತುಂಬಾ ಯಶಸ್ವಿಯಾಗಿತ್ತು. ಆದ್ದರಿಂದ ಅದನ್ನು ಬದಲಾಯಿಸುವ ಅಗತ್ಯ ಇರಲಿಲ್ಲ ಎಂದು ದುಬೆ ಆಯೋಗ ಅಭಿಪ್ರಾಯ ಪಟ್ಟಿದೆ. ಒಂದು ವೇಳೆ ಈ ನೀತಿಯನ್ನು ಬದಲಾಯಿಸದಿದ್ದರೆ ರಾಜ್ಯ ಸರಕಾರ ತುಂಬಾ ಲಾಭ ಗಳಿಸಬಹುದಿತ್ತು ಎಂದು ಅದು ಹೇಳಿದೆ.

ಬೋನಸ್‌ಗೆ ಕೊಕ್ಕೆ

ತೆಂಡು ಎಲೆ ತೆಗೆಯುವವರರಿಗೆ ಕೊಡಬೇಕಿದ್ದ· 112.50 ಕೋಟಿ ರೂಪಾಯಿ ಬೋನಸನ್ನು ಅಂದಿನ ಬಿಜೆಪಿ ಸರಕಾರ ತಡೆಹಿಡಿದಿದ್ದಕ್ಕೆ ಯಾವ ಸಮರ್ಥನೆಯೂ ಇಲ್ಲ ಎಂದು ಆಯೋಗ ಸ್ಪಷ್ಟವಾಗಿ ಹೇಳಿದೆ. ಈ ನಿರ್ಧಾರಕ್ಕೆ ಅಂದಿನ ಮುಖ್ಯಮಂತ್ರಿ ಮತ್ತು ಅವರ ಸಚಿವ ಸಂಪುಟವೇ ಪೂರ್ಣ ಹೊಣೆ ಎಂದು ಕಟುವಾದ ಮಾತುಗಳಲ್ಲಿ ಹೇಳಿದೆ.

ಮಧ್ಯವರ್ತಿಗಳಿಗೆ ಅನುಕೂಲವಾಗುವಂತೆ ಮಾಡಿಕೊಟ್ಟಿದ್ದು ಹಾಗೂ ಕಾರ್ಮಿಕರಿಗೆ ಬೋನಸ್ ನಿರಾಕರಿಸಿದ್ದು ಬಿಜೆಪಿಯ ಶ್ರೀಮಂತರ ಪರ ಧೋರಣೆಗೆ ಹಿಡಿದ ಕೈಗನ್ನಡಿಯಾಗಿದೆ.

ಬಡಬಡಿಕೆ

ಈ ನಡುವೆ, ವಿಚಾರಣೆ ಆಯೋಗದ ನೇಮಕ ಅಸಂವಿಧಾನಿಕ ಎಂದು ಮಾಜಿ ಮುಖ್ಯ ಮಂತ್ರಿ ಸುಂದರ್‌ಲಾಲ್ ಪಟ್ವಾ ಹೇಳಿದ್ದಾರೆ. ಈ ನೇಮಕವನ್ನು ಪ್ರಶ್ನಿಸಿ ಹೈಕೋರ್ಟಿಗೆ ಅರ್ಜಿ ಸಲ್ಲಿಸಿದ್ದು ಅದರ ತೀರ್ಪು ಬರುವವರೆಗೆ ಆಯೋಗ ಕಾಯ ಬೇಕಿತ್ತು ಎಂದವರು ಹೇಳಿದ್ದಾರೆ. ಮುಖ್ಯ ಮಂತ್ರಿ ದಿಗ್ವಿಜಯ್ ಸಿಂಗ್ ಹಿಂದಿನ ಬಿಜೆಪಿ ಸರಕಾರದ ಪ್ರತಿಷ್ಠೆಗೆ ಮಸಿ ಬಳಿಯಲು ಪ್ರಯತ್ನಿಸುತ್ತಿದ್ದಾರೆ ಎಂದವರು ಆರೋಪಿಸಿದ್ದಾರೆ.

ತಾವು ಮಾಡಿದ ತಪ್ಪನ್ನು ಒಪ್ಪಿಕೊಳ್ಳಲಾಗದೆ ಬಿಜೆಪಿ ಮುಖಂಡರ ಹತಾಶ ಬಡಬಡಿಕೆ ಇದೆನ್ನದೆ ಇನ್ನೇನನ್ನೋಣ?

ಸಾಮೂಹಿಕ ಅತ್ಯಾಚಾರ ಪ್ರಕರಣ ರಾಜಸ್ಥಾನ ವಿ.ವಿ. ಅಧಿಕಾರಿಗಳಿಗೆ ತರಾಟೆ

ರಾಜಸ್ಥಾನ ವಿಶ್ವವಿದ್ಯಾಲಯುದ ಕ್ಯಾಂಪಸ್‌ನ ಹುಡುಗರ ಹಾಸ್ಟೆಲ್‌ನಲ್ಲಿ ಸೆಪ್ಟೆಂಬರ್ ಐದರಂದು ಹುಡುಗಿಯೊಬ್ಬಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ಪರಿಶೀಲನೆಗೆ ರಾಷ್ಟ್ರೀಯ ಮಹಿಳಾ ಆಯೋಗ(ಎನ್‌ಸಿಡಬ್ಲ್ಯೂ) ನೇಮಿಸಿದ್ದ ಆರು ಸದಸ್ಯರ ಸಮಿತಿ ತನ್ನ ವರದಿಯನ್ನು ಸಲ್ಲಿಸಿದೆ.

ಪೋಲೀಸರು, ವೈದ್ಯಕೀಯ ಅಧಿಕಾರಿಗಳು ಮತ್ತು ವಿ.ವಿ.ಯ ಹಿರಿಯ ಅಧಿಕಾರಿಗಳನ್ನು ಸಮಿತಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಕ್ಯಾಂಪಸ್ ಹಾಸ್ಟೆಲ್‌ಗಳ ಕಾರ್ಯನಿರ್ವಹಣೆಯನ್ನು ಅದು ಕಟುವಾಗಿ ಟೀಕಿಸಿದೆ.

ಆಯೋಗದ ಅಧ್ಯಕ್ಷೆ ಮೋಹಿನಿಗಿರಿ ನೇತೃತ್ವದ ನಿಯೋಗವೊಂದು ನ.16 ರಂದು ರಾಜ್ಯದ ಗೃಹಸಚಿವರನ್ನು ಭೇಟಿ ಮಾಡಿ 16 ಪುಟಗಳ ವರದಿಯನ್ನು ಸಲ್ಲಿಸಿತು.

ಅತ್ಯಾಚಾರ ಪ್ರಕರಣಕ್ಕೆ ವಿ.ವಿ. ಆಡಳಿತವರ್ಗ ಹೊಣೆ ಎಂದು ಆಯೋಗ ಟೀಕಿಸಿರುವುದರಿಂದ ವಿಶ್ವವಿದ್ಯಾಲಯದ ವ್ಯವಹಾರಗಳನ್ನು ಸರಿದಾರಿಗೆ ತರಲು ಪ್ರಯತ್ನಗಳನ್ನು ಮಾಡಲಾಗುತ್ತದೆ ಎಂದು ರಾಜಸ್ಥಾನ ಸರ್ಕಾರದ ವಕ್ತಾರರೊಬ್ಬರು ಹೇಳಿದ್ದಾರೆ.

ಕಲ್ಕತ್ತಾ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಾಧೀಶ ಡಿ.ಎಸ್.ತೆವಾಟಿಯಾ ನೇತೃತ್ವದ ತನಿಖಾ ಸಮಿತಿ ರಾಜ್ಯದ ವಿ.ವಿ.ಗಳ ಕುಲಾಧಿಪತಿಯೂ ಆಗಿರುವ ರಾಜ್ಯಪಾಲ ಬಲರಾಂಭಗತ್ ಅವರನ್ನು ಟೀಕಿಸದೆ ಬಿಟ್ಟಿಲ್ಲ. ಕ್ಯಾಂಪಸ್ ಹಾಸ್ಟೆಲ್‌ನಲ್ಲಿ ಕಾನೂನೆಂಬುದೇ ಇಲ್ಲ. ಮಾಜಿ ಕುಲಪತಿ ಪ್ರೋ.ಆರ್.ಎಸ್.ಸಿಂಗ್ ಕ್ಯಾಂಪಸ್‌ನಲ್ಲಿರುವವರ ಜೀವ ದ ರಕ್ಷಣೆಗೆ ಗಮನ ಕೊಡದೆ ರಿಮೋಟ್ ಕಂಟ್ರೋಲ್ ಆಧಾರ ದಲ್ಲಿ ಕೆಲಸ ಮಾಡುತ್ತಿ ದ್ದರು ಎಂದು ಹೇಳಿರುವ ತನಿಖಾ ಸಮಿತಿ, ಇಂಥದ್ದೆಲ್ಲ ಚಟುವಟಿಕೆಗಳು ರಾಜ್ಯಪಾಲರ ಗಮನಕ್ಕೆಬಾರದಿದ್ದುದು ತೀರಾ ಖಂಡನೀಯ ಎಂದಿದೆ.

ಸಿಪಿಐ(ಎಂ) ರಾಜ್ಯ ಸಮ್ಮೇಳನಗಳು

ಫೆಬ್ರುವರಿ 1998 ರಲ್ಲಿ ಸಿಪಿಐ(ಎಂ) ನ ಹದಿನಾಲ್ಕನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ನಡೆಯಲಿರುವ ರಾಜ್ಯ ಸಮ್ಮೇಳನಗಳ ದಿನಾಂಕಗಳು ಈ ಕೆಳಗಿನಂತಿವೆ.

1. ದಿಲ್ಲಿ	16-18, ನವಂಬರ್	ದಿಲ್ಲಿ
2. ರಾಜಸ್ಥಾನ್	21-23, ನವಂಬರ್	ಕೋಟಾ
3. ಮಧ್ಯಪ್ರದೇಶ	22-25, ನವಂಬರ್	ಭೋಪಾಲ್
4. ಅಂಡಮಾನ್-ನಿಕೋಬಾರ್	29-30, ನವಂಬರ್,	ಪೋರ್ಟ್‌ಬ್ಲೇರ್
5. ಆಂಧ್ರಪ್ರದೇಶ	30 ನವಂಬರ್-3 ಡಿಸೆಂಬರ್	ನಲಗೊಂಡಾ
6. ಪಂಜಾಬ್	6-8, ಡಿಸೆಂಬರ್	ಜಾಲಂಧರ್
7. ಮಣಿಪುರ	6-8, ಡಿಸೆಂಬರ್	ಇಂಫಾಲ್
8. ತ್ರಿಪುರಾ	11-14 ಡಿಸೆಂಬರ್	ಅಗರ್ತಲಾ
9. ಹಿಮಾಚಲ ಪ್ರದೇಶ	12-14 ಡಿಸೆಂಬರ್	ಮಂಡಿ
10. ಗುಜರಾತ್	13-14, ಡಿಸೆಂಬರ್	ಅಹಮದಾಬಾದ್
11. ಹರ್ಯಾಣ	16-17, ಡಿಸೆಂಬರ್	ರೋಹ್ತಕ್
12. ಉತ್ತರ ಪ್ರದೇಶ	16-18, ಡಿಸೆಂಬರ್	ಸಹರಾಣ್ ಪುರ್
13. ಒರಿಸ್ಸಾ	21-23, ಡಿಸೆಂಬರ್	ಪುರಿ
14. ಮಹಾರಾಷ್ಟ್ರ	24-26, ಡಿಸೆಂಬರ್	ಔರಂಗಾಬಾದ್
15. ತಮಿಳುನಾಡು	26-29 ಡಿಸೆಂಬರ್	ತಿರುಚಿ
16. ಅಸ್ಸಾಂ	27-29, ಡಿಸೆಂಬರ್	ಗುವಾಹಟಿ
17. ಕರ್ನಾಟಕ	30 ಡಿಸೆಂಬರ್ - 2 ಜನವರಿ	ಕೋಲಾರ
18. ಕೇರಳ	2-5, ಜನವರಿ	ಪಾಲಕ್ಕಾಡ್
19. ಬಿಹಾರ	9-11, ಜನವರಿ	ದರ್ಭಾಂಗಾ
20. ಪಶ್ಚಿಮಬಂಗಾಳ	17-22, ಜನವರಿ	ಹೌರಾ

ಎಡರಂಗದ ವೈರಿಗಳಿಗೆ ನಡುಕ ತಂದ ರ‍್ಯಾಲಿಗಳು

ಪ್ರಜಾಪ್ರಭುತ್ವ ಮತ್ತು ತ್ರಿಪುರಾದ ಅಭಿವೃದ್ಧಿಗೆ ಮಾರಕವಾಗಿರುವ ಶತ್ರುಗಳ ಮನದಲ್ಲಿ ನಡುಕ ಹುಟ್ಟಿಸುವ ಎರಡು ಬೃಹತ್ ಯುವಜನ ರ‍್ಯಾಲಿಗಳು ಉತ್ತರ ತ್ರಿಪುರಾದ ಧರ್ಮನಗರ(ನವೆಂಬರ್ 5) ಮತ್ತು ರಾಜಧಾನಿ ಅಗರ್ತಲಾದಲ್ಲಿ(ನವೆಂಬರ್ 7) ನಡೆದವು.

ಹಿಂದಿನ ಎಲ್ಲಾ ದಾಖಲೆಗಳನ್ನೂ ಮುರಿಯುವಷ್ಟು ಜನಸ್ತೋಮ ನೆರೆದಿದ್ದ ಈ ರ‍್ಯಾಲಿಗಳನ್ನು ಡಿವೈಎಫ್‌ಐ ಮತ್ತು ಅದಕ್ಕೆ ಸಂಯೋಜಿತವಾಗಿರುವ ಬುಡಕಟ್ಟು ಯುವಜನ ಒಕ್ಕೂಟ(ಟಿ.ವೈ.ಎಫ್) ಸಂಘಟಿಸಿದ್ದವು.

ಎಡಪಂಥೀಯ ಯುವ ಒಕ್ಕೂಟದ ಚಟುವಟಿಕೆಗಳನ್ನು ಸಂಘಟಿಸುವಲ್ಲಿ ಈ ರ‍್ಯಾಲಿಗಳು ಮೈಲಿಗಲ್ಲುಗಳಾಗಿವೆ. ಯುವಜನರ 16 ಅಂಶಗಳ ಬೇಡಿಕೆಗಳಲ್ಲದೆ ರಾಜ್ಯದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಜನರ ಪ್ರಾಣ ಹಾಗೂ ಆಸ್ತಿರಕ್ಷಣೆಯ ಘೋಷಣೆಗಳನ್ನು ಮುಂದಿಡಲಾಗಿತ್ತು.

ಬುಡಕಟ್ಟು ಮತ್ತು ಬುಡಕಟ್ಟೇತರ ಯುವಜನರು ಹೆಗಲಿಗೆ ಹೆಗಲು ಕೊಟ್ಟು ಒಗ್ಗಟ್ಟಿನಿಂದ ಹೋರಾಡಲು ಮುಂದಾಗಿರುವುದರಿಂದ ಅಪಹರಣಗಳು ಹಾಗೂ ಕೊಲೆಗಳ ಮೂಲಕ ಭಯದ ವಾತಾವರಣವನ್ನು ಸೃಷ್ಟಿಸಿ ಎಡರಂಗ ಸರಕಾರವನ್ನು ಪದಚ್ಯುತಗೊಳಿಸಲು ನಡೆದಿರುವ ರಾಜಕೀಯ ಕುತಂತ್ರಗಳಿಗೆ ಹಿನ್ನಡೆಯಾಗುವುದು ನಿಶ್ಚಿತ.

ಧರ್ಮನಗರ ರ‍್ಯಾಲಿಯಲ್ಲಿ ಸಿಪಿಐ(ಎಂ) ಸಂಸತ್ ಸದಸ್ಯ ಬಾದಲ್ ಚೌಧರಿ ಮುಖ್ಯ ಭಾಷಣಕಾರರಾಗಿದ್ದರು. ಅಗರ್ತಲಾದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್ ಮುಖ್ಯ ಭಾಷಣಕಾರರು. ಡಿವೈಎಫ್‌ಐ ರಾಜ್ಯ ಅಧ್ಯಕ್ಷ ಪ್ರಬೀರ್ ಚಕ್ರವರ್ತಿ ಮತ್ತು ಟಿವೈಎಫ್ ಅಧ್ಯಕ್ಷರೂ ಆಗಿರುವ ರಾಜ್ಯ ಯುವಜನ ಕಲ್ಯಾಣ ಖಾತೆ ಸಚಿವ ಜಿತೇಂದ್ರ ಚೌಧರಿ ಜಂಟಿಯಾಗಿ ಅಗರ್ತಲಾ ರ‍್ಯಾಲಿಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಕಾಂಗ್ರೆಸ್(ಐ), ಟಿಯುಜೆಎಸ್, ಟಿಎಸ್‌ಪಿ ಮೈತ್ರಿಕೂಟದ ಎಡರಂಗ ವಿರೋಧಿ ಪಿತೂರಿಗಳನ್ನು ವಿಫಲಗೊಳಿಸಲು ತ್ರಿಪುರಾದ ಯುವಜನರು ಪಣಬದ್ಧರಾಗಿದ್ದಾರೆ ಎಂದು ಪ್ರಬೀರ್ ಚಕ್ರವರ್ತಿ ಘೋಷಿಸಿದರು. ಐದು ವರ್ಷಗಳ ಹಿಂದೆ ಅರೆಫ್ಯಾಸಿಸ್ಟ್ ಮಿತ್ರಕೂಟ ಚುನಾವಣೆಯಲ್ಲಿ ಮಣ್ಣುಮುಕ್ಕುವಲ್ಲಿ ಯುವಜನರು ನಿರ್ವಹಿಸಿದ ಪಾತ್ರವನ್ನು ನೆನಪಿಸಿದ ಅವರು ಈಗಲೂ ಅದೇ ಪಾತ್ರವನ್ನು ನಿರ್ವಹಿಸುವ ದೃಢ ವಿಶ್ವಾಸವನ್ನು ಪುನರುಚ್ಚರಿಸಿದರು.

ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಬೂಲ್ ಭದ್ರಾ ಮತ್ತು ಟಿವೈಎಫ್ ಕಾರ್ಯದರ್ಶಿ ನರೇಶ ಜಮಾತಿಯಾ 16 ಅಂಶಗಳ ಬೇಡಿಕೆಗಳನ್ನು ವಿವರಿಸಿದರು. ಮೂರನೇ ಎಡರಂಗ ಸರಕಾರ ಭಾರೀ ಅಡೆತಡೆಗಳ ನಡುವೆಯೂ ಯುವಜನರ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುತ್ತಿದೆ ಎಂದವರು ಹೇಳಿದರು.

ಅಗರ್ತಲಾ ರ‍್ಯಾಲಿಯುನ್ನುದ್ದೇಶಿಸಿ ಮಾತನಾಡಿದ ಕಾಂ.ಮಾಣಿಕ್ ಸರ್ಕಾರ್ ಮಹಾನ್ ಅಕ್ಟೋಬರ್ ಕ್ರಾಂತಿಯ 80ನೇ ವಾರ್ಷಿಕೋತ್ಸವದ ದಿನದಂದು ಐತಿಹಾಸಿಕ ರ‍್ಯಾಲಿ ನಡೆಸುತ್ತಿರುವ ರಾಜ್ಯದ ಯುವಜನರನ್ನು ಅಭಿನಂದಿಸಿದರು. ತ್ರಿಪುರಾದ ಯುವಜನ ಚಳುವಳಿಯ 30 ವರ್ಷಗಳ ಇತಿಹಾಸದಲ್ಲಿ ಇದು ಯುವಜನತೆಯ ಅತ್ಯಂತ ಬೃಹತ್ ರ‍್ಯಾಲಿ ಎಂದವರು ವರ್ಣಿಸಿದರು.

ಯುವಜನರ ಸಮಸ್ಯೆ ತ್ರಿಪುರಕ್ಕೆ ಸೀಮಿತವಾದುದಲ್ಲ. ಅದು ಇಡೀ ದೇಶಕ್ಕೆ ಸಂಬಂಧಿಸಿದ್ದು. ಕಾಂಗ್ರೆಸ್ ಪಕ್ಷದ 45 ವರ್ಷಗಳ ಆಡಳಿತದಿಂದ ಈ ಸ್ಥಿತಿ ಉಂಟಾಗಿದೆ ಎಂದರು.

ಯುವಜನರ ಹೋರಾಟಕ್ಕೆ ಸಿಪಿಐ(ಎಂ) ಮತ್ತು ಎಡರಂಗ ಹೃತ್ಪೂರ್ವಕ ಸಹಕಾರ ನೀಡುತ್ತದೆ ಎಂದು ಘೋಷಿಸಿದರು.

ತುಮಕೂರಿನಲ್ಲಿ 'ಚೆ' ಹುತಾತ್ಮ ವರ್ಷಾಚರಣೆ

ಜಗತ್ತಿನ ಯಾವುದೇ ಮೂಲೆಯಲ್ಲಿನ ಶೋಷಕ ಸಮಾಜದ ನಿರ್ಮೂಲನೆಗೆ ಹೋರಾಡುವ ಶಕ್ತಿಗಳಿಗೆ ಸ್ಫೂರ್ತಿಯ ಚೇತನ ಕಾಂ. ಚೆಗುವಾರ. ಅವರು ಮೂರನೇ ಜಗತ್ತಿನ ಮತ್ತು ಲ್ಯಾಟಿನ್ ಅಮೇರಿಕಾದ ದೇಶಗಳ ವಿಮೋಚನೆಗಾಗಿ ನಡೆಸಿದ ಹೋರಾಟಗಳ ಸ್ಮರಣೀಯವಾದವು ಎಂದು ಬಿ.ಜಿ.ವಿ.ಎಸ್. ರಾಜ್ಯ ಕಾರ್ಯದಶಿಗಳಾದ ಸಿ. ಯತಿರಾಜು ಅಭಿಪ್ರಾಯಪಟ್ಟರು.

ನವೆಂಬರ್ 13ರಂದು ಎಸ್.ಎಫ್.ಐ., ಡಿ.ವೈ.ಎಫ್.ಐ. ಹಾಗೂ ಜಿಲ್ಲಾ ಶಾಂತಿ ಮತ್ತು ಸೌಹಾರ್ದ ಸಂಘಟನೆಯ ಜಿಲ್ಲಾ ಶಾಖೆಗಳು ನಗರದಲ್ಲಿ ಸಂಘಟಿಸಿದ್ದ 'ಚೆಗೆವಾರ' ಅವರ ಹುತಾತ್ಮ ವರ್ಷಾಚರಣೆಯ ಸಂದರ್ಭದಲ್ಲಿ 'ಚೆ' ಅವರ ಕುರಿತು ಮಾತನಾಡುತ್ತಿದ್ದರು.

'ಚೆ' ಅವರು ತಮ್ಮ ಆದರ್ಶಗಳನ್ನು ಎಂದೂ ಬಿಟ್ಟುಕೊಟ್ಟವರಲ್ಲ. ಜಗತ್ತಿನ ಶೋಷಣೆಯ ನಿರ್ಮೂಲನೆ ಕ್ರಾಂತಿಯಿಂದ ಮಾತ್ರ ಸಾಧ್ಯವೆಂದು ನಂಬಿದ ಅವರು ಎಂದೂ ಮನುಕುಲ ವಿರೋಧಿಯಾಗಿರಲಿಲ್ಲವೆಂದು ತಿಳಿಸಿದರು.

ಸಾಮ್ರಾಜ್ಯಶಾಹಿ ಅಮೇರಿಕನ್ನರಿಗೆ ಎಂದೂ ತಲೆಬಾಗದ, ಪುಟ್ಟ ಸಕ್ಕರೆ ಬಟ್ಟಲು 'ಕ್ಯೂಬಾ' ಸಾಮ್ರಾಜ್ಯಶಾಹಿಗಳ ಆರ್ಥಿಕ ದಿಗ್ಬಂದನಗಳ ನಡುವೆಯೂ ಅಲ್ಲಿನ ಸರ್ಕಾರ ಶಿಕ್ಷಣಕ್ಕೆ ಯಾವುದೇ ಕೊರತೆಯಾಗದಂತೆ ಅನುದಾನ ನೀಡುತ್ತಿದೆ. ಅದರ ಪರಿಣಾಮವಾಗಿಯೇ ಅಲ್ಲಿ 100% ಸಾಕ್ಷರತೆ ಸಾಧಿಸಲಾಗಿದೆ ಎಂದರು.

ಇತ್ತೀಚೆಗೆ 'ಕ್ಯೂಬಾ'ದ ಹವಾನಾದಲ್ಲಿ ನಡೆದ ಅಂತರರಾಷ್ಟ್ರೀಯ ವಿಶ್ವಯುವ ಜನೋತ್ಸವದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದ್ದ ಡಿ.ವೈ.ಎಫ್.ಐ. ನ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಗುರುಶಾಂತ್ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾ ನುಡಿದರು.

ಹವಾನದ ವಿಶ್ವಯುವಜನೋತ್ಸವವು ಕ್ಯೂಬಾದ ಸರ್ಕಾರಿ ಉತ್ಸವವಾಗದೆ ಕ್ಯೂಬಾದ ಜನತೆಯ ಜನೋತ್ಸವವಾಗಿತ್ತೆಂದು ನುಡಿದರು.

ಲಂಚಗುಳಿತನ ಹಾಗು ಭ್ರಷ್ಟಾಚಾರದ ವಿರುದ್ಧ ಸಮರ ಸಾರಿ ನಿರಂತರ ಹೋರಾಟವನ್ನು ನಡೆಸಬೇಕಾದ ತೀವ್ರ ಅನಿವಾರ್ಯತೆ ಇದೆ ಎಂದು ಈ ಸಮಾರಂಭವನ್ನು ಉದ್ಘಾಟಿಸಿದ ಕೈಗಾರಿಕೋದ್ಯಮಿ 'ಕಸ್ತೂರಿ ರಮೇಶ ಪೈ' ನುಡಿದರು. ಈ ಸಮಾರಂಭದಲ್ಲಿ ಎಸ್.ಎಫ್.ಐ.ನ ರಾಜ್ಯ ಅಧ್ಯಕ್ಷರಾದ ಕೆ.ಎನ್. ಉಮೇಶರವರು ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಹಿರಿಯ ಸಾಹಿತಿಗಳು ಹಾಗು ಶಾಂತಿ ಸೌಹಾರ್ದ ಸಂಘಟನೆಯ ಅಧ್ಯಕ್ಷರಾದ ವಿ. ಚಿಕ್ಕ ವೀರಯ್ಯನವರು ವಹಿಸಿದ್ದರು. ಪ್ರಾರಂಭದಲ್ಲಿ ಬಿಜಿವಿಎಸ್ ನ ಈ. ಬಸವರಾಜು ಹುತಾತ್ಮ ಗೀತೆಯನ್ನಾಡಿ ಎಐಪಿಎಸ್‌ಓ ಕಾರ್ಯದರ್ಶಿ ಟಿ.ಆರ್.ರೇವಣ್ಣನವರು ಸ್ವಾಗತಿಸಿ, ಸೈಯದ್ ಮುಜಿಬ್ ನಿರೂಪಿಸಿ, ಎಸ್‌ಎಫ್‌ಐ ನ ಸುಬ್ರಮಣ್ಯಂ ವಂದಿಸಿದರು.

ದ.ಕ. ಜಿಲ್ಲೆಯಲ್ಲಿ ಎಸ್‌ಎಫ್‌ಐ-ಡಿವೈಎಫ್‌ಐ ಗ್ರಾಮೀಣ ಚೈತ್ಯ ಶಿಬಿರ

ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಜಿಲ್ಲಾ ಸಮಿತಿಗಳು ಜಂಟಿಯಾಗಿ ಅಕ್ಟೋಬರ್ 12 ರಿಂದ 21 ರವರೆಗೆ ಧರ್ಮಸ್ಥಳಕ್ಕೆ 12 ಕಿ.ಮಿ. ದೂರವಿರುವ ಪಶ್ಚಿಮಘಟ್ಟದ ದಟ್ಟ ಅರಣ್ಯ ಪ್ರದೇಶವಾದ ಪುದುವೆಟ್ಟು ಎಂಬಲ್ಲಿ ಈ ಶಿಬಿರವನ್ನು ಹಮ್ಮಿಕೊಂಡಿತ್ತು. ಜಿಲ್ಲೆಯಲ್ಲಿ ಎರಡೂ ಸಂಘಟನೆಗಳಿಗೆ ನಾಯಕತ್ವ ನೀಡಲು ಕಾರ್ಯಕರ್ತರನ್ನು ತರಬೇತಿಗೊಳಿಸುವ ಈ ಶಿಬಿರವು ರಾಜ್ಯದಲ್ಲೇ ವಿಶಿಷ್ಟದ್ದಾಗಿದೆ. ದಿನಾಂಕ 12 ರಂದು ಕರ್ನಾಟಕ ಸರ್ಕಾರದ ಮುಖ್ಯ ಸಚೇತಕರಾದ ವಸಂತ ಬಂಗೇರಾರವರು ಶಿಬಿರದ ಉದ್ಘಾಟನೆಯನ್ನು, ಸಂಘಟನೆಯ ನಾಯಕರುಗಳಾದ ಕೆ.ಯಾದವಶೆಟ್ಟಿ, ಸುನೀಲ್ ಕುಮಾರ್ ಬಜಾಲ್ ಮತ್ತು ಕೆ.ವಸಂತ ಆಚಾರಿಯವರಿಗೆ 'ಗುದ್ದಲಿ'ಯನ್ನು ಹಸ್ತಾಂತರಿಸುವ ಮೂಲಕ ಮಾಡಿದರು. ಉದ್ಘಾಟನಾ ಸಮಾರಂಭದಲ್ಲಿ ಎಸ್.ವೈ.ಗುರುಶಾಂತ್, ಕೃಷ್ಣಪ್ಪ ಕೊಂಚಾಡಿ ಮೊದಲಾದವರು ವೇದಿಕೆಯಲ್ಲಿದ್ದರು. ಅಧ್ಯಕ್ಷತೆಯನ್ನು ಡಿವೈಎಫ್‌ಐ ಬೆಳ್ತಂಗಡಿ ತಾಲ್ಲೂಕು ಸಮಿತಿ ನಾಯಕರುಗಳಾದ ಹರಿದಾಸ್ ಎಸ್.ಎಂ. ವಹಿಸಿದ್ದರು. ಡಿವೈಎಫ್‌ಐ ನ ಬೆಳ್ತಂಗಡಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ವಿ.ಎಂ.ಭಟ್ ಕಾರ್ಯಕ್ರಮ ನಿರೂಪಿಸಿದರು.

ಶಿಬಿರದಲ್ಲಿ ಒಟ್ಟು 43 ಮಂದಿ ಭಾಗವಹಿಸಿದ್ದು, ಶಿಬಿರಾರ್ಥಿಗಳೆಲ್ಲಾ ಕಡ್ಡಾಯವಾಗಿ 25 ಪ್ರಶ್ನೆಗಳಿಗೆ ಉತ್ತರವನ್ನು ಬರೆಯಬೇಕಾಗಿತ್ತು. ಆ ಪ್ರಶ್ನಾವಳಿಯಲ್ಲಿ ಅವರ ಅಭಿರುಚಿ, ಹವ್ಯಾಸ, ತಿಳುವಳಿಕೆ ಮತ್ತು ಕೌಟುಂಬಿಕ ಹಿನ್ನಲೆಯನ್ನು ನಮೂದಿಸಬೇಕಾಗಿತ್ತು. ಅದರನ್ವಯ ಪ್ರತಿಯೊಬ್ಬರನ್ನು ಶಿಬಿರದಲ್ಲಿಗಮನ ಹರಿಸಿ ಮಾಹಿತಿ ನೀಡಲಾಯಿತು.

ಶಿಬಿರದಲ್ಲಿ 4 ತಂಡಗಳನ್ನು ಮಾಡಲಾಗಿತ್ತು. ಹಾಗೂ ಆ ತಂಡಕ್ಕೆ ಎಸ್‌ಎಫ್‌ಐ ಮತ್ತು ಡಿವೈಎಫ್‌ಐನ ಹುತಾತ್ಮ ಸಂಗಾತಿಗಳ ಹೆಸರನ್ನು ನೀಡಲಾಯಿತು. ಹತ್ತು ದಿನದ ಕಾರ್ಯಕ್ರಮದಲ್ಲಿ ಈ ತಂಡಗಳು ವ್ಯವಸ್ಥಾಪನೆಯಿಂದ ಒಳಗೊಂಡು, ನೀರು ಸರಬರಾಜು ಆಹಾರ ಒದಗಿಸುವುದು, ಶುಚಿತ್ವ ಇವೇ ಮೊದಲಾದವುಗಳನ್ನು ಪ್ರತಿನಿತ್ಯ ಅದೇ ಮಾದರಿಯಲ್ಲಿ ಮಾಡಬೇಕಾಗುತ್ತಿತ್ತು.

ಕಾಂ|| ಭಾಸ್ಕರ್ ಕುಂಬ್ಳೆ ತಂಡದ ನಾಯಕರಾಗಿ ಶಶಿಧರ್.ಕೆ. ಶಕ್ತಿನಗರ, ಕಾ|| ಶಕೀಲ್ ಅಹಮ್ಮದ್ ತಂಡಕ್ಕೆ ಹಿದಾಯಿತುಲ್ಲಾ, ಕಾಂ|| ಅಜಯ್ ತಂಡಕ್ಕೆ ಶ್ರೀನಿವಾಸ ಬಜಾಲ್, ಹಾಗೂ ಕಾಂ|| ಲೀಲಾವತಿ ತಂಡಕ್ಕೆ ಪ್ರಮಿಳಾರವರನ್ನು ಚೀಟಿ ಎತ್ತುವ ಮೂಲಕ ಆರಿಸಲಾಯಿತು.

ಡಿವೈಎಫ್‌ಐ ಜಿಲ್ಲಾ ಸಮಿತಿ ಕಾರ್ಯದರ್ಶಿ ರಾಮ್‌ದಾಸ್.ಕೆ ಇಡೀ ಶಿಬಿರದ ನಾಯಕರಾಗಿಯೂ, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ಉಪನಾಯಕರಾಗಿಯೂ ಆರಿಸಲಾಗಿತ್ತು. ಅದಲ್ಲದೆ ಬಿ.ಎಂ.ಭಟ್, ಬಾಲಕೃಷ್ಣ ಆಡೆಂಜ, ವಿ.ಸಿ.ಬೋಸ್ ಮತ್ತು ಹರಿದಾಸ್ ಎಸ್.ಎಂ.ರವರುಗಳು ಸಂಚಾಲಕರುಗಳಾಗಿ ಹತ್ತು ದಿನವೂ ದುಡಿದರು.

ಶಿಬಿರದ ದಿನಚರಿ: ಶಿಬಿರದ ದಿನಚರಿಯ್ಕೇ ಒಂದು ರೋಮಾಂಚನಕಾರಿ ಅನುಭವ. ಪ್ರತಿನಿತ್ಯವೂ ಶಿಬಿರಾರ್ಥಿಗಳನ್ನು ಮೇಲ್ಕಂಡ ನಾಲ್ಕರಲ್ಲಿ ಯಾವುದಾದರೊಂದು ತಂಡವು ಬೆಳಿಗ್ಗೆ 5.30ಕ್ಕೆ ಎಬ್ಬಿಸುತ್ತಿತ್ತು. ಪ್ರಾಥಃವಿಧಿ ಮುಗಿಸಿ 6 ಗಂಟೆಗೆ ಧ್ವಜಾರೋಹಣ (ಪ್ರತಿದಿನವೂ ನಡೆಯುತ್ತಿತ್ತು) ಲಘು ವ್ಯಾಯಾಮ ಮತ್ತು ಹಿಂದಿನ ದಿನದ ಕಾರ್ಯಕ್ರಮಗಳ ಸ್ಮರಣೆ ಮತ್ತು ಭಾಷಣ ಮಾಡಲು ಕರೆಯುತ್ತಿದ್ದರು. 7.15 ರಿಂದ 8.30 ರವರೆಗೆ ಪ್ರಕೃತಿಯೊಂದಿಗೆ ಮುಖಾಮುಖಿ ಕಾರ್ಯಕ್ರಮ ಜರುಗುತ್ತಿತ್ತು. ಅದ್ಭುತ ಪ್ರಕೃತಿಯ ಆ ಪುದುವೆಟ್ಟನಲ್ಲಿ ಎಲ್ಲೆಲ್ಲೂ ನೋಡಿದರೂ ಮುಗಿಲು ಮುಟ್ಟುವ ಮರಗಳು, ಅಂತಹ ಪ್ರಕೃತಿಯ ರಹಸ್ಯ ಅರಿಯಲು ಕಾನನಕ್ಕೆ ಎಲ್ಲ ಪಾದಗಳು ಚಲಿಸುತ್ತಿದ್ದವು. ಅಲ್ಲಿ ಪಕ್ಷಿಗಳ ಕಲರವ, ದುಂಬಿಗಳ ಝುಂಕಾರ, ನೀರಿನ ಜುಳುಜುಳು ನಿನಾದವನ್ನು ಆಲಿಸುತ್ತಿದ್ದರು. ಪ್ರಶ್ನೆಗಳನ್ನು ಕೇಳುತ್ತಿದ್ದರು. ಕಥೆ ಕವನ, ಕಾವ್ಯ ರಚಿಸುತ್ತಿದ್ದರು ಹಾಡುಗಳನ್ನು ಕಲಿಸಲಾಗುತ್ತಿತ್ತು. ಘೋಷಣೆ ಹಾಕುವ

ಪುಟ7 ಕ್ಕೆ

ರಶ್ಯಾ, ಚೀನಾದ ನಡುವೆ ಮುನ್ನೂರು ವರ್ಷಗಳ ಗಡಿ ವಿವಾದ ಪರಿಹಾರ



ರಶ್ಯಾ ಹಾಗೂ ಚೀನಾ ಕಳೆದ ವಾರ ಜಾಗತಿಕ ಮಹತ್ವದ ಚರಿತ್ರಾರ್ಹ ಒಪ್ಪಂದಕ್ಕೆ ಸಹಿ ಹಾಕಿದವು. ಈ ಒಪ್ಪಂದಕ್ಕೆ ರಶ್ಯದ ಅಧ್ಯಕ್ಷ ಯೆಲ್ಟ್‌ಸಿನ್ ಬೀಜಿಂಗ್‌ಗೆ ಭೇಟಿ ನೀಡಿದಾಗ ಚೀನಾದ ಅಧ್ಯಕ್ಷ ಜಿಯಾಂಗ್ ಝೆಮಿನ್ ಜತೆ ಸಹಿ ಹಾಕಿದರು. ಈ ಒಪ್ಪಂದದ ಪ್ರಕಾರ ರಶ್ಯದ ಪೂರ್ವದಲ್ಲಿರುವ ಚೀನಾದ ಜತೆಗಿರುವ ಸುಮಾರು 4300 ಕಿ.ಮಿ. ಉದ್ದದ ಗಡಿ ಬಗೆಗೆ ಮುನ್ನೂರು ವರ್ಷಗಳಿಂದ ಇರುವ ವಿವಾದಕ್ಕೆ ಪರಿಹಾರ ಹುಡುಕಲಾಯಿತು. ಈ ಗಡಿವಿವಾದದ ಬಗ್ಗೆ ಚೀನಾ-ರಶ್ಯಾಗಳ ನಡುವೆ ಸಂಬಂಧ ಸಾಮಾನ್ಯವಾದಂದಿನಿಂದ ಅದ್ವಿತೆಯ ಮಾತುಕತೆ ನಡೆಯುತ್ತಿದ್ದು, ನಿರೀಕ್ಷಿತ ಅವಧಿಯ ಮೊದಲೇ, ಈ ಸಮಸ್ಯೆಯನ್ನು ಪರಿಹರಿಸಲಾಗಿದೆ ಎಂಬುದು ಗಮನಾರ್ಹ.

ಇದಲ್ಲದೆ ರಶ್ಯಾದ ಪೂರ್ವ ಗಡಿಯಲ್ಲಿರುವ ಸೈಬೀರಿಯಾದಿಂದ ಚೀನಾದ ಉತ್ತರ ಭಾಗಕ್ಕೆ ಸಾವಿರ ಕಿ.ಮಿ. ಉದ್ದದ ಪೈಪ್‌ಲೈನ್ ಹಾಕುವ ಬಗ್ಗೆ ಆರ್ಥಿಕ ಹಾಗೂ ತಾಂತ್ರಿಕ ಸಹಕಾರದ ಒಪ್ಪಂದಕ್ಕೂ ರಶ್ಯನ್ ಅಧ್ಯಕ್ಷರ ಭೇಟಿಕಾಲದಲ್ಲಿ ಸಹಿ ಹಾಕಲಾಯಿತು. ರಶ್ಯಾ-ಚೀಣಾಗಳ ಐದನೇ ಶೃಂಗಸಭೆಯ ಹೊತ್ತಿಗೆ ಎರಡು ದೇಶಗಳ ನಡುವೆ ಎಲ್ಲಾ ರಂಗಗಳಲ್ಲೂ ಘನಿಷ್ಟ ಸಂಬಂಧ ಸಾಧ್ಯವಾಗಿರುವ ಬಗ್ಗೆ ಇಬ್ಬರೂ ಅಧ್ಯಕ್ಷರುಗಳು ಸಂತೋಷ ವ್ಯಕ್ತಪಡಿಸಿದರು. ಅದೇ ಸಮಯದಲ್ಲಿ ರಶ್ಯ-ಚೀನಾಗಳ ನಡುವಣ ಘನಿಷ್ಟ ಸಂಬಂಧ ಇತರ ಯಾವುದೇ ಮೂರನೇ ದೇಶದ ವಿರುದ್ಧ ಅಲ್ಲ ಎಂದು ಇಬ್ಬರೂ ನಾಯಕರು ಸ್ಪಷ್ಟಪಡಿಸಿದರು.

ಯುದ್ಧಕ್ಕೆ ಕಾಲು ಕೆರೆದರೂ ಇರಾಕಿ-ವಿರೋಧಿ ಕೂಟ ರಚಿಸಲು ಅಮೆರಿಕ ವಿಫಲ

ಅಮೆರಿಕ ಇನ್ನೊಂದು ಕೊಲ್ಲಿಯುದ್ಧ ಆರಂಭಿಸಲು ಕಾಲು ಕೆರೆಯುತ್ತಾ ಪ್ರಯತ್ನಿಸುತ್ತಿದ್ದರೂ, ವಿಶ್ವಸಂಸ್ಥೆ ಮೂಲಕ ಇರಾಕ್ ಮೇಲೆ ಆರ್ಥಿಕ ದಿಗ್ಬಂಧನ ಇನ್ನಷ್ಟು ಬಿಗಿಗೊಳಿಸಲು ಪ್ರಯತ್ನಿಸುತ್ತಿದ್ದರು. 1991 ರಲ್ಲಿ ಇರಾಕಿ-ವಿರೋಧಿ ಕೂಟ ರಚಿಸುವಲ್ಲಿ ಅಮೆರಿಕಕ್ಕೆ ದೊರೆತ ಯಶಸ್ಸು ದೊರೆತಿಲ್ಲ.

ಭದ್ರತಾ ಸಮಿತಿಯಲ್ಲೂ ಮಿಲಿಟರಿ ಕಾರ್ಯಾಚರಣೆಗೆ, ಬ್ರಿಟನ್ ಬಿಟ್ಟರೆ ಬೇರೆ ಯಾವ ಬೆಂಬಲವೂ ದೊರೆತಿಲ್ಲ. ಬಲ ಪ್ರಯೋಗದ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲದೆ ಮಾತ್ರ ಇರಾಕ್ ಮೇಲೆ ಒತ್ತಡ ಹೇರುವ ನಿರ್ಣಯ ಸಾಧ್ಯವಾಯಿತು.

ಅಮೆರಿಕ ಇನ್ನೊಂದು ಯುದ್ಧ ಹಡಗನ್ನು ಇರಾಕಿ ಕರಾವಳಿ ಹತ್ತಿರ ಕಳಿಸಿ, ಪ್ರದೇಶದಲ್ಲಿ ತನ್ನ ಮಿಲಿಟರಿ ತೋಳ್ಬಲ ತೋರಿಸುತ್ತಿದ್ದರೂ. ಪ್ರದೇಶದ ಅರಬರ ಬೆಂಬಲ ಪಡೆಯಲು ಸಾಧ್ಯವಾಗಿಲ್ಲ. ಕಳೆದ ಬಾರಿ ಇರಾಕ್ ಆಕ್ರಮಣಕ್ಕೆ ಒಳಗಾಗಿದ್ದ, ಕುವೈತ್ ಸಹ ಇರಾಕ್ ಮೇಲೆ ಆಕ್ರಮಣಕ್ಕೆ ಒಪ್ಪಿಗೆ ಕೊಡಲು ತಯಾರಿಲ್ಲ. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಅರಬ್ ದೇಶಗಳ ಭೇಟಿಯ ನಂತರ ಯಾವುದೇ ರೀತಿಯ ಇರಾಕಿ-ವಿರೋಧಿ ಕೂಟ ರಚಿಸಲು ಸಾಧ್ಯವಾಗದೆ ಅವರು ಬರಿಕೈಯಲ್ಲಿ ತೆರಳಬೇಕಾಯಿತು.

ಈ ನಡುವೆ ವಿಶ್ವಸಂಸ್ಥೆಯ ಭದ್ರತಾ ಸಮಿತಿ ಮುಂದೆ ಇರಾಕ್ ತನ್ನ ಧೋರಣೆಯನ್ನು ಮುಂದಿಡಲು ಸಾಧ್ಯವಾದದ್ದು, ಅಮೆರಿಕವನ್ನು ಇನ್ನಷ್ಟು ದುರ್ಬಲಗೊಳಿಸಿದೆ.

ಇರಾಕ್ ತನ್ನ ನಿಜವಾದ ಸಮಸ್ಯೆಗಳ ಬಗ್ಗೆ ಇಡೀ ಜಗತ್ತಿನ ಗಮನ ಸೆಳೆಯಲು ಸಾಧ್ಯವಾಗಿದೆ. 1991 ರ ಇರಾಕ್‌ನ ವಿರುದ್ಧ ಕೊಲ್ಲಿಯುದ್ಧ ಅಮೆರಿಕವನ್ನು ಜಗತ್ತಿನ ಏಕಮಾತ್ರ ಸೂಪರ್ ಪವರ್ ಆಗಿ ಸ್ಥಾಪಿಸಿತ್ತು.

ಈಗಿನ ಇರಾಕಿ ಪ್ರತಿರೋಧ ಅಮೆರಿಕದ ಸೂಪರ್ ಪವರ್‌ಗಿರಿಯ ಟೊಳ್ಳುತನವನ್ನು ಬಯಲು ಪಡಿಸಿತೇ?

ಜಪಾನ್-ಅಮೆರಿಕನ್ ಭದ್ರತಾ ಒಪ್ಪಂದ ಬಗ್ಗೆ ಚೀನಾ, ಕೊರಿಯಾ ಆತಂಕ

ಜಪಾನ್ ಹಾಗೂ ಅಮೆರಿಕಗಳ ನಡುವಿನ ಇತ್ತೀಚಿನ ವಿಸ್ತರಿಸಲಾದ ಭದ್ರತಾ ಒಪ್ಪಂದದ ಬಗ್ಗೆ ಚೀನಾಮಾತ್ರವಲ್ಲ, ಈ ಪ್ರದೇಶದಲ್ಲಿ ಅಮೆರಿಕದ ಬಾಲಬಡುಕನಾಗಿದ್ದ ದಕ್ಷಿಣ ಕೊರಿಯಾ ಸಹ ಆತಂಕ ವ್ಯಕ್ತಪಡಿಸಿದೆ.

ಸೆಪ್ಟೆಂಬರ್‌ನಲ್ಲಿ ಅಮೆರಿಕ-ಜಪಾನ್ ನಡುವೆ ಭದ್ರತಾ ಒಪ್ಪಂದವನ್ನು ಇಡೀ ಏಶ್ಯಾ-ಫೆಸಿಫಿಕ್ ಪ್ರದೇಶಕ್ಕೆ ವಿಸ್ತರಿಸಲಾಗಿದೆ. ಏಶಿಯಾ-ಫೆಸಿಫಿಕ್ ಪ್ರದೇಶದಲ್ಲಿ ಈ ಎರಡು ದೇಶಗಳಲ್ಲಿ ಯಾವುದೇ ದೇಶದ ಮೇಲೆ ಆಕ್ರಮಣ ನಡೆದರೂ ಇನ್ನೊಂದ ದೇಶ ನೆರವಿಗೆ ಬರುವುದು ಎಂಬುದು ಈ ಹೊಸ ಒಪ್ಪಂದದ ಸಾರ. ಎರಡನೇ ಮಹಾಯುದ್ಧದಲ್ಲಿ ಜಪಾನಿ ಮಿಲಿಟರಿ ಆಕ್ರಮಣದ ಧೋರಣೆಗೆ ತುತ್ತಾದ ದಕ್ಷಿಣ-ಪೂರ್ವ ಏಶ್ಯಾದ ಎಲ್ಲಾ ದೇಶಗಳೂ ಈ ಒಪ್ಪಂದದಿಂದ ಆತಂಕಿತವಾಗಿವೆ.

ಚಿನಾದ ಪ್ರಧಾನಿ ಲಿಪೆಂಗ್ ರವರ ಜಪಾನಿ ಭೇಟಿಯ ಸಮಯದಲ್ಲಿ ಚೀನಾ ಈ ಬಗ್ಗೆ ಜಪಾನ್‌ನಿಂದ ಆಶ್ವಾಸನೆಗಳನ್ನು ಕೇಳಲಿದೆ.

ಮಿಲಿಟರಿ ಉಪಗ್ರಹ ನಾಶ ಮಾಡುವ ಅಮೆರಿಕನ್ ಲೇಸರ್‌ಗನ್‌ಗಳ ಬಗ್ಗೆ ಯೆಲ್ಟ್‌ಸಿನ್ ಪ್ರತಿಭಟನೆ

ಮಿಲಿಟರಿ ಉಪಗ್ರಹಗಳನ್ನು ನಾಶ ಮಾಡುವ ಲೇಸರ್ ಮುಂತಾದ ಭಾರಿ ಮಾರಕ ಶಕ್ತಿ ಉಳ್ಳ ಹೊಸ ಮಾರಕಾಸ್ತ್ರಗಳನ್ನು ಅಮೆರಿಕ ಅಭಿವೃದ್ಧಿ ಪಡಿಸುತ್ತಿರುವುದನ್ನು ಪ್ರತಿಭಟಿಸಿ, ರಶ್ಯದ ಅಧ್ಯಕ್ಷ ಯೆಲ್ಟ್‌ಸಿನ್ ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್‌ಗೆ ಪತ್ರ ಬರೆದಿದ್ದಾರೆ. ರಶ್ಯದ ಬಳಿ ಇಂತಹ ಮಾರಕಾಸ್ತ್ರಗಳನ್ನು ತಯಾರಿಸುವ ಸಾಮರ್ಥ್ಯ ಇದ್ದು, ರಶ್ಯ ಸ್ವಯಂ ಇಚ್ಛೆಯಿಂದ ಇಂತಹ ಮಾರಕಾಸ್ತ್ರಗಳನ್ನು ತಯಾರಿಸದಿರಲು ನಿರ್ಧರಿಸಿದೆ. ಅಮೆರಿಕ ಈಗ ಇಂತಹ ಅಸ್ತ್ರಗಳನ್ನು ತಯಾರಿಸದಿರುವಂತೆ ಹೊಸ ಅಸ್ತ್ರ ನಿಯಂತ್ರಣ ಒಪ್ಪಂದಕ್ಕೆ ಬರಬೇಕೆಂದು ಒತ್ತಾಯಿಸಿದ್ದಾರೆ.

ಇದು ಆಗದಿದ್ದಲ್ಲಿ ಈ ಹೊಸ ಮಾರಕಾಸ್ತ್ರಗಳು ಅಮೆರಿಕಕ್ಕೆ ಹಿಂದಿನ ಎಲ್ಲಾ ಶಸ್ತ್ರಾಸ್ತ್ರ ನಿಯಂತ್ರಣ ಒಪ್ಪಂದಗಳನ್ನು ಅರ್ಥಹೀನಗೊಳಿಸುವ, ಹೊಸ ಸಾಮರ್ಥ್ಯ ನೀಡುತ್ತದೆ ಎಂದಿದ್ದಾರೆ. ಈವರೆಗಿನ ಭದ್ರತೆಯನ್ನು ನಾಶಮಾಡುತ್ತದೆ ಎಂದಿದ್ದಾರೆ.

ಅಮೆರಿಕನ್ ಯುದ್ಧ-ವಿರೋಧಿ ಗುಂಪುಗಳ ಪ್ರತಿಭಟನೆ: ಇರಾಕ್ ಮೇಲೆ ಅಮೆರಿಕನ್ ಆಕ್ರಾಮಕ ನೀತಿ ವಿರುದ್ಧ

ನ್ಯೂಯಾರ್ಕ್‌ನಲ್ಲಿ ನೆಲೆ ಇರುವ ಇಂಟರ್ ನ್ಯಾಶನಲ್ ಆಕ್ಷನ್ ಸೆಂಟರ್ ಎಂಬ ಯುದ್ಧ-ವಿರೋಧಿ ಶಾಂತಿ ಚಳುವಳಿ, ಇರಾಕ್ ಮೇಲೆ ಅಮೆರಿಕ ಆಕ್ರಮಣ ನಡೆಸಿದರೆ ಆ ಕೂಡಲೇ ಸ್ಯಾನ್ ಫ್ರಾನ್ಸಿಸ್ಕೋ, ನ್ಯೂಯಾರ್ಕ್ ಮುಂತಾದ ಅಮೆರಿಕದ ನಗರಗಳಲ್ಲಿ ತತ್‌ಕ್ಷಣವೇ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸುವುದಾಗಿ ಹೇಳಿದ್ದು, ಜಗತ್ತಿನಾದ್ಯಂತ ಎಲ್ಲಾ ಶಾಂತಿಪ್ರಿಯರು ಇದರಲ್ಲಿ ಸೇರಬೇಕೆಂದು ಕರೆ ನೀಡಿದೆ.

ಅಮೆರಿಕ ಇರಾಕ್ ಮೇಲೆ ಹೊರಿಸಿರುವ ದಿಗ್ಬಂಧನ ಕೊಲ್ಲಿ ಯುದ್ಧದಲ್ಲಿ ಆದದ್ದಕ್ಕಿಂತ ಹೆಚ್ಚು ಸಾವು-ನೋವು ಉಂಟು ಮಾಡಿದೆ. ಅಲ್ಲದೆ ಈ ದಿಗ್ಬಂಧನವನ್ನು ಮುಂದುವರೆಸಲು ಕೊಡುತ್ತಿರುವ ಕಾರಣವೂ ಅಷ್ಟೇ ಅಪಹಾಸ್ಯಕರವಾದದ್ದು. ಅಮೆರಿಕದ ಪರೀಕ್ಷಕರು ಇರಾಕ್ VX ಗ್ಯಾಸ್ ಎಂಬ ಯುದ್ಧದಲ್ಲಿ ಬಳಸುವ ಗ್ಯಾಸ್ ಉತ್ಪಾದನಾ ಸಾಮರ್ಥ್ಯ ಇಲ್ಲ ಎಂದು ತೋರಿಸಬೇಕು ಎಂದು ಹೇಳುತ್ತಾರೆ. VX ಗ್ಯಾಸ್‌ಗೆ ಬೇಕಾಗುವುದು, ಸಾಮಾನ್ಯ ಕೀಟನಾಶಕಗಳಿಗೆ ಬೇಕಾದ ಕಚ್ಚಾವಸ್ತುಗಳೇ. ಅಂದರೆ ಇರಾಕ್ ಕೀಟನಾಶಕ ಉತ್ಪಾದಿಸುವ ಸಾಮರ್ಥ್ಯ ಇಲ್ಲ ಎಂದು ತೋರಿಸಬೇಕೆ ಎಂದು ಅಮೆರಿಕದ ಅಪಹಾಸ್ಯಕರ ಬೇಡಿಕೆಗಳನ್ನು ಪ್ರಶ್ನಿಸಿದೆ. ಇರಾಕ್ ಮೇಲೆ ಯುದ್ಧ ಹೂಡಲು ಅಮೆರಿಕ ನೆಪವೊಡ್ಡುತ್ತಿದೆ ಎಂದು ಖಾರವಾಗಿ ಹೇಳಿದೆ.

ಹತ್ತು ಸಾವಿರ ಜರ್ಮನ್ ಪೋಸ್ಟಲ್ ಕಾರ್ಮಿಕರ ಪ್ರತಿಭಟನಾ ಮುಷ್ಕರ

ಪೋಸ್ಟಲ್ ಸೇವೆಯನ್ನು ಉದಾರೀಕರಿಸಿ, ಖಾಸಗಿ ಕಂಪನಿಗಳಿಗೆ ತೆರೆಯುವ ಸರಕಾರದ ಯೋಜನೆಯನ್ನು ಪ್ರತಿಭಟಿಸಿ, ಜರ್ಮನಿಯ ಸಾರ್ವಜನಿಕ ಸ್ವಾಮ್ಯದ ಪೋಸ್ಟ್ ಆಫೀಸ್‌ನ ಹತ್ತುಸಾವಿರ ಕಾರ್ಮಿಕರು ಭಾರಿ ಪ್ರತಿಭಟನಾ ಪ್ರದರ್ಶನ ಮತ್ತು ಮುಷ್ಕರ ನಡೆಸಿದರು. ಒಂದು ದಿನದ ಮಟ್ಟಿಗೆ ಜರ್ಮನ್ ಪೋಸ್ಟಲ್ ಸೇವೆ ಅಸ್ತವ್ಯಸ್ತವಾಗಿತ್ತು.

ನೂರು ಗ್ರಾಮ್‌ಗಿಂತ ಹೆಚ್ಚಿನ ಭಾರದ ಅಂಚೆ ಸೇವೆಯನ್ನು ಖಾಸಗಿ ಕಂಪನಿಗಳಿಗೆ ತೆರೆಯುವುದು, ೨೦೦೨ನೇ ವರ್ಷದ ನಂತರ ಎಲ್ಲಾ ಅಂಚೆ ಸೇವೆಯೂ ಖಾಸಗಿಯವರಿಗೆ ತೆರೆಯುವುದು ಸರ್ಕಾರದ ಯೋಜನೆ. ಇದರಿಂದ ಸಾವಿರಾರು ಉದ್ಯೋಗಗಳು ನಷ್ಟವಾಗುತ್ತದೆ. ಜರ್ಮನ್ ಪಾರ್ಲಿಮೆಂಟ್‌ನ ಈ ಯೋಜನೆ, ಕಾನೂನಾದರೆ ೧೯೯೮ ರ ಆರಂಭದ ಹೊತ್ತಿಗೆ ಪೋಸ್ಟಲ್ ಸೇವೆಯ ಖಾಸಗೀಕರಣ ಆರಂಭವಾಗುತ್ತದೆಂದು ಯೂನಿಯನ್ ತಿಳಿಸಿದೆ.

ಚೆಕ್ ಕಮ್ಯುನಿಸ್ಟ್ ದೈನಿಕದ ಉತ್ಸವ

ಯುರೋಪಿಯನ್ ಕಮ್ಯುನಿಸ್ಟ್ ಪಕ್ಷದ ಪತ್ರಿಕೆಗಳು, ವರ್ಷದಲ್ಲಿ ಒಂದು ಬಾರಿ ಸಾಂಸ್ಕೃತಿಕ ಉತ್ಸವ ನಡೆಸಿ, ಜನಜೀವನದಲ್ಲಿ ಅರ್ಥಪೂರ್ಣವಾಗಿ ಪಾಲ್ಗೊಳ್ಳುವುದು ಸಂಪ್ರದಾಯ. ಫ್ರೆಂಚ್ ಮತ್ತು ಇಟಾಲಿಯನ್ ಕಮ್ಯುನಿಸ್ಟ್ ಪಕ್ಷಗಳ ದಿನಪತ್ರಿಕೆಗಳು ನಡೆಸುವ ಉತ್ಸವ ಭಾರಿ ಪ್ರಸಿದ್ಧ.

ಇದೇ ರೀತಿ ಚೆಕ್ ಕಮ್ಯುನಿಸ್ಟ್ ಪಕ್ಷದ ದೈನಿಕ 'ಹೆಲೊ ನೊವಿನಿ' ಅಕ್ಟೋಬರ್ 4 ರಂದು ಸಾಂಸ್ಕೃತಿಕ ದಿನ ಸಂಘಟಿಸಿದೆ. ಚೆಕ್ ದೇಶದ ಹಲವು ಭಾಗಗಳಿಂದ ಬಂದ 20 ಸಾವಿರ ಜನ ಈ ಉತ್ಸವದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಉತ್ಸವದಲ್ಲಿ ಭಾಗವಹಿಸಿದ್ದ 80 ವರ್ಷದ ಮಾಜಿ ಯೋಧನೊಬ್ಬ 1937 ರಲ್ಲಿ ಎಡಪತ್ರಿಕೆಯೊಂದು ನಡೆಸಿದ್ದ ಬಾರಿ ಉತ್ಸವ ನೆನಪಾಯಿತು ಎಂದನಂತೆ. ಉತ್ಸವದಲ್ಲಿ ಹಾಡುಗಳಲ್ಲದೆ ಮ್ಯಾಜಿಕ್, ಕವಿತಾವಾಚನ, ರಾಜಕೀಯ ವ್ಯಂಗ್ಯ ಇತ್ಯಾದಿ ಪ್ರದರ್ಶಿಸಲ್ಪಟ್ಟವು. ಪಕ್ಷದ 22 ಪಾರ್ಲಿಮೆಂಟ್ ಸದಸ್ಯರು, ಪತ್ರಿಕೆಯ ಪತ್ರಕರ್ತರು ಉತ್ಸವದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

ರ್‍ಯಾಲಿಯಲ್ಲಿ ಭಾಗವಹಿಸುತ್ತಾ ಏಳು ವರ್ಷಗಳಿಂದ ಕಠಿಣ ಪರಿಸ್ಥಿತಿಯಲ್ಲಿ ಸಮಾಜವಾದ ಕಮ್ಯುನಿಸ್ಟ್ ಪಕ್ಷದ ದನಿಯನ್ನು ಎತ್ತಿಹಿಡಿಯುವ ತನ್ನ ವಿಶಿಷ್ಟ ಪಾತ್ರ ವಹಿಸಿದೆ ಎಂದರು ದೈನಿಕದ ಪ್ರಧಾನ ಸಂಪಾದಕ.

ಈ ಸಾಂಸ್ಕೃತಿಕ ಉತ್ಸವಕ್ಕೆ ಏಳು ಸೋದರ(ಇಟಲಿ, ಜರ್ಮನಿ ಎರಡು ಪಕ್ಷಗಳು, ಪೋರ್ಚುಗಲ್, ರಶ್ಯ, ಗ್ರೀಕ್ ಮತ್ತು ಸ್ಲೋವಾಕಿಯ) ಕಮ್ಯುನಿಸ್ಟ್ ಪಕ್ಷಗಳಿಂದ ಪ್ರತಿನಿಧಿಗಳು ಬಂದಿದ್ದರು.

ಇತ್ತೀಚೆಗೆ 19 ಗ್ರಾಮ ಕೌನ್ಸಿಲುಗಳಿಗೆ ನಡೆದ ಉಪಚುನಾವಣೆಗಳಲ್ಲಿ ಚೆಕ್ ಕಮ್ಯುನಿಸ್ಟ್ ಪಕ್ಷ ಶೇಕಡಾ 13.5 ಮತಗಳಿಸಿ ಅತ್ಯಂತ ದೊಡ್ಡ ಪಕ್ಷವಾಗಿ ಹೊಮ್ಮಿದೆ. ಪಕ್ಷೇತರ ಅಭ್ಯರ್ಥಿಗಳನ್ನು ಬಿಟ್ಟರೆ ಇತರ ಎಲ್ಲಾ ಪಕ್ಷಗಳು ಮತಗಳಿಕೆಯಲ್ಲಿ ಕಮ್ಯುನಿಸ್ಟ್ ಪಕ್ಷಕ್ಕಿಂತ ಹಿಂದಿವೆ.

ರಾಷ್ಟ್ರೀಯ ಐಕ್ಯತೆಗಾಗಿ ಇಟಲಿಯನ್ ಕಮ್ಯುನಿಸ್ಟರ ರ್‍ಯಾಲಿ

ರಾಷ್ಟ್ರೀಯ ಐಕ್ಯತೆ ಮೂರನೇ ಜಗತ್ತಿನ ದೇಶದಲ್ಲಿ ಮಾತ್ರವಲ್ಲ, ಅಭಿವೃದ್ಧಿ ಬಂಡವಾಳಶಾಹಿ ದೇಶಗಳಲ್ಲೂ ಇದು ಸಮಸ್ಯೆ. ಇಟಲಿಯ ಕಮ್ಯುನಿಸ್ಟ್ ನಾಯಕರು 'ನಾರ್ದನ್ ಲೀಗ್' ಎನ್ನುವ ಸಂಘಟನೆ ಉತ್ತರ ಇಟಲಿಯನ್ನು ಪ್ರತ್ಯೇಕಿಸುವ ಬೇಡಿಕೆ ಎಬ್ಬಿಸಿರುವುದರ ವಿರುದ್ಧ 'ರಾಷ್ಟ್ರೀಯ ಐಕ್ಯತೆ'ಗೆ ಒತ್ತಾಯಿಸಲು ರ್‍ಯಾಲಿ ಸಂಘಟಿಸಿದ್ದರು. ಇದಕ್ಕೆ ದೊರೆತ ಭಾರಿ ಪ್ರತಿಕ್ರಿಯೆ, ಪ್ರತ್ಯೇಕತಾವಾದಿ 'ನಾರ್ದನ್ ಲೀಗ್' ಮತ್ತು ಅವರ ಬೂರ್ಜ್ವಾ ಸಮರ್ಥಕರನ್ನು ನಡುಗಿಸಿದೆ. ಮಿಲಾನ್ ಮತ್ತು ವೇನಿಸ್ ನಗರಗಳಲ್ಲಿ ಹತ್ತುಲಕ್ಷ ಜನರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು ಎನ್ನಲಾಗಿದೆ.

ಎಂಟು ಸಾವಿರ ಸ್ಕೂಲುಗಳನ್ನು ಮುಚ್ಚ ಹೊರಟಿರುವ ಉಕ್ರೇನ್

ಸೋವಿಯತ್ ಒಕ್ಕೂಟದಲ್ಲಿ ವಿಶೇಷ ಸವಲತ್ತು ಇರುವ ವರ್ಗ ಯಾವುದಾದರೂ ಇದ್ದರೆ ಅದು ಮಕ್ಕಳದು, ಎಂದಿದ್ದರು ರವಿಂದ್ರನಾಥ್ ಠಾಗೋರ್. ಇಂದಿನ ಮಾಜಿ ಸೋವಿಯತ್ ಒಕ್ಕೂಟದ ಗಣರಾಜ್ಯದಗಳ ಕಥೆಯೇ ಬೇರೆ.

ಉಕ್ರೇನ್‌ನ ಸರ್ಕಾರ ಬಜೆಟ್ ಕೊರತೆಯಿಂದಾಗಿ ಎಂಟುಸಾವಿರ ಮಾಧ್ಯಮಿಕ ಸ್ಕೂಲುಗಳನ್ನು 1997 ರಲ್ಲಿ ಮುಚ್ಚಬೇಕಾಗುತ್ತದೆ ಎಂದು ಪ್ರಕಟಿಸಿದೆ. 1997 ರ ಬಜೆಟ್ ನಲ್ಲಿ ಕನಿಷ್ಟ ಅಗತ್ಯದ ಶೇಕಡಾ ೪೦ ರಷ್ಟು ಹಣಕಾಸು ಒದಗಿಸಿಲ್ಲವಾದ್ದರಿಂದ ಈ ಕ್ರಮ ಅನಿವಾರ್ಯ ಎಂದಿದೆ. ರಾಷ್ಟ್ರೀಯ ಶಿಕ್ಷಣ ಸಮಿತಿ ಶಿಕ್ಷಣಕ್ಕೆ ಹಣಕಾಸಿನ ಕೊರತೆಯಿಂದಾಗಿ ಎಪ್ಪತ್ತು ಸಾವಿರ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಕಾಲೇಜು ಪ್ರವೇಶ ಸಿಗುವುದಿಲ್ಲ, ನಾಲ್ಕು ತಿಂಗಳುಗಳಿಂದ ಶಿಕ್ಷಕರಿಗೆ ಸಂಬಳ ಕೊಡಲಾಗಿಲ್ಲ. ಇದು ಸಮಾಜವಾದ ತೊರೆದು, ತ್ವರಿತ ಪ್ರಗತಿಗಾಗಿ ಬಂಡವಾಳಶಾಹಿ ಹಿಡಿದದ್ದರ ಪರಿಣಾಮ

........ಗ್ರಾಮೀಣ ಚೈತ್ರ್ಯ ಶಿಬಿರ

ಪುಟ 6 ರಿಂದ

ವಿಧಾನ ಹೇಳಿ ಕೊಡಲಾಗುತ್ತಿತ್ತು. ಸಸ್ಯಕಾಶಿಗಳ ಬಗ್ಗೆ ಹೇಳಿಕೊಡಲಾಯಿತು. ಮತ್ತೆ ಶಿಬಿರದ ಶಾಲೆಗೆ ತಲುಪಲಾಗುತ್ತಿತ್ತು. 8.00 ರಿಂದ 8.30 ರ ವರೆಗೆ ಬೆಳಗಿನ ಉಪಹಾರ ಪ್ರತಿದಿನವೂ ಗಂಜಿ ನೀರು ಮಿಶ್ರಿತ ಅನ್ನ ಮತ್ತು ತೆಂಗಿನ ಕಾಯಿಯ ಚಟ್ನಿ. ಎಂತಹ ಸರಳ ಆಹಾರ. ಎಲ್ಲರಿಗೂ ಹೊಸ ಅನುಭವ. ಎಲ್ಲರೂ ಬಹಳ ಆತ್ಮೀಯತೆಯಿಂದ ಸವಿಯುತ್ತಿದ್ದರು.

8.30 ರ ಹೊತ್ತಿಗೆ ಆದಾಗಲೇ ದುಡಿಮೆಯ ಉಡುಪು ಧರಿಸಿ ಗುದ್ದಲಿ, ಹಾರೆಗಳೊಂದಿಗೆ 3 ಕಿ.ಮೀ. ದೂರದ ರಸ್ತೆ ನಿರ್ಮಾಣದತ್ತ ಪಯಣ. ಅಲ್ಲಿ ಸುಮಾರು 4 ತಾಸುಗಳ ದುಡಿಮೆ. ಮತ್ತೆ 12. 30 ಕ್ಕೆ ಅಲ್ಲಿಂದ ಸ್ನಾನ ಮತ್ತು ಬಟ್ಟೆ ಬರೆ ಶುಚಿತ್ವಕ್ಕಾಗಿ ನದಿ ಪಾತ್ರಕೆ ಶಿಬಿರಾರ್ಥಿಗಳು ಸಾಗುತ್ತಿದ್ದರು. ಸ್ನಾನ ಆದಮೇಲೆ 1.30ಕ್ಕೆ ಊಟಕ್ಕಾಗಿ ಸೇರುತ್ತಿದ್ದರು. ಶಿಬಿರಾರ್ಥಿಗಳ ಒಂದು ತಂಡ ಅನ್ನ ಬಡಿಸುತ್ತಿತ್ತು. ಅಪರಾಹ್ನ 2.30 ರಿಂದ 3.00 ತನಕ ನಿದ್ದೆಗಾಗಿ ವಿಶ್ರಾಂತಿ ಸಮಯ.

ಅಪರಾಹ್ನ 3.ಗಂಟೆಗೆ ಅಧ್ಯಯನ, ಉಪನ್ಯಾಸದ ತರಗತಿಗಳು ಪ್ರಾರಂಭವಾಗುತ್ತಿತ್ತು. 5.30 ರಿಂದ 6.00 ಗಂಟೆ ವರೆಗೆ ತಂತ್ರಜ್ಞಾನ ಮತ್ತು ಮನೋವೈಜ್ಞಾನಿಕ ಆಟ ನಡೆಸಲಾಗುತ್ತಿತ್ತು. 6 ರಿಂದ 6.30 ರವರೆಗೆ ಮತ್ತೆ ಉಪನ್ಯಾಸ. 7.00 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಇದು ಶಿಬಿರಾರ್ಥಿಗಳಿಂದಲೇ ನಡೆಯುತ್ತಿತ್ತು. ಸಾರ್ವಜನಿಕರು ಬೃಹತ್ ಸಂಖ್ಯೆಯಲ್ಲಿ ಸೇರುತ್ತಿದ್ದರು. 9.30 ರಿಂದ10.00 ಊಟ. 10 ರಿಂದ 10.30 ರ ವರೆಗೆ ಅಂದಿನ ದಿನದ ಕಾರ್ಯಕ್ರಮದ ವಿಮರ್ಶೆ. ಶಿಬಿರಾರ್ಥಿಗಳಿಂದ ಭಾಷಣ ಮಾಡುವ ಪ್ರಯತ್ನ ಮತ್ತು ದಿನಚರಿ ಬರೆಯಲು ಅವಕಾಶ ಕಲ್ಪಿಸಲಾಗುತ್ತಿತ್ತು. ರಾತ್ರಿ 11.00 ಗಂಟೆಗೆ ಅಂದಿನ ಕಾರ್ಯಕ್ರಮ ಮುಗಿದು ಎಲ್ಲರೂ ಕಡ್ಡಾಯವಾಗಿ ಮಲಗಬೇಕಿತ್ತು.

ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್, ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಜಿ.ಎನ್. ನಾಗರಾಜ್, ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್, ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್, ಪ್ರಾಧ್ಯಾಪಕರಾದ ಡಾ|| ಕೆ.ರಾಜೇಂದ್ರ , ವಾಸುದೇವ ಉಚ್ಚಿಲ್, ತಾರಾನಾಥ್ ಕಾಪಿಕಾಡು, ಜೀವನ್ ರಾಂ, ಬಿ.ಎಂ.ಭಟ್, ಶಿವಕುಮಾರ್, ಕೆ.ಯಾದವ ಶೆಟ್ಟಿ, ಪುದುಚರಣ ಹಾಗೂ ಪ್ರೇಮನಾಥ್ ಉಪನ್ಯಾಸ ಮಾಡಿದರು.

ಸಮಾರೋಪ ಸಮಾರಂಭ: ದಿನಾಂಕ 20.20.97 ರಂದು ಸಮಾರೋಪ ಸಮಾರಂಭ ನಡೆಸಲಾಗಿತ್ತು. ಕಾರಣ 21 ರಂದು ಎಲ್ಲ ಶಿಬಿರಾರ್ಥಿಗಳ ಅನುಭವ ಹಂಚುವುದು ಮತ್ತು ಊರಿನ ಜನರೊಂದಿಗೆ ಮುಖಾಮುಖಿ ಸಂವಾದವನ್ನು ಏರ್ಪಡಿಸಲಾಯಿತು. ಅತ್ಯಂತ ಕನಿಷ್ಟ ಜನಸಂಖ್ಯೆಯ ಪುದು ವಟ್ಟಿನಲ್ಲಿ ಸುಮಾರು 500 ಜನಕ್ಕೂ ಮಿಕ್ಕಿದ ಸಭೆ ನಡೆಯಿತು. ಪೆಟ್ರೋಮ್ಯಾಕ್ಸ್ ಸಹಾಯದಲ್ಲಿ ಬಹಿರಂಗ ಸಭೆ ನಡೆಯಿತು. ಸಿಪಿಐ(ಎಂ) ನ ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ಪ್ರಮುಖ ಭಾಷಣಕಾರರಾಗಿದ್ದರು. ಅಲ್ಲದೆ ಡಿವೈಎಫ್ಐನ ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ, ತಾಲ್ಲೂಕು ಪಂಚಾಯತ್ ಸದಸ್ಯ ಜಲಜಾಕ್ಷಿ ಮುಂತಾದವರು ಭಾಷಣ ಮಾಡಿದರು. ಶಿಬಿರದ ಮಾಹಿತಿಯನ್ನು ರಾಮದಾಸ್ ಮತ್ತು ಸುನೀಲ್ ಕುಮಾರ್ ಬಜಾಲ್ ನೀಡಿದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕೆ.ಯಾದವ ಶೆಟ್ಟಿ ವಹಿಸಿದ್ದರು. ಕೊನೆಯಲ್ಲಿ ಬಾಲಕೃಷ್ಣ ಆಡೆಂಜ ವಂದಿಸಿದರು. ರಾತ್ರಿ ಸುಮಾರು 11.30 ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶಿಬಿರಾರ್ಥಿಗಳು ನೀಡಿದರು.

ನಿರಂತರ ಹತ್ತುದಿನಗಳ ಕಾಲ ಜರುಗಿದ ಶಿಬಿರವು ಪ್ರತಿ ದಿನವೂ ಶಿಬಿರಾರ್ಥಿಗಳು ಉತ್ಸಾಹದ ಚಿಲುಮೆಗಳಾಗಿದ್ದವು. ಆಯಾಸ ಏನೆಂದು ಅರಿಯದೇ ಹೋದರು. ಕತ್ತಿ, ಹಾರೆ, ಗುದ್ದಲಿಗಳನ್ನು ಹಿಡಿಯದವರು ಅದನ್ನು ಹಿಡಿದು ನವೋತ್ಸಾಹದಿಂದ ದುಡಿದರು. ಪತ್ರಿಕೆಯ ಬಗ್ಗೆ ಅರಿತುಕೊಂಡರು ಮಾತ್ರವಲ್ಲ ಪತ್ರಿಕೆಯೊಂದನ್ನೇ ಸಿದ್ಧಪಡಿಸಿದರು. ಭಾಷಣ ಮಾಡಲು ಅರಿಯದವರು ನಿರರ್ಗಳವಾಗಿ ಸಭೆಯನ್ನು ದ್ದೇಶಿಸಿ ಮಾತನಾಡಿದರು. ಮೈಕೈಗಳಿಗೆ ವೇಷಭೂಷಣ, ಹಾವಭಾವ ನೀಡದವರು ಅದ್ಭುತ ಕಲಾ ಪ್ರತಿಭೆಯನ್ನು ತೋರ್ಪಡಿಸಿದರು.

ಶಿಬಿರದ ಮುಕ್ತಾಯದ ಹಂತ ತಲುಪಿದಾಗ ಒಂದು ಮನೆಯಾಗಿ, ಕುಟುಂಬವಾಗಿ ಬೆರೆತವರು ತಮ್ಮ ತಮ್ಮ ಅಗಲುವಿಕೆಯ ದುಃಖದೊಂದಿಗೆ ಕೊನೆಯ ಅನಿಸಿಕೆಗಳೊಂದಿಗೆ ಪರಸ್ಪರ ಒಬ್ಬರನ್ನೊಬ್ಬರು ಬೀಳ್ಕೊಟ್ಟರು.

ವರದಿ: ಕೃಷ್ಣಪ್ಪ ಕೊಂಚಾಡಿ
ಮತ್ತು ವಿಶ್ವನಾಥ.ಕೆ.

ಸಮುದಾಯದಿಂದ ಕವಿಗೋಷ್ಠಿ, ಚಿತ್ರಕಲಾ ಪ್ರದರ್ಶನ, ಬೀದಿನಾಟಕ

ಧಾರವಾಡ: ಸ್ವಾತಂತ್ರ್ಯದ ಸುವರ್ಣ ಉತ್ಸವದ ಅಂಗವಾಗಿ, ಸಮುದಾಯದ ಹುಬ್ಬಳ್ಳಿ-ಧಾರವಾಡ ಘಟಕದ ಇಪ್ಪತ್ತನೇ ವರ್ಷಾಚರಣೆಯ ಸಂದರ್ಭದಲ್ಲಿ ನವೆಂಬರ್ 16 ರಂದು ಹುಬ್ಬಳ್ಳಿಯ ಅನಂತ ರೆಸಿಡೆನ್ಸಿ ಸಭಾಂಗಣದಲ್ಲಿ ಸ್ವಾತಂತ್ರ್ಯ ಹೋರಾಟ ಹಾಗೂ ಆಶೋತ್ತರಗಳ ಆಶಯಗಳ ಆಧಾರದಲ್ಲಿ ಕವಿಗೋಷ್ಠಿ, ಚಿತ್ರಕಲಾ ಪ್ರದರ್ಶನ, ಬೀದಿ ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಒಂದು ವಾರದ ಹಿಂದೆ ವಿವಿಧ ನಗರಗಳ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಸಮುದಾಯ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮುನ್ನೂರಕ್ಕೂ ಹೆಚ್ಚು ಕಿರಿಯ ಕಲಾವಿದರ ಆಯ್ದ ಚಿತ್ರಕಲೆಗಳನ್ನು ದಿ 16 ರ ಸಮಾರಂಭದಲ್ಲಿ ಪ್ರದರ್ಶಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಾಜಿ ಮಹಾಪೌರರಾದ ಡಾ||ಪಾಂಡುರಂಗ ಪಾಟೀಲರು ಸ್ಪರ್ಧೆಯಲ್ಲಿ ಗೆದ್ದ ಇಪ್ಪತ್ತು ಕಲಾವಿದರಿಗೆ ಬಹುಮಾನಗಳನ್ನು ವಿತರಿಸಿದರು. ಇತರ ಕಲಾವಿದರಿಗೆ ಪ್ರಮಾಣಪತ್ರಗಳನ್ನು ನೀಡಲಾಯಿತು. ಡಾ||ಪಾಟೀಲರು ಸಾಂದರ್ಭಿಕವಾಗಿ ಮಾತನಾಡುತ್ತಾ, ಸಮುದಾಯದ ಸ್ಥಳೀಯ ಘಟಕವು ಕಳೆದ ಎರಡು ದಶಕಗಳ ಕಾಲ ವೈಚಾರಿಕ ಕ್ರಾಂತಿ ನಡೆಸುವುದರಲ್ಲಿ, ಸಾಮಾಜಿಕ ಅನಿಷ್ಟಗಳ ಕುರಿತು ಜನಜಾಗೃತಿ ಮೂಡಿಸುವುದರಲ್ಲಿ, ರಾಜಕೀಯ ಕ್ರಾಂತಿಗೆ ಸ್ಫೂರ್ತಿ ನೀಡುವುದರಲ್ಲಿ ತನ್ನ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ನೀಡಿದ ಸೇವೆಯನ್ನು ನೆನಪಿಸಿಕೊಟ್ಟರು. ನಾಟಕ, ಚಿತ್ರಕಲೆ, ಇತ್ಯಾದಿ ಮಾಧ್ಯಮಗಳಲ್ಲಿ ತಮ್ಮ ಪ್ರತಿಭೆಗಳನ್ನು ಅಭಿವ್ಯಕ್ತಿಗೊಳಿಸಲು, ಸ್ಪರ್ಧೆಗಿಳಿಯಲು ಸಾಕಷ್ಟು ಜನರು ಮುಂದೆ ಬರುತ್ತಿದ್ದರೂ, ಅಂತಹವರಿಗೆ ನಿರಂತರ ವೇದಿಕೆ ಒದಗಿಸುವ ಕೆಲವೇ ಸ್ವಯಂ ಸೇವಾ ಸಂಘಟನೆಗಳಲ್ಲಿ ಸಮುದಾಯ ಮುಂಚೂಣಿಯಲ್ಲಿದೆ ಎಂದು ಶ್ಲಾಘಿಸಿದರು. ಸಮುದಾಯದ ಅಧ್ಯಕ್ಷರಾದ ಸಿ.ಆರ್. ಭಟ್ ಮಾತನಾಡುತ್ತಾ, ಸ್ವಾತಂತ್ರ್ಯ ಸುವರ್ಣ ಉತ್ಸವವನ್ನು ಕೇವಲ ಅಬ್ಬರದ ಸಭೆ ಸಮಾವೇಶಗಳಿಗೇ ಸೀಮಿತವಾಗಿರಿಸದೆ, ದೇಶದ ಇತಿಹಾಸವನ್ನು ಅಧ್ಯಯನ ಮಾಡಿ ಅವರ ಸ್ಫೂರ್ತಿಯನ್ನು ಮೈಗೂಡಿಸಿಕೊಂಡು ಅಪೂರ್ಣವಾದ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವವನ್ನು ಪೂರ್ಣಗೊಳಿಸಲು ಶ್ರಮಿಸಲು ಕರೆ ನೀಡಿದರು.

ಸಮಾರಂಭ ಹಾಗೂ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಪ್ರೊ|| ಮಾಲತಿ ಪಟ್ಟಣಶೆಟ್ಟಿ ಅವರು ಪ್ರಸ್ತಾವಿಕವಾಗಿ ಮಾತನಾಡುತ್ತಾ, ಶತಮಾನಗಳ ಹಿಂದಿನ ಬಸವೇಶ್ವರರ ಕಾಲದ ವೈಚಾರಿಕ ಕ್ರಾಂತಿಯ ಕೆಲಸವನ್ನೇ ಸಮುದಾಯ ಮುಂದುವರಿಸುತ್ತಿರುವುದಕ್ಕೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಶೋಷಿತರ ಬಗ್ಗೆ ಸಮುದಾಯಕ್ಕಿರುವ ಕಾಳಜಿ, ಕಲೆಯನ್ನು ಅವರ ಆಯುಧವನ್ನಾಗಿ ಬಳಸಿ ವೀರಾವೇಶದಿಂದ ಮುನ್ನಡೆಯುತ್ತಿರುವ ಇಪ್ಪತ್ತರ ಹರೆಯದ ಸಮುದಾಯಕ್ಕೆ ಶುಭ ಕೋರಿದರು. ಕವಿಗೋಷ್ಠಿಯಲ್ಲಿ ಜಿಲ್ಲೆಯ ವಿವಿಧ ಪ್ರದೇಶಗಳಿಂದ ಇಪ್ಪತ್ತು ಖ್ಯಾತ ಕವಿಗಳು ಭಾಗವಹಿಸಿದ್ದು ತಮ್ಮ ಹಾಸ್ಯ, ವಿಡಂಬನೆ, ಚುಟುಕು, ಗಂಭೀರ ಕಾವ್ಯಗಳ ಮೂಲಕ ಸಮಕಾಲೀನ ಸಮಸ್ಯೆಗಳ ಹಾಗೂ ಸವಾಲುಗಳ ಮೇಲೆ ಬೆಳಕು ಬೀರಿದರು. ಪದಗಳ ಸಾಲುಗಳಷ್ಟೇ ಕಾವ್ಯಗಳಾಗಲಾರವು. ಕಾವ್ಯ ಜನರಿಗೆ ತಿಳಿಯುವಂತಿರಬೇಕು. ಜನರ ಧ್ವನಿ ಆಗಿರಬೇಕು, ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವದ ಜ್ಯೋತಿ ಆಗಿರಬೇಕು, ಜನರಲ್ಲಿ ಪ್ರೀತಿ ಸೌಹಾರ್ದ ತುಂಬಿಸುವಂತಿರಬೇಕು, ಕಾವ್ಯ ಬೀದಿಗೆ ಬರಬೇಕು, ಸಮಾಜದ ವಕ್ರರೇಖೆಗಳನ್ನು ತಿದ್ದಲು ಜನರನ್ನು ಪ್ರೇರೇಪಿಸುವಂತಿರಬೇಕು, ಜೊತೆಗೇ ಉನ್ನತ ಗುಣಮಟ್ಟದ್ದಾಗಿರಬೇಕು ಎಂದು ಪ್ರೊ|| ಮಾಲತಿ ಪಟ್ಟಣ ಶೆಟ್ಟಿ ಅವರು ಕಿರುಕಾವ್ಯ ಮೀಮಾಂಸೆಯನ್ನು ನಡೆಸಿ ತನ್ನ ಒಂದು ಕವನವನ್ನು ಓದಿಹೇಳಿದರು.

ಪ್ರಾರಂಭದಲ್ಲಿ 'ಸ್ವರ್ಗ ಸಂದೇಶ' ಎಂಬ ಬೀದಿ ನಾಟಕ ಪ್ರದರ್ಶನ ನಡೆಯಿತು. ಖ್ಯಾತ ಕವಿ ಸತೀಶ್ ಕುಲ್ಕರ್ಣಿ ಬೀದಿ ನಾಟಕವನ್ನು ಉದ್ಘಾಟಿಸುತ್ತಾ, ಸ್ವಾತಂತ್ರ್ಯಾನಂತರದ ಸ್ವಾರ್ಥಪರ ಖಾಸಗಿ 'ನಾನು' ಎಂಬುದು ಹೋಗಿ, ಸ್ವಾತಂತ್ರ್ಯ ಹೋರಾಟದ ಕಾಲದ ನಿಸ್ವಾರ್ಥ ಸಾರ್ವಜನಿಕ ಹಿತದ 'ನಾವು' ಎಂಬುದು ಮರುಕಳಿಸಬೇಕು ಎಂದರು. ವಿ.ವಿ. ಈಳಿಗೇರ ನಾಟಕ ರಚಿಸಿ ನಿರ್ದೇಶಿಸಿದರು. ಸ್ವರ್ಗವಾಸಿಗಳಾದ ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು, ಸುಭಾಸ್ ಚಂದ್ರ ಬೋಸ್, ಭಗತ್‌ಸಿಂಗ್, ಎ.ಕೆ. ಗೋಪಾಲನ್. ಅಂಬೇಡ್ಕರ್ ಮೊದಲಾದ ರಾಷ್ಟ್ರನಾಯಕರು ಭಾರತದಲ್ಲಿ ಕೆಲವು ವರ್ಷಗಳಿಂದ ಐ.ಎಂ.ಎಫ್., ಜಾಗತಿಕ ಬ್ಯಾಂಕು, ವಿಶ್ವ ವ್ಯಾಪಾರ ಸಂಸ್ಥೆಗಳ ಶರತ್ತುಗಳಿಗೆ ಶರಣಾಗಿ ಖಾಸಗೀಕರಣ, ಜಾಗತೀಕರಣ, ಆಧಾರಿತ ಆರ್ಥಿಕ ನೀತಿಯಿಂದಾಗಿ ತಾವು ಕಂಡ ಸ್ವಾತಂತ್ರ್ಯದ ಕನಸುಗಳು ನುಚ್ಚು ನೂರಾಗುತ್ತಿರುವುದನ್ನು ತಿಳಿದು ಪುನಃ ಸ್ವಾತಂತ್ರ್ಯ ಹೋರಾಟ ಪ್ರಾರಂಭಿಸಲು ಭೂಮಿಗಿಳಿದು ಬರುವುದೇ 'ಸ್ವರ್ಗ ಸಂದೇಶ' ದ ಮುಖ್ಯಾಂಶಗಳು.

ಈ ಕಾರ್ಯಕ್ರಮಗಳನ್ನು ಸಂಘಟಿಸುವಲ್ಲಿ ಸಮುದಾಯದ ಪದಾಧಿಕಾರಿಗಳಾದ ಜಗದೀಶ್ ಮಂಗಳೂರು ಮಠ, ಜೀವನ ಮಾರಕರ, ಗಂಗಾಧರ ಗೌಡದ, ಮತ್ತಿತರರು ಶ್ರಮಿಸಿದರು.

ವರದಿ: ಸಿ.ಆರ್. ಭಟ್

ಅಣಕ

ಶರತ್ ಚಂದ್ರ

ಗುಟ್ಟು ರಟ್ಟಾದರೆ ಲಂಚ ವಾಪಸ್!

ನಮ್ಮ ಎಲ್ಲಾ ರಾಜಕೀಯ, ಆರ್ಥಿಕ, ಸಾಮಾಜಿಕ ನೀತಿಗಳಿಗೆ ಮಾದರಿಯಾಗಿದ್ದ ಇಂಗ್ಲೆಂಡಿನಿಂದ ಇತ್ತೀಚೆಗೆ ಬಂದಿರುವ ಹೊಸ ಮಾದರಿಯನ್ನು, ನಮ್ಮ ನಾಯಕರು ಸ್ವಾಗತಿಸುವುದರಲ್ಲಿ ಏನೇನೂ ಸಂದೇಹವಿಲ್ಲ.

ಏನಪ್ಪಾ ಅದು - ಎಂದರೆ, ಬ್ರಿಟನ್ನಿನ ಹೊಸ ಪ್ರಧಾನಿ ಟೋನಿ ಬ್ಲೇರ್ ಭ್ರಷ್ಟಾಚಾರದ ಬಗ್ಗೆ ಹಾಕಿಕೊಟ್ಟ ಹೊಸ ಮೇಲ್ಪಂಕ್ತಿ! ಲೇಬರ್ ಪಾರ್ಟಿಗೆ ಒಂದು ಕಂಪನಿ ಡೋನೇಶನ್ ರೂಪದಲ್ಲಿ ಹತ್ತುಲಕ್ಷ ಪೌಂಡು ಲಂಚ ಕೊಟ್ಟು ತಮ್ಮ ಕೆಲಸ ಮಾಡಿಸಿಕೊಳ್ಳಲು ಹೋದಾಗ, ಗುಟ್ಟುರಟ್ಟಾಗಿ, ನಮ್ಮ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರಂತೆ ಮಿ|| ಕ್ಲೀನ್ ಎಂದು ಬಿರುದು ಪಡೆದು ಓಡಾಡುತ್ತಿದ್ದ ಟೋನಿ ಬ್ಲೇರ್‌ಗೆ ಫಜೀತಿಗೆ ಇಟ್ಟುಕೊಂಡಿತು. ಕೂಡಲೇ ಚುರುಕಿನ ಪ್ರಧಾನಿ ಹಂಗಾಗಿದ್ದು ಹೌದು. ಆದರೆ ಆ ಡೊನೇಷನನ್ನು ಹಿಂದಿರುಗಿಸಲಾಗುವುದು ಎಂದು ಘೋಷಿಸಿ ನಿಜವಾಗಲೂ ಎಲ್ಲಾ ದೇಶಗಳ ಭ್ರಷ್ಟ ರಾಜಕಾರಣಿಗಳಿಗೆ ಹೊಸ ದಾರಿ ತೋರಿಸಿದ್ದಾರೆ.

ಮಂತ್ರಿಗಳು, ಐಎಎಸ್‌ಗಳು ಓಪನ್ನಾಗಿ ಹೇಳುತ್ತಿದ್ದಾರಂತೆ - ಕೆಲಸ ಆಗದಿದ್ದರೆ ಅಥವಾ ಗುಟ್ಟು ರಟ್ಟಾದರೆ ಲಂಚ ವಾಪಸ್ ಅಂತ. ಭಾರಿಕಂಪನಿಗಳ ದಲ್ಲಾಳಿಗಳೂ ಲಂಚ ನೋಡುವಾಗ ಡಿಮಾಂಡ್ ಮಾಡುತ್ತಿದ್ದಾರಂತೆ-ಗುಟ್ಟುರಟ್ಟಾದರ, ಕೆಲಸ ಆಗದಿದ್ದರೆ ಲಂಚ ವಾಪಸ್ ಕೊಡಬೇಕಂತ.

ಇದು ಎಷ್ಟು ಕ್ಲಿಕ್ ಆಗಿಬಿಟ್ಟಿದೆ ಎಂದರೆ ಕುದುರೆ ವ್ಯಾಪಾರಕ್ಕೆ ಇಳಿಯಲು ಹಿಂದೇಟು ಹೊಡೆಯುತ್ತಿರುವ ಎಂ.ಪಿಗಳಿಗೆ ದಿಲ್ಲಿಯಲ್ಲಿ ಹೇಳುತ್ತಿದ್ದಾರಂತೆ - ಹೊಸ ಸರ್ಕಾರ ರಚಿಸಲು ಪ್ರಯತ್ನಿಸುತ್ತಿರುವವರು ಲಂಚ ವಾಪಸ್ ಮಾಡುವುದು ವಿದೇಶಿ ಸಂಸ್ಕೃತಿ ನಮ್ಮ ಭಾರತೀಯ ಸಂಸ್ಕೃತಿಗೆ ವಿರುದ್ಧವಾದದ್ದು. ನೀವೇನು ಲಂಚ ವಾಪಸು ಕೊಡಬೇಕಾಗಿಲ್ಲ ಎಂದು ಭರವಸೆ ಕೊಟ್ಟಿದ್ದಾರಂತೆ.

ಆ ರೀತಿ ನೋಡಿದರೆ ಚಂದ್ರಸ್ವಾಮಿಗೆ ಲಂಚ ಕೊಟ್ಟ ಉಪ್ಪಿನಕಾಯಿ ದೊರೆ ಸಾಯುವವರೆಗೆ ಹೋರಾಡಿದ್ದು ಕೆಲಸ ಆಗಲಿಲ್ಲ, ಲಂಚ ವಾಪಸು ಕೊಡಿ ಅಂತ ತಾನೆ.

ಇಷ್ಟೆಲ್ಲಾ ಹಗರಣಗಳ ಬಗ್ಗೆ ಕೇಸು ಅಂತ ಹಣ ಖರ್ಚು ಮಾಡುವ ಬದಲು, ಲಂಚ ತಗೊಳ್ಳಬಹುದು ಆದರೆ ಕೆಲಸ ಆಗದಿದ್ದರೆ ಇಲ್ಲಾ, ಗುಟ್ಟು ರಟ್ಟಾದರೆ ಲಂಚ ವಾಪಸು ಮಾಡಬೇಕು ಎಂದು ಕಾನೂನು ಮಾಡಬೇಕು ಎಂದು ಹಲವು ಪಕ್ಷಗಳ ಎಂ.ಪಿಗಳ ಗುಂಪೊಂದು ಕಾನೂನು ಕರಡು ತಯಾರಿಸುತ್ತಿದೆಯಂತೆ.

ಸರ್ಕಾರಿ ಕೆಲಸ ಕಾಂಟ್ರಾಕ್ಟು ದಳ್ಳಾಳಿ ಕೆಲಸ ಮಾಡುವವರು ಕೆಲವರಂತೂ ಬೋರ್ಡ್ ಹಾಕಿದ್ದಾರಂತೆ - ದುಡ್ಡು ಕೆಲಸ ತಗೊಳ್ಳಿ, ಗುಟ್ಟು ರಟ್ಟಾದರೆ ದುಡ್ಡು ವಾಪಸ್ - ಅಂತ.

ಥ್ಯಾಂಕ್ಯೂ ಟೋನಿ ಬ್ಲೇರ್!

ಪತ್ರಿಕೆಗಳು ಸುದ್ದಿ ತಲುಪಿಸಲೋ, ಜಾಹೀರಾತು ತಲುಪಿಸಲೋ?

"ಶ್ರೀಮಂತರು ಅವುಗಳ ಒಡೆಯರು, ಅವರು ಬೇರೆ ಶ್ರೀಮಂತರ ಜಾಹೀರಾತುಗಳನ್ನು ಅವಲಂಬಿಸಿರುತ್ತಾರೆ"- ಇದು ಬಹಳ ಹಿಂದೆ ಪ್ರಖ್ಯಾತ ಇಂಗ್ಲೀಷ್ ಸಾಹಿತಿ, ಚಿಂತಕ ಜಾರ್ಜ್ ಬರ್ನಾರ್ಡ್ ಶಾ ಬಂಡವಾಳಶಾಹಿ ವೃತ್ತ ಪತ್ರಿಕೆಗಳ ಬಗ್ಗೆ ಹೇಳಿದ ಮಾತು.

ಬಂಡವಾಳ ಶಾಹಿ ಪತ್ರಿಕೆಗಳದ್ದು ಸುದ್ದಿಯನ್ನು ಯಾವುದೇ ಹಸ್ತಕ್ಷೇಪವಿಲ್ಲದೆ ಎಲ್ಲರಿಗೂ-ಶ್ರೀಮಂತರಿಗೂ, ಬಡವರಿಗೂ, ಬಿಳಿಯರಿಗೂ, ಕರಿಯರಿಗೂ - ಒದಗಿಸುವ 'ವ್ಯವಹಾರ' ಎಂಬುದು ಈ ಶ್ರೀಮಂತ ಜನ ತತ್ಪರತೆಯಿಂದ ಪಸರಿಸುವ ಒಂದು ಮಿಥ್ಯೆ.

ಅಮೆರಿಕಾದಲ್ಲಿ ಈ ಶ್ರೀಮಂತರ ಕ್ಲಬ್ಬಿನ ಅಂದರೆ ಅಮೆರಿಕದ ವೃತ್ತ ಪತ್ರಿಕೆಗಳ ಮಾಲಕರ ಸಂಘದ ಮುಖ್ಯ ಆರ್ಥಿಕಜ್ಞ ಮಿಲ್ಸ್ ಗ್ರೋಪ್ಸ್‌ನ ಸಿನಿಕ ಮಾತನ್ನು ನೋಡಿ -"ಮೂಲಭೂತವಾಗಿ ನಾವು ಜಾಹೀರಾತುದಾರರಿಗೆ ಕಣ್ಣುಗುಡ್ಡೆಗಳನ್ನು ಪೂರೈಸುತ್ತೇವೆ"!

ಜಾಹೀರಾತುಗಳನ್ನು ಆಕರ್ಷಿಸಲು ವೃತ್ತಪತ್ರಿಕೆಗಳು, ವಾಣಿಜ್ಯ ಟಿ.ವಿ. ಜಾಲಗಳು ಎಷ್ಟು ಹೆಚ್ಚು ಓದುಗರನ್ನು/ದರ್ಶಕರನ್ನು ಸಾಧ್ಯವೋ ಅಷ್ಟು ಮಂದಿಯನ್ನು ತಲುಪಲು ಪ್ರಯತ್ನಿಸುತ್ತವೆ- ಆದರೆ ಜಾಹೀರಾತುದಾರರು ಬಯಸುವ ವಿಧಾನಗಳ ಮಂದಿಯನ್ನು ಮಾತ್ರ. ಇಲ್ಲಿ ಇನ್ನೊಂದು ಆಶ್ಚರ್ಯ ನಿಮಗೆ ಕಾದಿದೆ - ಈ ವಾಣಿಜ್ಯ ಟಿ.ವಿ. ಜಾಲಗಳು ಕೂಡಾ ಅವೇ ವೃತ್ತ ಪತ್ರಿಕೆಗಳ ಮಾಲಕರ ಕೈಯಲ್ಲೇ ಇರುತ್ತವೆ.

ಜಾಹೀರಾತುದಾರರು ಬಯಸುವ ವಿಧದ ಓದುಗರನ್ನು/ದರ್ಶಕರನ್ನು ಮಾತ್ರ ತಲುಪಲು ಪ್ರಯತ್ನಿಸಿದರೆ ಸಾಕು, ಏಕೆ? ಇದರ ಹಿಂದಿರುವ ತರ್ಕ ಸರಳ - ಬಡತನ ಪೀಡಿತ; ತಲೆಯ ಮೇಲೊಂದು ಸೂರು ಹೊಂದಲಾರದ ಓದುಗರನ್ನು ಆಕರ್ಷಿಸುವ ಪತ್ರಿಕೆಗಳಿಗೆ ರಿಯಲ್ ಎಸ್ಟೇಟ್ ಏಜೆಂಟರಾಗಲೀ, ಭಾರೀ ಬೆಲೆಯ ಅಂಗಡಿಗಳನ್ನು ಬಾಡಿಗೆಗೆ ನೀಡಲು, ಮಾರಲು ಕಾದಿರುವ ಜಾಹೀರಾತುದಾರರಾಗಲೀ ಏಕೆ ತಮ್ಮ ಜಾಹೀರಾತನ್ನು ನೀಡುತ್ತಾರೆ. 'ಖರ್ಚು ಮಾಡಲು' ಸಾಕಷ್ಟು ಆದಾಯ ಅಥವಾ ಸಾಲ ಸೌಲಭ್ಯ ಇರುವ ಓದುಗರು, ದರ್ಶಕರು ಮಾತ್ರ ಜಾಹೀರಾತುದಾರರಿಗೆ ಬೇಕು. ಆದ್ದರಿಂದ ಜಾಹಿರಾತುಗಳನ್ನು ಅವಲಂಬಿಸುವ ಪತ್ರಿಕೆಗಳಿಗೂ ಅವರೇ ಸಾಕು.

ಅಮೆರಿಕಾದಲ್ಲಿ ಈಗ ಕಂಡು ಬರುತ್ತಿರುವ ಕಟುಸತ್ಯ ಈ ಪ್ರಾಥಮಿಕ ಸತ್ಯಕ್ಕೆ ಅನುಗುಣವಾಗಿಯೇ ಇದೆ! ಅಲ್ಲಿ ಬಹಳಷ್ಟು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲೂ ಈ ಓದುಗರಲ್ಲಿ /ದರ್ಶಕರಲ್ಲಿ ಬಹಳಷ್ಟು ಜನ ಬಡವರೇ. ಇದಕ್ಕೆ ವೃತ್ತ ಪತ್ರಿಕೆಗಳ ಮಾಲಕರ ಪ್ರತಿಕ್ರಿಯೆಯೇನು? ತಾವು ಜಾಹೀರಾತು ನೀಡುವ ವಸ್ತುಗಳನ್ನು ಖರೀದಿಸುವ ಸಾಮರ್ಥ್ಯವಿಲ್ಲದವರಿಗೆ ತಮ್ಮ ಪತ್ರಿಕೆಗಳನ್ನು ಒದಗಿಸುವುದಕ್ಕೆ ಅರ್ಥವಿಲ್ಲ! ಆದ್ದರಿಂದ ಅವು ತಮ್ಮ ಪ್ರಸಾರ ಸಂಖ್ಯೆಯನ್ನು ಕಡಿತಗೊಳಿಸುತ್ತಿವೆ. ಬಡ ಪ್ರದೇಶಗಳಲ್ಲಿ ಮನೆ-ಮನೆಗೆ ಪತ್ರಿಕೆಗಳನ್ನು ಪೂರೈಸುವ ಕ್ರಮವನ್ನು ಕೈ ಬಿಡಲಾಗುತ್ತಿದೆ. ಅಂತಲ್ಲಿ ಸ್ಥಳೀಯ ಅಂಗಡಿಗಳಲ್ಲಿ ವಿಚಿಂಗಿಗಳಲ್ಲಿಯೂ ಪತ್ರಿಕೆಗಳು ಸಿಗವು.

'ವಾಶಿಂಗ್‌ಟನ್ ಪೋಸ್ಟ್' ದೈನಿಕದ ಜಿನೇವಾ ಓವರ್ಸ್ ಹೋಲ್ಸರ್ ಹೇಳುತ್ತಾರೆ. - "ಹಲವು ಪತಿಕೆಗಳು ಈಗಾಗಲೇ ಕೆಲವು ಕೆಂಪುಗೆರೆಗಳನ್ನು ಹಾಕುವ ಪದ್ಧತಿ ಆರಂಭಿಸಿದ್ದಾರೆ. ಜಾಹೀರಾತುದಾರರಿಗೆ ಆಸಕ್ತಿಯಿಲ್ಲದ ಪ್ರದೇಶಗಳಿಗೆ ಪತ್ರಿಕೆಗಳನ್ನು ಪೂರೈಸುತ್ತಿಲ್ಲ.

"ಮಿನಿಯಾಪೋಲಿಸ್ ಸ್ಟಾರ್ ಟ್ರಿಬ್ಯೂನ್' ಎಂಬ ಪತ್ರಿಕೆ ಈ ರೀತಿ ತನ್ನ ಪ್ರಸಾರಕರಲ್ಲಿ ೬% ಕಡಿತ ಮಾಡಿದೆಯಂತೆ. ಇನ್ನೊಂದೆಡೆ ಅದು ಬೆಲೆಯನ್ನು ಮೂರನೇ ಒಂದರಷ್ಟು ಹೆಚ್ಚಿಸಿದೆ. ಇದರಿಂದ ತನ್ನ ಪತ್ರಿಕೆ ಒಂದು ಇನ್ನಷ್ಟು ಆರೋಗ್ಯಕರ ವ್ಯವಹಾರವಾಗಿದೆಯೆಂದು ಅದರ ಪ್ರಕಾಶಕ ಬೆನ್ನುತಟ್ಟಿಕೊಳ್ಳುತ್ತಿದ್ದಾನಂತೆ.

ಮಿಲೆಸ್ ಗ್ರೋಪ್ಸ್ ಈ ನಿಲುವನ್ನು ಬೆಂಬಲಿಸುತ್ತಾರೆ. ಅಂತಹ ಪತ್ರಿಕಾ ಮಾಲಕರ ಸಂಘ ಕೂಡಾ 'ಕಮ್ಮಿ ಆದಾಯದ ಪ್ರದೇಶಗಳು ನೀವು ನಿಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಬೇಕಾದ ಜಾಗವಲ್ಲ' ಎನ್ನುತ್ತಾನೆ ಆತ.

(ಕೃಪೆ: ಆಸ್ಟ್ರೇಲಿಯಾ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ 'ಗಾರ್ಡಿಯನ್')


ವಾರದ ವ್ಯಂಗ್ಯಚಿತ್ರ

ದಿ ಹಿಂದೂನಲ್ಲಿ ಸುರೇಂದ್ರನ್



ಪದಬಂಧ 4

- ವಿಶ್ವ



ಎಡದಿಂದ ಬಲಕ್ಕೆ

1. ಕನ್ನಡದಲ್ಲಿರುವ ಚಂದ್ರಶೇಖರ ಆಝಾದ್ ಜೀವನಚರಿತ್ರೆ ಕೃತಿ (3)
2. ಚಿರಸ್ಥಾಯಿ ಸ್ಥಾನ (3)
6. ಇತಿಹಾಸವನ್ನು ಬದಲಿಸುವವರು ನಾಯಕರಲ್ಲ, ಇವರು (3)
7. ಮಗಳಿಗೆ ಹೀಗೆನ್ನುವರು (3)
9. ಸ್ವಲ್ಪವೇ ಎನ್ನುವುದು ಇದು(3)
11. ಶರೀರದ ಒಂದು ಮುಖ್ಯ ಅವಯವ(2)
12. ಸಾಹಿತ್ಯದ ಒಂದು ಪ್ರಕಾರ (2)
13. 1913 ರಲ್ಲಿ ಕ್ಯಾಲಿಫೋರ್ನಿಯದಲ್ಲಿ ಸ್ಥಾಪನೆಯಾಗಿ ಬ್ರಿಟಿಶರ ವಿರುದ್ಧ ಸಶಸ್ತ್ರ ದಂಗೆಗೆ ಪ್ರೇರಣೆ ನೀಡಿದ ಪಕ್ಷ (3)
16. ಸ್ವತಂತ್ರ ಭಾರತದಲ್ಲಿ ಸೇರದೆ ಹೇಯ ದಬ್ಬಾಳಿಕೆ ನಡೆಸಿದ ಆಂಧ್ರದ ಆಡಳಿತಗಾರರು(4)
17. ಚಂದ್ರಶೇಖರ್ ಆಜಾದ್ ಇಟ್ಟುಕೊಂಡಿದ್ದ ಗುಪ್ತ ಹೆಸರುಗಳಲ್ಲಿ ಇದೂ ಒಂದು

ಮೇಲಿನಿಂದ ಕೆಳಕ್ಕೆ

1. ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಕ್ರಾಂತಿಕಾರಿಗಳು ನಡೆಸುತ್ತಿದ್ದ ಒಂದು ಪತ್ರಿಕೆ (4)
2. ಭಗತ್ ಸಿಂಗ್ ಹೊಂದಿದ್ದ ಗುಪ್ತ ನಾಮ (4)
4. ಇದು ಶಿಕ್ಷೆ (2)
5. ಇದು ಬಡವರನ್ನು ಬೆಂಬಿಡದು(3)
8. ಪರಿಣತಿ ಪಡೆದಿರುವುದು (3)
10. ಇದೊಂದು ಪ್ರಾಣಿ (3)
14. ಧೈರ್ಯವಂತರನ್ನು ಹೀಗೆನ್ನುವರು(2)
15. ಸಂಧಾನದ ಪರ್ಯಾಯ ಪದ (2)

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.೧೨, ೧೮ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-೨೭ ಫೋನ್ ನಂ. ೨೨೭೬೪೬೨,
ವ್ಯವಸ್ಥಾಪಕ ಕಛೇರಿ: ನಂ.೨೪, ೫ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-೯ ಮುದ್ರಣ: ಕಂಠೀರವ ಆಫ್‌ಸೆಟ್, ನಂ.೬, ೭ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.೨೭